ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 22 ಮಂಗಳವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 96 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಇಂದು ಮೈಸೂರಲ್ಲಿ ಹಡಪದ ಅಪ್ಪಣ್ಣ ಜಯಂತಿ



ಮೈಸೂರು,ಜು.21– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಹಡಪದ ಅಪ್ಪಣ್ಣ ಜಯಂತಿಯನ್ನು ಜು.22ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮ ಉದ್ಘಾಟಿಸಲಿದ್ದು, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ.ಕೋಟೆ ಶಾಸಕ ಅನಿಲ್‌ಕುಮಾರ್.ಸಿ., ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಗೌರವ ಅತಿಥಿಗಳಾಗಿ ಉಪಸ್ಥಿತರಿರಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಚಾಮರಾಜನಗರ ಸಂಸದ ಸುನೀಲ್ ಬೋಸ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್ ಡಿ., ಟಿ.ಎಸ್.ಶ್ರೀವತ್ಸ, ದರ್ಶನ್ ದ್ರುವನಾರಾಯಣ್, ಜಿ.ಡಿ.ಹರೀಶ್‌ಗೌಡ ಹಾಗೂ ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ. ಯತೀಂದ್ರ ಎಸ್., ಮತ್ತು ವಿವೇಕಾನಂದ ಎಸ್. ಅತಿಥಿ ಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಮೈಸೂರಿನ ಸಾಹಿತಿ ಕಿರಣ್ ಸಿಡ್ಲೇಹಳ್ಳಿ ಉಪನ್ಯಾಸ ನೀಡಲಿದ್ದಾರೆ.

ವಿವಿಧ ಬೇಡಿಕೆ ಮುಂದಿಟ್ಟು ಮೈಸೂರಲ್ಲಿ ರೈತರ ಪ್ರತಿಭಟನೆ



ಮೈಸೂರಿನ ತಾಲೂಕು ಕಚೇರಿ ಮುಂಭಾಗ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ರೈತರು ಪ್ರತಿಭಟನೆ ನಡೆಸಿದರು.

ಮೈಸೂರು, ಜು.21(ಜಿಎ)–ದೇವನಹಳ್ಳಿಯ 1777 ಎಕರೆ ಭೂಸ್ವಾಧೀನವನ್ನು ಕೈಬಿಟ್ಟಿರುವುದನ್ನು ಕೂಡಲೇ ಗೆಜೆಟ್ ನೋಟಿಫಿಕೇಷನ್ ಹೊರಡಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘದಿಂದ ಮೈಸೂರಿನ ತಾಲೂಕು ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.

ರಾಜ್ಯ ಸರ್ಕಾರ ಕೊಟ್ಟ ಮಾತಿನಂತೆ ಭೂ ಸುಧಾರಣೆ ತಿದ್ದುಪಡಿ ಕಾಯ್ದೆಯನ್ನು ಮುಂಬರುವ ಅಧಿವೇಶನದಲ್ಲಿ ವಾಪಸ್ ಪಡೆದು ಎಪಿಎಂಸಿ ಕಾಯ್ದೆಯನ್ನು ಮತ್ತಷ್ಟು ಗಟ್ಟಿಗೊಳಿಸಬೇಕು. ಕೇಂದ್ರದ ನ್ಯಾಷನಲ್ ಕೃಷಿ ಮಾರುಕಟ್ಟೆ ಫ್ರೇಮ್ ವರ್ಕ್ ನೀತಿಯನ್ನು ತಿರಸ್ಕರಿಸಬೇಕು. ರಾಜ್ಯದಲ್ಲಿ ವಿದ್ಯುತ್ ಖಾಸಗೀಕರಣ ಮಾಡಬಾರದು. ಕಾರ್ಮಿಕ ತಿದ್ದುಪಡಿ ಕೋಡ್‌ಗಳನ್ನು ಜಾರಿಗೊಳಿಸಬಾರದು. ರಸಗೊಬ್ಬರದ ಕೊರತೆ ನೀಗಿಸಬೇಕು. ರೈತರು ಬೆಳೆದ ಬೆಳೆಗೆ ವೈಜ್ಞಾನಿಕ ಬೆಲೆ ಕೊಡಬೇಕು. ಭೂ ಮಂಜೂರಾತಿ ಹಕ್ಕನ್ನು ನೀಡಿ 70 ವರ್ಷದಿಂದ ಸಾಗುವಳಿ ಮಂಜೂರಾತಿ ಸಿಗದ ರೈತರಿಗೆ ಭೂ ಮಂಜೂರಾತಿ ದೊರಕಬೇಕು ಎಂದು ರೈತರು ಆಗ್ರಹಿಸಿದರು.

ಭೂ ವಿವಾದಗಳಿಂದಾಗುವ ಸಮಸ್ಯೆಗಳಿಗೆ ದುರಸ್ತಿ ಕಾರ್ಯ ಕಾಲಮಿತಿ ಒಳಗೆ ಪೂರ್ಣಗೊಳಿಸಬೇಕು. ಕೆರೆ–ಕಟ್ಟೆಗಳ ಒತ್ತುವರಿ ತೆರವುಗೊಳಿಸಬೇಕು. ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುಚ್ಛಕ್ತಿಯನ್ನು ಮೊದಲಿನಂತೆ ಅಕ್ರಮ–ಸಕ್ರಮಗೊಳಿಸಬೇಕು. ಮೈಸೂರು ತಾಲೂಕಿನ ಕೆಂಚಲಗೂಡು ಗ್ರಾಮದ ಸರ್ವೆ ನಂ.14ರಲ್ಲಿ 5 ಎಕರೆ 20 ಗುಂಟೆ ಜಮೀನನ್ನು ಉಳುಮೆ ಮಾಡುತ್ತಿದ್ದ ರೈತರಿಗೆ ನಿವೇಶನಕ್ಕಾಗಿ ಕಾಯ್ದಿರಿಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿ, ಅದೇ ಜಾಗವನ್ನು ಎಡಹಳ್ಳಿ ಗ್ರಾಮಸ್ಥರಿಗೆ ಸ್ಮಶಾನಕ್ಕೆ ನೀಡಿರುವುದನ್ನು ಕೈಬಿಡಬೇಕು. 400 ಎಕರೆ ಜಮೀನನ್ನು ಗಾಲ್ಫ್ ಕಂಪನಿಗೆ ನೀಡಿರುವ ಕೋಚನಹಳ್ಳಿ ರೈತರಿಗೆ ಅನ್ಯಾಯವಾಗಿದೆ. ಇದರ ಬಗ್ಗೆ ಗಮನಹರಿಸಬೇಕು. ಮೈಸೂರು ತಾಲೂಕು, ಗುರೂರು ಗ್ರಾಮದ ಸರ್ವೆ ನಂ.38ರ ಜಮೀನನ್ನು ಉಳುಮೆ ಮಾಡುವ ರೈತರಿಗೆ ಖಾತೆ ಮಾಡಿಕೊಡಲು ವಿಳಂಬವಾಗುತ್ತಿದ್ದು, ಸಮಸ್ಯೆ ಪರಿಹರಿಸಬೇಕು. ಸರ್ಕಾರಿ ಜಮೀನುಗಳ ಭೂ ಕಬಳಿಕೆ ವಿರುದ್ಧ ದಾವೆಗಳಿದ್ದು, ಸರಿಯಾದ ರೀತಿಯಲ್ಲಿ ನೋಡಿಕೊಂಡು ಸರ್ಕಾರಿ ಜಮೀನುಗಳನ್ನು ವಶಪಡಿಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಮಂಡಕಳ್ಳಿ ಮಹೇಶ್, ಕಲ್ಲೂರು ನಾಗನಹಳ್ಳಿ ಚಂದ್ರಶೇಖರ್, ಚಿಕ್ಕನಹಳ್ಳಿ ಎ.ರಾಘವೇಂದ್ರ, ಮೈನಾಗನಹಳ್ಳಿ ವಿಜಯೇಂದ್ರ, ಬಸಪ್ಪ ನಾಯಕ್ ಇನ್ನಿತರರು ಪಾಲ್ಗೊಂಡಿದ್ದರು.

ಬ್ರಾಹ್ಮಣ ಏಕೀಕೃತ ಪರಿಷತ್ ರಾಜ್ಯಾಧ್ಯಕ್ಷರಾಗಿ ಎನ್.ಎಂ.ನವೀನ್‌ಕುಮಾರ್ ಅಧಿಕಾರ ಸ್ವೀಕಾರ



ಅಖಿಲ ಭಾರತೀಯ ಬ್ರಾಹ್ಮಣ ಏಕೀಕೃತ ಪರಿಷತ್ತಿನ ಕರ್ನಾಟಕ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಎನ್.ಎಂ.ನವೀನ್‌ಕುಮಾರ್‌ರನ್ನು ಅಭಿನಂದಿಸಲಾಯಿತು.

ಮೈಸೂರು, ಜು.21– ಎನ್.ಎಂ.ನವೀನ್ ಕುಮಾರ್ ವಿಪ್ರ ಮಿತ್ರ ಬಳಗದ ವತಿಯಿಂದ ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ರಾಘವೇಂದ್ರ ಸ್ವಾಮಿಗಳ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡರೂ ಆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಎನ್.ಎಂ.ನವೀನ್‌ಕುಮಾರ್ ಅಖಿಲ ಭಾರತೀಯ ಬ್ರಾಹ್ಮಣ ಏಕೀಕೃತ ಪರಿಷತ್ತಿನ ಕರ್ನಾಟಕ ರಾಜ್ಯಾಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿಗೆ ಅರ್ಜಿ

ಮೈಸೂರು, ಜು. 21– ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ 2024–25ನೇ ಸಾಲಿನ ಅತ್ಯುತ್ತಮ ಕನ್ನಡ, ಇಂಗ್ಲಿಷ್ ವರದಿಗಳ ಹಾಗೂ ಛಾಯಾಚಿತ್ರ, ವಿದ್ಯುನ್ಮಾನ ವರದಿಗಳ ವಾರ್ಷಿಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಶಸ್ತಿಗೆ ಸಂಬಂಧಿಸಿದಂತೆ 2024ರ ಜೂ.1ರಿಂದ 2025ರ ಮೇ 31 ಅವಧಿಯಲ್ಲಿ ಪ್ರಕಟವಾದ ವರದಿ, ಛಾಯಾಚಿತ್ರ ಕಳುಹಿಸಬೇಕು. ಸಂಘದ ಸದಸ್ಯರಲ್ಲದವರಿಗೆ ಅವಕಾಶವಿಲ್ಲ. ಆಸಕ್ತರು 3 ನಕಲು ಪ್ರತಿಯ ಜೊತೆಗೆ ಒಂದು ಮೂಲ ಪ್ರತಿ ನೀಡಬೇಕು. ಆಸಕ್ತ ಛಾಯಾಗ್ರಾಹಕರು 8x2 ಅಳತೆಯ ಮೂರು ಛಾಯಾಚಿತ್ರ ಮತ್ತು ಫೋಟೋ ಪ್ರಕಟಗೊಂಡ ಪತ್ರಿಕೆಯ ಮೂಲ ಪ್ರತಿಯನ್ನು ಸಲ್ಲಿಸಬೇಕು. ವಿದ್ಯುನ್ಮಾನ ವರದಿ ನೀಡುವವರು ಸುದ್ದಿ ಮತ್ತು ದೃಶ್ಯದ ಕ್ಲಿಪ್ಪಿಂಗ್ ಒಳಗೊಂಡ ಮೂರು ಸಿಡಿ ಪ್ರತಿಗಳನ್ನು ನೀಡಬೇಕು. ಜು. 31ರೊಳಗೆ ನಿಮ್ಮ ವರದಿಯನ್ನು ಅಧ್ಯಕ್ಷರು / ಪ್ರಧಾನ ಕಾರ್ಯದರ್ಶಿ ಹೆಸರಿಗೆ ಸಂಘದ ವಿಳಾಸಕ್ಕೆ ಕಳುಹಿಸಬೇಕು. ಅನಂತರ ಬರುವ ಅರ್ಜಿ ವರದಿಗಳನ್ನು ಸ್ವೀಕರಿಸುವುದಿಲ್ಲ ಎಂದು ಧರ್ಮಾಪುರ ನಾರಾಯಣ್ ತಿಳಿಸಿದ್ದಾರೆ.

ಹೆಚ್ಚಿನ ವಿವರಗಳಿಗೆ ಮೊ. 97415 11340, 98456 53548, 97405 57277 ಸಂಪರ್ಕಿಸಬಹುದು.

ಜು.26, 27 ಪತ್ರಕರ್ತರ ಕ್ರೀಡಾಕೂಟ

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಪತ್ರಕರ್ತರು ಮತ್ತು ಕುಟುಂಬದ ಸದಸ್ಯರಿಗೆ ಜು.26 ಮತ್ತು 27ರಂದು ಕ್ರೀಡಾಕೂಟ ಆಯೋಜಿಸಲಾಗಿದೆ.

ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರಿನ ಓವಲ್ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾವಳಿ ಹಾಗೂ 27 ರಂದು ಪತ್ರಕರ್ತರು ಮತ್ತು ಕುಟುಂಬದ ಸದಸ್ಯರಿಗೆ ಆಟೋಟ ಸ್ಪರ್ಧೆ, ಮನರಂಜನಾ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಕೆ.ದೀಪಕ್, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್ ತಿಳಿಸಿದ್ದಾರೆ.

ಕಣ್ಣಿನ ಉಚಿತ ತಪಾಸಣೆ; ಶಸ್ತ್ರಚಿಕಿತ್ಸಾ ಶಿಬಿರ



ಮೈಸೂರು,ಜು.21–ಮೈಸೂರಿನ ಅಮೃತಾಂಶು ಟ್ರಸ್ಟ್, ನಾರಾಯಣ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜಿಲ್ಲಾ ಅಂಧತ್ವ ನಿಯಂತ್ರಣ ಸಂಸ್ಥೆ, ಮೈಸೂರು ಜಿಲ್ಲಾ ಸಂಚಾರಿ ನೇತ್ರ ಚಿಕಿತ್ಸಾ ಘಟಕ ಮತ್ತು ಕೆ.ಆರ್.ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಜು.24ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1ರವರೆಗೆ ಚಾಮುಂಡಿಪುರಂ ಮೇದರ ಕೇರಿ 5ನೇ ಮುಖ್ಯ ರಸ್ತೆಯಲ್ಲಿರುವ 2767, ಪಾಂಚಜನ್ಯದಲ್ಲಿ ಉಚಿತ ಕಣ್ಣಿನ ತಪಾಸಣೆ, ಶಸ್ತ್ರಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಕಣ್ಣಿನ ಪೊರೆ, ಹತ್ತಿರ ಮತ್ತು ದೂರದೃಷ್ಟಿ, ಗ್ಲೋಕೋಮಾ, ವಾರೆಕಣ್ಣು, ನೀರು ಸೋರುವಿಕೆ, ಕಣ್ಣಿನಲ್ಲಿ ಬಿರುಕು ಉಂಟಾಗುವುದು, ರಾತ್ರಿ ಕುರುಡುತನ ಸಮಸ್ಯೆಗಳನ್ನು ಪರೀಕ್ಷಿಸಲಾಗುವುದು. ಶಿಬಿರಾರ್ಥಿಗಳು ಆಧಾರ್ ಕಾರ್ಡ್, ಬಿಪಿಎಲ್ ಕಾರ್ಡ್ ಜೆರಾಕ್ಸ್ ತರತಕ್ಕದ್ದು. ಹೆಚ್ಚಿನ ವಿವರಗಳಿಗೆ ಮೊ. 9945270646, 9742634110 ಸಂಪರ್ಕಿಸಬಹುದು.

ಅಂತರರಾಷ್ಟ್ರೀಯ ವುಶು ಪಂದ್ಯಾವಳಿಗೆ ಪ್ರಣತಿ ಆಯ್ಕೆ



ಮೈಸೂರು,ಜು.21–ಉತ್ತರಾಖಂಡದ ಡೆಹ್ರಾಡೂನ್‌ನ ರಾಯ್‌ಪುರದ ಮಹಾರಾಣಾ ಪ್ರತಾಪ್ ಸ್ಪೋರ್ಟ್ಸ್ ಕ್ರೀಡಾಂಗಣದ ಹಿಮಾದ್ರಿ ಹಾಲ್‌ನಲ್ಲಿ ಮೇ 2 ರಿಂದ 6ರವರೆಗೆ ನಡೆದ ವುಶು ಅಸೋಸಿಯೇಷನ್ ಆಫ್ ಇಂಡಿಯಾದ ಆಯ್ಕೆ ಟ್ರಯಲ್ಸ್‌ನಲ್ಲಿ, ಪೊಲೀಸ್ ಪಬ್ಲಿಕ್ ಶಾಲೆಯ ನಗರದ ಬಾಲ ಪ್ರತಿಭೆ ಪ್ರಣತಿ ಜಿ ಅವರು ಬಟುಮಿ ಅಂತರರಾಷ್ಟ್ರೀಯ ವುಶು ಚಾಂಪಿಯನ್‌ಶಿಪ್–2025ರಲ್ಲಿ ಭಾರತವನ್ನು ಪ್ರತಿನಿಧಿಸಲು ಆಯ್ಕೆಯಾಗಿದ್ದಾರೆ.

ಚಾಂಪಿಯನ್‌ಶಿಪ್ ಆಗಸ್ಟ್ 1ರಿಂದ 6ರವರೆಗೆ ಜಾರ್ಜಿಯಾದ ಬಟುಮಿ ಯಲ್ಲಿ ನಡೆಯಲಿದೆ. ಅಂತರರಾಷ್ಟ್ರೀಯ ವುಶು ಪಂದ್ಯಾವಳಿಯಲ್ಲಿ ಭಾಗವಹಿಸುವ ಭಾರತದ ಅತ್ಯಂತ ಕಿರಿಯ ಆಟಗಾರ್ತಿ ಯಾಗಿದ್ದಾರೆ. ಪ್ರಣತಿ ಮೈಸೂರಿನ ಗಾಯತ್ರಿಪುರಂ ನಿವಾಸಿಗಳಾದ ಸಂಗೀತಾ ಮತ್ತು ಗಿರಿಧರ್ ದಂಪತಿಯ ಪುತ್ರಿ. ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಪಾರ್ಥಿಪಾ ಮತ್ತು ದರ್ಶನ್ ಅವರಿಂದ ತರಬೇತಿ ಪಡೆಯುತ್ತಿದ್ದಾರೆ

ಸಿದ್ದರಾಜು ಹುಟ್ಟುಹಬ್ಬ ಆಚರಣೆ



ಮೈಸೂರಿನ ಅಶೋಕಪುರಂನ ಆದಿಕರ್ನಾಟಕ ಮಹಾಸಂಸ್ಥೆಯ ಅಧ್ಯಕ್ಷ ಸಿದ್ದರಾಜು.ಪಿ (ಸುನಿಲ್) ಅವರ ಹುಟ್ಟುಹಬ್ಬವನ್ನು ಸಾಮಾಜಿಕ ಸೇವಾ ಕಾರ್ಯಗಳೊಂದಿಗೆ ಆಚರಿಸಲಾಯಿತು. ಚಿಕ್ಕಗರಡಿ ಸಂಘದ ಅಧ್ಯಕ್ಷ ನಾಗರಾಜು (ಬಿಲ್ಲಯ್ಯ), ಪೈಲ್ವಾನ್ ಕೃಷ್ಣ, ದೊರೆಸ್ವಾಮಿ, ನಗರಪಾಲಿಕೆಯ ಪ್ರಸಾದ್, ಮಹದೇವು, ಧನಗಳ್ಳಿ ಸ್ವಾಮಿ ಹಾಗೂ ಬಳಗದ ಸದಸ್ಯರು ಉಪಸ್ಥಿತರಿದ್ದರು.

ಜು.27ಕ್ಕೆ ದಿವ್ಯೋಪಾಸನ ಕಾರ್ಯಕ್ರಮ

ಮೈಸೂರು, ಜು.21(ಜಿಎ)–ಪರಮಹಂಸ ಯೋಗ ಮಹಾವಿದ್ಯಾಲಯ, ಇಂಟರ್ ನ್ಯಾಷನಲ್ ಯೋಗ ಶಾಲೆಗಳ ಸಂಯುಕ್ತಾಶ್ರಯದಲ್ಲಿ ಜು.27ರಂದು ನಂಜು ಮಳಿಗೆ ಹತ್ತಿರದ ಶಿವಾನಂದ ಜ್ಞಾನಾಲಯದಲ್ಲಿ ಬೆಳಗ್ಗೆ 10ಗಂಟೆಗೆ ಕುಂಡಲಿನಿ ಶಕ್ತಿಯ ಜಾಗೃತಿಯಿಂದ ಆತ್ಮದ ಬೆಳಕು ಕಾಣುವ ದಿವ್ಯೋಪಾಸನ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಯೋಗ ಮಹಾವಿದ್ಯಾಲಯದ ಅಧ್ಯಕ್ಷ ಯೋಗ ಪ್ರವೀಣ ಶಿವಪ್ರಕಾಶ್ ಈ ವಿಷಯ ತಿಳಿಸಿ, ಕಾರ್ಯಕ್ರಮಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ.ಎಸ್.ಪಿ.ಯೋಗಣ್ಣ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಪ್ರವೇಶ ಉಚಿತವಿದ್ದು, ಕುಂಡಲಿನಿ ಶಕ್ತಿ ಕುರಿತು ಸದ್ಗುರು ಶ್ರೀರಾಮಜೀ ಅವರು ಸರಳ, ಸ್ಪಷ್ಟ ಹಾಗೂ ಜೀವನದ ಉದಾಹರಣೆಗಳ ಮೂಲಕ ಉಪನ್ಯಾಸ ನೀಡಲಿದ್ದಾರೆ. ಹೆಚ್ಚಿನ ಮಾಹಿತಿಗೆ ದೂ. 70901 57993 ಅನ್ನು ಸಂಪರ್ಕಿಸಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪ್ರಕಾಶ್, ಸೀಮಾ, ಮನು, ಇಳೈ ಆಳ್ವಾರ್ ಸ್ವಾಮೀಜಿ ಉಪಸ್ಥಿತರಿದ್ದರು.

ಮೆಡಿಕಲ್ ವಿದ್ಯಾರ್ಥಿ ಆತ್ಮಹತ್ಯೆ



ಮಂಡ್ಯ, ಜು.21– ಮೆಡಿಕಲ್ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಮಿಮ್ಸ್ ಮೆಡಿಕಲ್ ಕಾಲೇಜಿನ ಹಾಸ್ಟೆಲ್‌ನಲ್ಲಿ ನಡೆದಿದೆ.

ಕೊಪ್ಪಳ ಜಿಲ್ಲೆ ಯಲಬುರ್ಗ ತಾಲೂಕಿನ ಉಮೇಶ್ ಎಂಬುವರ ಮಗ ಭರತ್ ಯತ್ತಿನಮನೆ (22) ಆತ್ಮಹತ್ಯೆ ಮಾಡಿಕೊಂಡ ಮೆಡಿಕಲ್ ವಿದ್ಯಾರ್ಥಿ. ಮಿಮ್ಸ್ ಕಾಲೇಜಿನಲ್ಲಿ ಮೊದಲ ವರ್ಷದ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದ ಭರತ್, ತಡರಾತ್ರಿ ಹಾಸ್ಟೆಲ್‌ನಲ್ಲಿ ಯಾರು ಇಲ್ಲದ ಸಮಯದಲ್ಲಿ ನೇಣಿಗೆ ಶರಣಾಗಿದ್ದಾನೆ. ಮಂಡ್ಯ ಮೆಡಿಕಲ್ ಕಾಲೇಜಿನ ವೈದ್ಯಕೀಯ ಅಧೀಕ್ಷಕ ಡಾ. ನರಸಿಂಹಸ್ವಾಮಿ, ವಿದ್ಯಾರ್ಥಿ ಆತ್ಮಹತ್ಯೆಗೆ ಕಾರಣ ತಿಳಿದು ಬಂದಿಲ್ಲ. ರಾತ್ರಿ 12 ಗಂಟೆವರೆಗೆ ಸ್ನೇಹಿತರ ಜೊತೆ ಮಾತನಾಡಿದ ಬಳಿಕ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಬೆಳಗ್ಗೆ ಆತನ ಸ್ನೇಹಿತರು ನೋಡಿದಾಗ ಆತ್ಮಹತ್ಯೆ ವಿಚಾರ ತಿಳಿದು ಬಂದಿದೆ ಎಂದರು.

'ಪೌರಾಣಿಕ ನಾಟಕತ್ರಯ', 'ಬಸವಣ್ಣ ಸ್ವಾಮಿಗಳ ಸಾಹಿತ್ಯಾವಲೋಕನ' ಕೃತಿಗಳ ಬಿಡುಗಡೆ



ಲಿಂಗೈಕ್ಯ ಬಸವಣ್ಣ ಸ್ವಾಮಿಗಳ ವಿರಚಿತ 'ಪೌರಾಣಿಕ ನಾಟಕತ್ರಯ' ಮತ್ತು ಬಿ.ವಿ.ಉಮಾಕಾಂತ ಭೋಗಯ್ಯಹುಂಡಿ ಸಂಪಾದನೆಯ 'ಬಸವಣ್ಣ ಸ್ವಾಮಿಗಳ ಸಾಹಿತ್ಯಾವಲೋಕನ' ಕೃತಿಗಳನ್ನು ಭಾನುವಾರ ಬಿಡುಗಡೆಗೊಳಿಸಲಾಯಿತು.

ಮೈಸೂರು, ಜು.21(ಜಿಎ)–ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ ಆವರಣದ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಲಿಂಗೈಕ್ಯ ಬಸವಣ್ಣ ಸ್ವಾಮಿಗಳ ವಿರಚಿತ 'ಪೌರಾಣಿಕ ನಾಟಕತ್ರಯ' ಮತ್ತು ಬಿ.ವಿ.ಉಮಾಕಾಂತ ಭೋಗಯ್ಯಹುಂಡಿ ಸಂಪಾದನೆಯ 'ಬಸವಣ್ಣ ಸ್ವಾಮಿಗಳ ಸಾಹಿತ್ಯಾವಲೋಕನ' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ. ನಾಗರಾಜಮೂರ್ತಿ ಅವರು ಮಾತನಾಡಿ, ಪುರಾಣದ ವ್ಯಕ್ತಿಗಳು ಇಂದಿಗೂ ನಮ್ಮ ನಡುವೆ ಉಳಿದಿದ್ದರೆ ಅದಕ್ಕೆ ರಂಗಭೂಮಿ ಗಾಯಕರು, ತತ್ವಪದಕಾರರು, ಜಾನಪದಕಾರರು ಕಾರಣ. ಅವರು ನೂರಾರು ಮಂಡಳಿಗಳನ್ನು ರಚಿಸಿಕೊಂಡು ತತ್ವಪದಗಳ ಮೂಲಕ ವಚನಗಳನ್ನು ಜನಸಾಮಾನ್ಯರಿಗೆ ತಲುಪಿಸಿದ್ದಾರೆ. ರಾಜ್ಯ ಸರ್ಕಾರ ಬಸವಣ್ಣ ಅವರನ್ನು ಸಾಂಸ್ಕೃತಿಕ ನಾಯಕ ಎಂದು ಘೋಷಿಸಿದೆ. ಇದರ ಅಂಗವಾಗಿ ಸೆ.1ರಿಂದ ಸೆ.30ರವರೆಗೆ ಬೀದರ್‌ನ ಬಸವ ಕಲ್ಯಾಣದಿಂದ ಹಿಡಿದು ಬೆಂಗಳೂರಿನವರೆಗೆ ನಾಡಿನಾದ್ಯಂತ ಎಲ್ಲಾ ಕರ್ನಾಟಕದ ಸ್ವಾಮೀಜಿಗಳು ಸೇರಿ ಬಸವ ದರ್ಶನವನ್ನು ಮಾಡುವ ಜನರನ್ನು ಸಂಘಟಿಸುವ ಕೆಲಸ ಮಾಡುತ್ತಿದೆ ಎಂದರು.

ಪ.ಗು.ಹಳಕಟ್ಟಿ ಅವರು ವಚನ ಸಾಹಿತ್ಯವನ್ನು ಹೊರತಂದು ಪ್ರಕಟಿಸಿದ್ದಾರೆ. ಇದರಿಂದ ವಚನ ಜನಮಾನಸವಾಗಿದೆ. ಬಸವಣ್ಣ ಕಟ್ಟಿದ ಲಿಂಗಾಯತ ಧರ್ಮ ಅತ್ಯಂತ ಮೊದಲ ಮಾನವೀಯ ಧರ್ಮ ಹಾಗೂ ರಾಷ್ಟ್ರಕವಿ ಕುವೆಂಪು ಪ್ರತಿಪಾದಿಸಿದ ವಿಶ್ವಮಾನವ ಸಂದೇಶ ಎರಡು ಸಮಾಜದ ವಿಕಾಸಕ್ಕೆ ದಾರಿ ಮಾಡಿಕೊಟ್ಟಿದೆ. ಅದಕ್ಕೆ ಬಸವಣ್ಣನವರು ದಯೆಯೇ ಇಲ್ಲದ ಧರ್ಮ ಯಾವುದಿದೆ ಎಂದು ಪ್ರಶ್ನಿಸಿದ್ದರು. ಹೀಗಾಗಿ ಇಂದು ಶರಣ ಪರಂಪರೆಯನ್ನು ಉಳಿಸುವ ಕೆಲಸ ಅಗತ್ಯವಾಗಿದೆ ಎಂದರು.


ಚಂದ್ರಶೇಖರ ಕಂಬಾರರು ಬಿಜ್ಜಳನ ಹತ್ಯೆಯನ್ನು ಶರಣರು ಮಾಡಿಲ್ಲವೆಂಬುದನ್ನು ಅವರ ನಾಟಕದಲ್ಲಿ ಅಳವಡಿಸಿದ್ದಾರೆ. ಇದನ್ನು ಕಂಬಾರರು ಬರೆದಿದ್ದನ್ನು ಕಂಡು ವಿಸ್ಮಯ ಎನಿಸಿತ್ತು. ಜತೆಗೆ ಅವರ ದೃಷ್ಟಿಕೋನದ ಬಗ್ಗೆ ಗೌರವ ಮೂಡಿತ್ತು. ಆದರೆ 70 ವರ್ಷಗಳ ಹಿಂದೆಯೇ ಆ ಪ್ರಸಂಗವನ್ನು ಬಸವಣ್ಣಸ್ವಾಮಿಗಳು ಪ್ರಸ್ತಾಪಿಸಿದ್ದಾರೆ. ಬೇಕಾದರೆ ಕಂಬಾರ ಬರವಣಿಗೆ ಹಾಗೂ ಬಸವಣ್ಣ ಸ್ವಾಮಿಗಳ ಬರವಣಿಗೆಗಳನ್ನು ತಾಳೆ ಹಾಕಬಹುದು. ಇಬ್ಬರ ಬರಹದಲ್ಲೂ ವೈಚಾರಿಕ ಸಂಗತಿಗಳು ಇದ್ದವು ಎಂದರು. ಕಾರ್ಯಕ್ರಮದಲ್ಲಿ ದೇವನೂರು ಗುರುಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದ ಮಹಾಂತ ಸ್ವಾಮೀಜಿ, ಸೋಮಹಳ್ಳಿ ವೀರಸಿಂಹಾಸನ ಶಿಲಾಮಠದ ಸಿದ್ಧಮಲ್ಲ ಸ್ವಾಮೀಜಿ, ನಿವೃತ್ತ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಸದಾಶಿವಮೂರ್ತಿ, ಸಂವಹನ ಪ್ರಕಾಶನ ಡಿ.ಎನ್. ಲೋಕಪ್ಪ ಇನ್ನಿತರರು ಉಪಸ್ಥಿತರಿದ್ದರು.

ಟಿ.ವಿ.ವೆಂಕಟಾಚಲಶಾಸ್ತ್ರಿಗಳ ಪತ್ನಿ ನಿಧನ



ಮೈಸೂರು, ಜು.21–ಹಿರಿಯ ವಿದ್ವಾಂಸರಾದ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರ ಪತ್ನಿ ಆರ್.ವೆಂಕಟಲಕ್ಷ್ಮೀ (87) ಶನಿವಾರ ನಿಧನರಾದರು. ವಯೋಸಹಜ ಆರೋಗ್ಯ ಸಮಸ್ಯೆಗಳಿಂದ ಅವರು ಬಳಲುತ್ತಿದ್ದರು. ಅವರು ಪತಿ ಟಿ.ವಿ.ವೆಂಕಟಾಚಲಶಾಸ್ತ್ರಿ, ಮೂವರು ಪುತ್ರಿಯರು ಹಾಗೂ ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಚಾಮುಂಡಿಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಬಿ.ಲಕ್ಷ್ಮಣ್



ಕೆ.ಜಿ.ಕೊಪ್ಪಲಿನ ಚಾಮುಂಡೇಶ್ವರಿ ದೇವಸ್ಥಾನದ ಸಹ ಕಾರ್ಯದರ್ಶಿ, ಮೈಸೂರು ವೈದ್ಯಕೀಯ ಕಾಲೇಜಿನ ನಿವೃತ್ತ ನೌಕರರೂ ಆದ ಮೈಸೂರಿನ ಕೆ.ಜಿ.ಕೊಪ್ಪಲು 6ನೇ ಕ್ರಾಸ್ ನಿವಾಸಿ ಬಿ.ಲಕ್ಷ್ಮಣ್(72) ಸೋಮವಾರ ನಿಧನರಾದರು. ಮೃತರು ಪತ್ನಿ ಲಕ್ಷ್ಮಮ್ಮ, ಪುತ್ರರಾದ ಅನಿಲ್, ಅರುಣ್, ಪ್ರಕಾಶ್, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಸಂಜೆ ಕನ್ನೇಗೌಡಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು.


ಇವರ ನಿಧನಕ್ಕೆ ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ, ಮೈಸೂರು ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ, ಪಾಲಿಕೆ ಮಾಜಿ ಸದಸ್ಯ ಎಂ.ಶಿವಕುಮಾರ್, ಎಸ್.ಬಾಲು ಹಾಗೂ ಕೊಪ್ಪಲ್ ರಾಜಣ್ಣ, ಮೆರಪ್ಪ, ಮಹೇಶ್ ತೀವ್ರ ಸಂತಾಪ ಸೂಚಿಸಿದ್ದಾರೆ.

ಶಿವನಂಜಪ್ಪ




ಪಾಂಡವಪುರ, ಜು.21– ತಾಲೂಕಿನ ಚಾಗಶೆಟ್ಟಹಳ್ಳಿ ಗ್ರಾಮದ ನಿವಾಸಿ ಶಿವನಂಜಪ್ಪ(85) ಭಾನುವಾರ ರಾತ್ರಿ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಟ್ಟಸ್ವಾಮಿ



ಮೈಸೂರು, ಜು.21– ಮೈಸೂರಿನ ಸಿದ್ಧಾರ್ಥನಗರ ನೀತಿ ಮಾರ್ಗದ ನಿವಾಸಿ, ನಂದಾ ಹೋಟೆಲ್‌ನ ಮಾಲೀಕರಾದ ಪುಟ್ಟಸ್ವಾಮಿ(85) ಅವರು ಇಂದು ಬೆಳಗ್ಗೆ ನಿಧನರಾದರು. ಅವರು ಪತ್ನಿ, ಇಬ್ಬರು ಪುತ್ರಿಯರು, ಪುತ್ರ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಪುಟ್ಟಸ್ವಾಮಿ ಅವರ ನಿಧನಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸೇರಿದಂತೆ ಅನೇಕ ಹೋಟೆಲ್ ಉದ್ಯಮಿಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.07.2025 ಮಂಗಳವಾರ, ಮಳೆ ನಕ್ಷತ್ರ: ಪುಷ್ಯ, 20.07.2025ರಿಂದ 2.08.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಯೋಗ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಮತ್ತು ಅಲ್ಸರ್‌ಗಳ ಬಗ್ಗೆ ಚಿಕಿತ್ಸಾ ಶಿಬಿರ, ಇಸುಬು ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ.
- **ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಶ್ರೀ ಚಾಮುಂಡೇಶ್ವರಿ ದೇವಸ್ಥಾನ ಸೇವಾ ಸಮಿತಿ:** ಅಮ್ಮನವರ ಜನ್ಮೋತ್ಸವ ಪ್ರಯುಕ್ತ ಶ್ರೀ ಚಾಮುಂಡೇಶ್ವರಿ ಅಮ್ಮನವರ ಹಬ್ಬ ಮತ್ತು ಅಮ್ಮನವರ ಉತ್ಸವ, ಶಾಂತಿಪೂಜೆ, ಸ್ಥಳ: ದೇವಸ್ಥಾನದ ಪ್ರಾಂಗಣ, ಸೂರ್ಯ ಬೇಕರಿ ವೃತ್ತ, ಎಸ್‌ಬಿಐ ರಸ್ತೆ, ಹೆಬ್ಬಾಳು.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೀತಿಬಕುಷ್ಟ (ಸೋರಿಯಾಸಿಸ್, ಮಕ್ಕಳಲ್ಲಿ ಕಂಡುಬರುವ ನೆಗಡಿ, ಕೆಮ್ಮು, ಅಸ್ತಮಾ ಮತ್ತು ಅಲರ್ಜಿ ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಡಾ.ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್:** ಡಾ.ಶಿವರಾಜ್‌ಕುಮಾರ್ ಅವರ 63ನೇ ಜನ್ಮದಿನೋತ್ಸವ, ಚಿತ್ರರಂಗದಲ್ಲಿ 40 ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಮೈಸೂರು ಜಯರಾಂ ಅವರಿಂದ ಡಾ.ಶಿವರಾಜ್ ಕುಮಾರ್ ಹಿಟ್ಸ್ ಸಂಗೀತ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾಂಗಣ, ಸಂಜೆ 5 ಗಂಟೆಯಿಂದ.
- **ಭವಾನಿ ಅಸೋಸಿಯೇಟ್ಸ್ :** ಐಟಿಆರ್ ಫಾರ್ಮ್ ಬದಲಾವಣೆಗಳು ಮತ್ತು ವರದಿ ಮಾಡುವ ಸ್ವರೂಪಗಳ ಅವಲೋಕನ ಕುರಿತು ವಿಚಾರ ಸಂಕಿರಣ, ಉಪಸ್ಥಿತರು: ಚಾರ್ಟರ್ಡ್ ಅಕೌಂಟೆಂಟ್ ಸಾಯಿ ರಕ್ಷಿತ್, ಸ್ಥಳ: ರೋಟರಿ ಚಿಲ್ಡ್ರನ್ಸ್ ಲೈಬ್ರರಿ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.
- **ಪ್ರವಾಸಿ ವಾಹನ ಚಾಲಕರ ಸಹಕಾರ ಸಂಘ:** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎಸ್.ನಾಗರಾಜು, ಸ್ಥಳ: ಹೋಟೆಲ್ ಮಾಲೀಕರ ಸಂಘದ ಆವರಣ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಟಿ.ಎಸ್.ಸ್ನೇಹಾ ಹಾಗೂ ಎಂ.ಡಿ.ಸುಮತಿ ಮುರಾರಿ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಎಂ.ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್.ಎಸ್., 8.30 ವಿಶೇಷ ಕಾರ್ಯಕ್ರಮ ಸರಣಿ ಆಕಾಶವಾಣಿ 90–ನೆನಪುಗಳ ಹೊತ್ತು, ಪ್ರೊ. ಎಂ.ವಿ.ಗೋಪಾಲಸ್ವಾಮಿ ಅವರ ನೆನಪುಗಳು–ಭಾರತಿ ಘನಶ್ಯಾಂ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ–ಉಮೇಶ್ ಎಸ್.ಎಸ್., 9.05 ಪ್ರಾಯೋಜಿತ ಕಾರ್ಯಕ್ರಮ ಆರೋಗ್ಯಧಾರೆ, 9.35 ಸರ್ಕೋಮ– ಜಾಗೃತಿ ಕುರಿತ ಪ್ರಾಯೋಜಿತ ಕಾರ್ಯಕ್ರಮ, 9.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರಫೋನ್ ಇನ್ ಕಾರ್ಯಕ್ರಮ, 10.30 ಕರ್ನಾಟಕ ಶಾಸ್ತ್ರೀಯ ಸಂಗೀತ ಮೈಸೂರು ಆಕಾಶವಾಣಿ ಕಲಾವಿದರಿಂದ ವಾದ್ಯವೃಂದ ನಿರ್ದೇಶನ ಕೆ.ಪಿ.ಉಪಾಧ್ಯಾಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ–ಎಸ್.ಲಕ್ಷ್ಮೀನಾರಾಯಣ, ಆರ್.ಲೋಕೇಶ್ವರಿ ಹಾಗೂ ಬಿ.ಜಿ.ಕವಿತಾ. ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಓ.ಎಸ್.ಅರುಣ–ಹಾಡುಗಾರಿಕೆ, 4.00 ಕಥಾಕಾಲಕ್ಷೇಪ ಭೂ ಕೈಲಾಸ, ಪ್ರಸ್ತುತಿ–ಗುರುರಾಜುಲು ನಾಯ್ಡು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮತ್ಸ ತರಂಗ ಮೀನು ಸಾಕಾಣಿಕೆ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಕೆರೆ ಅಂಚಿನಲ್ಲಿ ಮೀನುಮರಿ ಪಾಲನೆ ಈ ಕುರಿತು ಮೀನುಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಕೆ.ಸಿ.ವಿಕಾಸ್ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ: ಬಿ.ದಿಗ್ವಿಜಯ್, 8.00 ಸಂಸತ್ ಸಮೀಕ್ಷಾ, 8.15 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಜುಗಲ್ ಬಂದಿ ಹರಿಪ್ರಸಾದ ಚೌರಾಸಿಯಾ ವೇಣುವಾದನ ಹಾಗೂ ಡಾ.ಎಂ.ಬಾಲಮುರಳಿ ಕೃಷ್ಣ–ಹಾಡುಗಾರಿಕೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್.ರಾಜೇಶ್ವರಿ–ಹಾಡುಗಾರಿಕೆ, 10.00 ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 22 ಮಂಗಳವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 96 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾದಿಂದ 50:50 ನಿವೇಶನ ಹಂಚಿಕೆ ಹಗರಣ

‘ಸುಪ್ರೀಂ’ನಿಂದ ಸಿಎಂ ಸಿದ್ದರಾಮಯ್ಯ ಪತ್ನಿ ವಿರುದ್ಧದ ಇಡಿ ಮೇಲ್ಮನವಿ ವಜಾ

■ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ನೇತೃತ್ವದ ಪೀಠದಿಂದ ಮಹತ್ವದ ಆದೇಶ
■ ರಾಜಕಾರಣಿಗಳು ರಾಜಕೀಯ ಮಾಡಿಕೊಳ್ಳಲಿ; ಇದರಲ್ಲಿ ನಿಮಗೆ ಏನು ಕೆಲಸ; ಇಡಿಗೆ ತರಾಟೆ

ಬೆಂಗಳೂರು, ಜು.21(ಕೆಎಂಶಿ)– ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ವತಿಯಿಂದ ಪಡೆದಿರುವ ಬಿಡಿ ನಿವೇಶನಗಳ ಹಂಚಿಕೆ ವಿವಾದಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇ.ಡಿ.)ವನ್ನು ರಾಜಕೀಯವಾಗಿ ಬಳಕೆ ಮಾಡಿಕೊಳ್ಳುತ್ತಿರುವುದಕ್ಕೆ ಸುಪ್ರೀಂಕೋರ್ಟ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ.



ಸಿದ್ದರಾಮಯ್ಯ ಪತ್ನಿ ಬಿ.ಎಂ.ಪಾರ್ವತಿ ಅವರಿಗೆ ನೀಡಲಾದ ಸಮನ್ಸ್ ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್ ತೀರ್ಪು ಪ್ರಶ್ನಿಸಿ ಇ.ಡಿ. ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದ್ದಲ್ಲದೆ, ಜಾರಿ ನಿರ್ದೇಶನಾಲಯವನ್ನು ರಾಜಕೀಯವಾಗಿ ಬಳಸಿಕೊಳ್ಳುತ್ತಿರುವುದು ಸರಿಯಲ್ಲ ಎಂದಿದೆ.



ಬಿ.ಎಂ.ಪಾರ್ವತಿ

ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ಮುಖ್ಯನ್ಯಾಯಮೂರ್ತಿ ಬಿ.ಆರ್.ಗವಾಯಿ ಮತ್ತು ನ್ಯಾಯಮೂರ್ತಿ ಕೆ.ವಿನೋದ್ ಚಂದ್ರನ್ ಒಳಗೊಂಡ ಪೀಠ, ರಾಜಕೀಯ ಕದನಕ್ಕೆ ಇ.ಡಿ. ಏಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಪ್ರಶ್ನಿಸಿದರು.

ಅಲ್ಲದೆ ಇಡಿಯನ್ನು ತರಾಟೆಗೆ ತೆಗೆದುಕೊಂಡಿರುವ ಮುಖ್ಯ ನ್ಯಾಯಮೂರ್ತಿಗಳು, ‘ರಾಜಕಾರಣಿಗಳು ರಾಜಕೀಯ ಮಾಡಿಕೊಳ್ಳಲಿ, ಇದರಲ್ಲಿ ನಿಮಗೆ ಏನು ಕೆಲಸ’ ಎಂದು ಪ್ರಶ್ನಿಸಿದ್ದಾರೆ. ‘ಬಾಯಿ ತೆರೆಯಲು ನಮಗೆ ಬಲವಂತ ಮಾಡಬೇಡಿ, ಇಲ್ಲದಿದ್ದರೆ ಇಡಿ ಬಗ್ಗೆ ತೀಕ್ಷ್ಣ ಟಿಪ್ಪಣಿ ಮಾಡಬೇಕಾದೀತು. ನನಗೆ ಇದರ ಬಗ್ಗೆ ಮಹಾರಾಷ್ಟ್ರದಲ್ಲಿ ಕೆಲವು ಅನುಭವಗಳಾಗಿವೆ. ದೇಶದಾದ್ಯಂತ ನೀವು ಇದನ್ನು ಮುಂದುವರೆಸಕೂಡದು’ ಎಂದು ಇಡಿ ಗೆ ತಾಕೀತು ಮಾಡಿದೆ.

ಇತ್ತೀಚಿನ ಪ್ರಕರಣಗಳನ್ನು ಗಮನಿಸಿದರೆ ನಿಮ್ಮ (ಇ.ಡಿ.) ಬಗ್ಗೆ ತುಂಬಾ ಕಠಿಣವಾಗಿ ಮಾತನಾಡಬೇಕಾಗುತ್ತದೆ. ರಾಜಕೀಯ ಹೋರಾಟಗಳು ಚುನಾವಣಾ ಸಮರದಲ್ಲಿ ಮತದಾರರ ಮುಂದೆ ನಡೆಯಲಿ, ಇದಕ್ಕಾಗಿ ಜಾರಿ ನಿರ್ದೇಶನಾಲಯವನ್ನು ಏಕೆ ಬಳಸಿಕೊಳ್ಳಲಾಗುತ್ತಿದೆ ಎಂದು ಪ್ರಶ್ನಿಸಿದರು. ಇ.ಡಿ. ಪರವಾಗಿ ವಾದ ಮಂಡಿಸಿದ ಹೆಚ್ಚುವರಿ ಸಾಲಿಸಿಟರ್ ಜನರಲ್ ರಾಜು, ಪ್ರಕರಣದಿಂದ ಹಿಂದೆ ಸರಿಯುತ್ತೇವೆ. ಆದರೆ, ಇದನ್ನು ಪೂರ್ವ ನಿದರ್ಶನವಾಗಿ ಪರಿಗಣಿಸಬಾರದು ಎಂದರು. ಸಾಲಿಸಿಟರ್ ಜನರಲ್ ಮನವಿ ■ 6ನೇ ಪುಟಕ್ಕೆ

ಕೇಂದ್ರ ಸರ್ಕಾರಕ್ಕೆ ಕಪಾಳ ಮೋಕ್ಷ

ಬೆಂಗಳೂರು, ಜು.21(ಕೆಎಂಶಿ)–ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಹಂಚಿಕೆ ವಿಚಾರದಲ್ಲಿ ನನ್ನ ಪತ್ನಿ ಪಾರ್ವತಿ ವಿರುದ್ಧ ತನಿಖೆ ನಡೆಸಲು ಜಾರಿ ನಿರ್ದೇಶನಾಲಯ (ಇ.ಡಿ.) ಸಲ್ಲಿಸಿದ್ದ ಮೇಲ್ಮನವಿಯನ್ನು ಸುಪ್ರೀಂಕೋರ್ಟ್ ವಜಾ ಮಾಡಿರುವ ಐತಿಹಾಸಿಕ ಆದೇಶ ಕೇಂದ್ರ ಸರ್ಕಾರದ ಕಪಾಳಕ್ಕೆ ನ್ಯಾಯದಂಡ ಬಾರಿಸಿ ರುವ ತಪರಾಕಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಕ್ರಿಯಿಸಿದ್ದಾರೆ.



ಸುಪ್ರೀಂಕೋರ್ಟ್ ಆದೇಶ ಹೊರಬರುತ್ತಿದ್ದಂತೆ ಈ ಸಂಬಂಧ ಟ್ವೀಟ್ ಮಾಡಿರುವ ಮುಖ್ಯಮಂತ್ರಿ, ರಾಜಕೀಯವಾಗಿ ನನ್ನನ್ನು ಎದುರಿಸಲಾಗದ ಭಾರತೀಯ ಜನತಾ ಪಕ್ಷ ಮತ್ತು ಅದರ ಸಂಗಾತಿಗಳು ಸಂವಿಧಾನಿಕ ತನಿಖಾ ಸಂಸ್ಥೆಗಳಾದ ಸಿಬಿಐ ಮತ್ತು ಇ.ಡಿ.ಯನ್ನು ದುರ್ಬಳಕೆ ಮಾಡಿಕೊಂಡು ನನ್ನ ಪತ್ನಿ ವಿರುದ್ಧ ಸುಳ್ಳು ಪ್ರಕರಣ ಸೃಷ್ಟಿಸಿ, ನೀಡಿರುವ ಕಿರುಕುಳ ಅತ್ಯಂತ ಹೇಯವಾದುದು, ಇದರಿಂದ ನಾನು ಮತ್ತು ನನ್ನ ಕುಟುಂಬ ಅನುಭವಿಸಿದ ಮಾನಸಿಕ ಕಿರುಕುಳವನ್ನು ನಾನೆಂದೂ ಮರೆಯಲಾರೆ ಎಂದಿದ್ದಾರೆ. ಸುಪ್ರೀಂಕೋರ್ಟ್‌ನ ಮುಖ್ಯನ್ಯಾಯ ಮೂರ್ತಿ ಬಿ.ಆರ್.ಗವಾಯಿ ಮತ್ತು ■ 6ನೇ ಪುಟಕ್ಕೆ

ಮೀನಾಕ್ಷಿಪುರ ಬಳಿ ಕೆಆರ್‌ಎಸ್ ಹಿನ್ನೀರಿಗೆ ಪ್ರವೇಶ ನಿರ್ಬಂಧಕ್ಕೆ ಸದ್ಯದಲ್ಲೇ ನಿಷೇಧಾಜ್ಞೆ ಜಾರಿ

• ಮೂವರು ನರ್ಸಿಂಗ್ ವಿದ್ಯಾರ್ಥಿಗಳ ಸಾವಿನ ಪ್ರಕರಣದಿಂದ ಎಚ್ಚೆತ್ತ ಮೈಸೂರು ಜಿಲ್ಲಾಡಳಿತ
• ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ನೇತೃತ್ವದಲ್ಲಿ ಸ್ಥಳ ಪರಿಶೀಲನೆ

ಮಿತ್ರನ ಫಲಶ್ರುತಿ

ಮೈಸೂರು,ಜು.21(ಎಂಟಿವೈ)– ಮೋಜು–ಮಸ್ತಿಗಿಳಿದು ಕೆಆರ್‌ಎಸ್ ಹಿನ್ನೀರಲ್ಲಿ ಯುವ ಜನ ಜೀವ ಕಳೆದುಕೊಳ್ಳುವ ದುರಂತಕ್ಕೆ ಕಡಿವಾಣ ಹಾಕಲು ಕೊನೆಗೂ ಮೈಸೂರು ಜಿಲ್ಲಾಡಳಿತ ಮುಂದಾಗಿದ್ದು, ಶೀಘ್ರದಲ್ಲೇ ಹಿನ್ನೀರು ಪ್ರದೇಶದಲ್ಲಿ ಬಿಎನ್‌ಎಸ್ 163ರಡಿ ನಿಷೇಧಾಜ್ಞೆ ಜಾರಿಗೊಳಿಸಲು ಚಿಂತನೆ ನಡೆದಿದೆ.



ಮೂವರು ನರ್ಸಿಂಗ್ ವಿದ್ಯಾರ್ಥಿಗಳು ಜಲಸಮಾಧಿಯಾದ ಮೈಸೂರು ತಾಲೂಕಿನ ಮೀನಾಕ್ಷಿಪುರದ ಬಳಿ ಕೆಆರ್‌ಎಸ್ ಹಿನ್ನೀರಿನ ಪ್ರದೇಶಕ್ಕೆ ಸೋಮವಾರ ಮಧ್ಯಾಹ್ನ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಯುಕೇಶ್ ಕುಮಾರ್, ತಹಸೀಲ್ದಾರ್ ಮಹೇಶ್‌ಕುಮಾರ್ ಇತರ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು.

ಮೂವರು ಮಂಡ್ಯದ ಮಿಮ್ಸ್ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಭಾನುವಾರ ಮೈಸೂರು ತಾಲೂಕಿನ ಮೀನಾಕ್ಷಿಪುರದ ಬಳಿ ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಿ ದುರಂತ ರೀತಿ ಸಾವನ್ನಪ್ಪಿದ ಘಟನಾ ಸ್ಥಳಕ್ಕೆ ಸೋಮವಾರ ಮಧ್ಯಾಹ್ನ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಎಸ್.ಸೆಲ್ವಕುಮಾರ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಜಿಪಂ ಸಿಇಓ ಯುಕೇಶ್ ಕುಮಾರ್, ತಹಸೀಲ್ದಾರ್ ಮಹೇಶ್ ಕುಮಾರ್ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿ, ಪರಿಶೀಲಿಸಿದರು. ಮೀನಾಕ್ಷಿಪುರ ಬಳಿ ಕೆಆರ್‌ಎಸ್ ಹಿನ್ನೀರು ಪ್ರದೇಶದಲ್ಲಿ ನಡೆಯುತ್ತಿರುವ ಅಕ್ರಮ ಚಟುವಟಿಕೆಗಳು, ನರ್ಸಿಂಗ್ ವಿದ್ಯಾರ್ಥಿಗಳ ಸಾವು ಸೇರಿದಂತೆ ಸ್ಥಳೀಯರಿಂದ ಹಲವು ಮಾಹಿತಿ ಪಡೆದರು. ಸ್ಥಳದಲ್ಲಿದ್ದ ಇಲವಾಲ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮಹೇಂದ್ರ ಅವರಿಗೆ ನರ್ಸಿಂಗ್ ವಿದ್ಯಾರ್ಥಿಗಳ ಸಾವಿನ ಪ್ರಕರಣದ ವರದಿ ನೀಡುವಂತೆ ಸೂಚಿಸಿದರು. ಬಳಿಕ ಬಿಎನ್‌ಎಸ್ 163 ರಡಿ ನಿಷೇಧಾಜ್ಞೆ ಜಾರಿಗೊಳಿಸುವ ಸಂಬಂಧ ತಹಸೀಲ್ದಾರ್ ಮಹೇಶ್ ಕುಮಾರ್ ಮತ್ತೊಂದು ವರದಿ ನೀಡಲಿದ್ದಾರೆ. ಆ ನಂತರವಷ್ಟೇ ಕೆಆರ್‌ಎಸ್ ■ 6ನೇ ಪುಟಕ್ಕೆ



ಕೆಆರ್‌ಎಸ್ ಹಿನ್ನೀರಿನ ಮೀನಾಕ್ಷಿಪುರದಲ್ಲಿ ಅಳವಡಿಸಿರುವ ಎಚ್ಚರಿಕೆ ಫಲಕ

ರಾಹುಲ್ ಗಾಂಧಿ ಭೇಟಿಗೆ ಮೊದಲು ಡಿಸಿಎಂ, ಬಳಿಕ ಸಿಎಂ ದೆಹಲಿ ಯಾತ್ರೆ!

ಬೆಂಗಳೂರು, ಜು.21(ಕೆಎಂಶಿ)– ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಭೇಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತೆ ದೆಹಲಿ ಪ್ರವಾಸ ಕೈಗೊಂಡಿದ್ದಾರೆ.



ರಾಹುಲ್ ಗಾಂಧಿ

ಸಂಸತ್ ಅಧಿವೇಶನ ಆರಂಭಗೊಂಡಿದ್ದು, ಈ ಸಂದರ್ಭದಲ್ಲಿ ರಾಹುಲ್ ಭೇಟಿ ಸಾಧ್ಯತೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಅವರು ಜುಲೈ 25ರಂದು ದೆಹಲಿಗೆ ತೆರಳುತ್ತಿದ್ದಾರೆ. ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜುಲೈ 22ರ ಸಂಜೆಯೇ ದೆಹಲಿಗೆ ತೆರಳಿ ಮುಖ್ಯಮಂತ್ರಿಗೂ ಮುನ್ನವೇ ರಾಹುಲ್ ಸೇರಿದಂತೆ ಪಕ್ಷದ ಇತರ ವರಿಷ್ಠರನ್ನು ಭೇಟಿ ಮಾಡಲು ಹೊರಟಿದ್ದಾರೆ.

ರಾಜ್ಯ ಉಸ್ತುವಾರಿ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರುಗಳಿಗೆ ದೆಹಲಿಗೆ ಬರುವಂತೆ ಸೂಚಿಸಿದ್ದಾರೆ.

ಆದರೆ, ರಾಹುಲ್ ಭೇಟಿ ಬಗ್ಗೆ ಯಾವುದೇ ಪ್ರಸ್ತಾಪ ಮಾಡಿಲ್ಲ, ವಿಧಾನಪರಿಷತ್‌ನ ನಾಲ್ಕು ಸ್ಥಾನಗಳ ಭರ್ತಿ ಹಾಗೂ ನಿಗಮ–ಮಂಡಳಿಗಳಿಗೆ 1,200 ನಿರ್ದೇಶಕರ ನೇಮಕ ಕುರಿತು ಅಂತಿಮ ತೀರ್ಮಾನ ಕೈಗೊಳ್ಳಲು ಕರೆದಿದ್ದಾರೆ ಎನ್ನಲಾಗಿದೆ. ಮೊದಲು ಜುಲೈ 25ಕ್ಕೆ ಇಬ್ಬರಿಗೂ ಬರಲು ಕರೆ ಮಾಡಿದ್ದ ಸುರ್ಜೇವಾಲ, ತಮ್ಮ ನಿರ್ಧಾರ ಬದಲಿಸಿ, ಶಿವಕುಮಾರ್ ಅವರಿಗೆ ಮಂಗಳವಾರವೇ ದೆಹಲಿಗೆ ಬರುವಂತೆ ಸೂಚಿಸಿದ್ದಾರೆ.

ಸುರ್ಜೇವಾಲ ಆಹ್ವಾನದ ಮೇರೆಗೆ ಉಪಮುಖ್ಯಮಂತ್ರಿ ತಮ್ಮ ಎಲ್ಲಾ ಕಾರ್ಯಕ್ರಮ ರದ್ದುಗೊಳಿಸಿ ದೆಹಲಿ ಪ್ರವಾಸ ಕೈಗೊಂಡಿದ್ದಾರೆ.

ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿ ದೆಹಲಿ ಪ್ರವಾಸ ಕೈಗೊಳ್ಳುತ್ತಿದ್ದಾರೆಂದು ಅವರ ಕಾರ್ಯಾಲಯ ತಿಳಿಸಿದೆಯಾದರೂ, ರಾಹುಲ್ ಭೇಟಿ ಬಗ್ಗೆ ಮಾಹಿತಿ ನೀಡಿಲ್ಲ.

ನಾಯಕತ್ವ ಬದಲಾವಣೆ ವಿಚಾರ ಮುನ್ನೆಲೆಗೆ ಬಂದು ಪಕ್ಷದ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾದ ಸಂದರ್ಭದಲ್ಲೇ ಈ ಬಗ್ಗೆ ಸ್ಪಷ್ಟ ಚಿತ್ರಣ ಪಡೆಯಲು ಮುಖ್ಯಮಂತ್ರಿ ಅವರು 10 ದಿನಗಳ ಹಿಂದೆಯೇ ದೆಹಲಿಗೆ ತೆರಳಿ ರಾಹುಲ್ ಭೇಟಿಗೆ ಸಮಯ ಕೇಳಿದ್ದರು.

ಅದೇ ವೇಳೆ ಶಿವಕುಮಾರ್ ಸಹ ತಮ್ಮ ಪಕ್ಷದ ಅಧಿನಾಯಕನ ಭೇಟಿಗೆ ಪ್ರಯತ್ನಿಸಿದ್ದರಾದರೂ ಉಭಯ ನಾಯಕರಿಗೂ ಭೇಟಿ ಸಾಧ್ಯವಾಗಿರಲಿಲ್ಲ. ಈ ಬೆಳವಣಿಗೆ ನಂತರ ಸುರ್ಜೇವಾಲ ಕೇವಲ 8 ದಿನಗಳಲ್ಲಿ ■ 6ನೇ ಪುಟಕ್ಕೆ

ಉಪರಾಷ್ಟ್ರಪತಿ ಸ್ಥಾನಕ್ಕೆ ಜಗದೀಪ್ ಧನ್ಕರ್ ರಾಜೀನಾಮೆ

ನವದೆಹಲಿ, ಜು.21– ಉಪ ರಾಷ್ಟ್ರಪತಿ ಜಗದೀಪ್ ಧನ್ಕರ್ ಅವರು ವೈದ್ಯಕೀಯ ಕಾರಣಗಳನ್ನು ಉಲ್ಲೇಖಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. ಅವರು ತಮ್ಮ ರಾಜೀನಾಮೆ ಪತ್ರವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ.



ಧನ್ಕರ್ ಅವರು ರಾಜೀನಾಮೆ ಪತ್ರದಲ್ಲಿ ತಮ್ಮ ಆರೋಗ್ಯಕ್ಕೆ ಆದ್ಯತೆ ನೀಡಲು ಹಾಗೂ ವೈದ್ಯಕೀಯ ಸಲಹೆಯನ್ನು ಪಾಲಿಸಬೇಕಿರುವುದರಿಂದ ಈ ತೀರ್ಮಾನ ಕೈಗೊಂಡಿರುವುದಾಗಿ ತಿಳಿಸಿದ್ದಾರೆ. ಸಂವಿಧಾನದ ವಿಧಿ 67(ಎ) ಅಡಿಯಲ್ಲಿ ತಕ್ಷಣದಿಂದ ಅಂಗೀಕಾರವಾಗುವಂತೆ ರಾಜೀನಾಮೆಯನ್ನು ಸಲ್ಲಿಸುವುದಾಗಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ತಮ್ಮ ಅಧಿಕಾರಾವಧಿಯಲ್ಲಿ ಬೆಂಬಲ ನೀಡಿದ ರಾಷ್ಟ್ರಪತಿ, ಪ್ರಧಾನ ಮಂತ್ರಿ ಮತ್ತು ಸಚಿವ ಸಂಪುಟ ಹಾಗೂ ಸಂಸತ್ ಸದಸ್ಯರಿಗೆ ಧನ್ಕರ್ ಅವರು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ನಮ್ಮ ಮಹಾನ್ ಪ್ರಜಾಪ್ರಭುತ್ವದಲ್ಲಿ ಉಪ ರಾಷ್ಟ್ರಪತಿಯಾಗಿ ನನಗೆ ಸಿಕ್ಕ ಅನುಭವಗಳು ಅಮೂಲ್ಯ. ಭಾರತವು ಈ ಅವಧಿಯಲ್ಲಿ ಸಾಧಿಸಿದ ಆರ್ಥಿಕ ಪ್ರಗತಿ ಮತ್ತು ಅಭಿವೃದ್ಧಿಗೆ ಸಾಕ್ಷಿಯಾಗಿರುವುದು ನನಗೆ ಹೆಮ್ಮೆಯ ಸಂಗತಿ ಎಂದು ಅವರು ತಿಳಿಸಿದ್ದಾರೆ. ಧನ್ಕರ್ ಅವರು 2022ರಲ್ಲಿ ಉಪ ರಾಷ್ಟ್ರಪತಿಯಾಗಿ ಅಧಿಕಾರ ಸ್ವೀಕರಿಸಿದ್ದರು.

ಸಣ್ಣ ವ್ಯಾಪಾರಿಗಳಿಗೆ ಜಿಎಸ್‌ಟಿ ನೋಟಿಸ್ ಖಂಡಿಸಿ

ನಾಳೆಯಿಂದ ಹಾಲು, ಬೇಕರಿ ಉತ್ಪನ್ನಗಳ ಮಾರಾಟ ಬಂದ್

ಬೆಂಗಳೂರು, ಜು.21– ಡಿಜಿಟಲ್ ವಹಿವಾಟು ನಡೆಸುತ್ತಿರುವ ಸಣ್ಣ ವ್ಯಾಪಾರಿಗಳಿಗೆ ತೆರಿಗೆ ಪಾವತಿಸುವಂತೆ ನೀಡಿರುವ ನೋಟಿಸ್ ಅನ್ನು ಮಂಗಳವಾರ(ಜು.22) ಸಂಜೆ ವೇಳೆಗೆ ಹಿಂಪಡೆಯದಿದ್ದರೆ ಜು.23ರಿಂದ ಮೂರು ದಿನ ರಾಜ್ಯವ್ಯಾಪಿ ಹಾಲು, ಬೇಕರಿ ಉತ್ಪನ್ನಗಳ ಮಾರಾಟ ಬಂದ್ ಮಾಡಲಾಗುವುದು ಎಂದು ಕರ್ನಾಟಕ ರಾಜ್ಯ ಕಾರ್ಮಿಕ ಪರಿಷತ್ ಎಚ್ಚರಿಕೆ ನೀಡಿದೆ.

ಸೋಮವಾರ ನಗರದ ಪ್ರೆಸ್‌ಕ್ಲಬ್‌ನಲ್ಲಿ ಏರ್ಪಡಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾರ್ಮಿಕ ಪರಿಷತ್ ಅಧ್ಯಕ್ಷ ರವಿಶೆಟ್ಟಿ ಬೈಂದೂರು, ಜಿಎಸ್‌ಟಿ ನೋಟಿಸ್ ನೀಡಿರುವುದನ್ನು ವಿರೋಧಿಸಿ ಜು.25ರಂದು ಫ್ರೀಡಂ ಪಾರ್ಕ್‌ನಲ್ಲಿ ಇಡೀ ದಿನ ಕೇಂದ್ರ ಮತ್ತು ರಾಜ್ಯ ಸರಕಾರದ ವಿರುದ್ಧ ವರ್ತಕರೆಲ್ಲರೂ ಸೇರಿ ದೊಡ್ಡ ಮಟ್ಟದ ಪ್ರತಿಭಟನೆ ನಡೆಸಲಾಗುವುದು ಎಂದು ತಿಳಿಸಿದರು.

ಮಾರಾಟ ಬಂದ್: ಜು.23 ಮತ್ತು 24 ರಂದು ಎರಡು ದಿನಗಳ ಕಾಲ ಹಾಲು, ಬೇಕರಿ ಉತ್ಪನ್ನಗಳು, ಬೀಡಿ, ಸಿಗರೇಟು ಮಾರಾಟವನ್ನು ಬಂದ್ ಮಾಡುತ್ತೇವೆ. ಎಲ್ಲಾ ಸಣ್ಣ ವ್ಯಾಪಾರಿಗಳು, ಅಂಡಿಗಳ ಮಾಲೀಕರು, ಕಾರ್ಮಿಕರು ಕಪ್ಪುಪಟ್ಟಿ ಧರಿಸಿ, ಅಂಗಡಿ ತೆರೆದಿದ್ದರೂ, ಹಾಲು, ಕಾಫಿ, ಚಹಾ, ಬೇಕರಿ ಉತ್ಪನ್ನಗಳನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡುವುದಿಲ್ಲ ಎಂದು ಅವರು ಹೇಳಿದರು.

ಸಣ್ಣ ವರ್ತಕರನ್ನು ಹತ್ತಿಕ್ಕಲು ವಾಣಿಜ್ಯ ಇಲಾಖೆಯಿಂದ ನೋಟಿಸ್ ಜಾರಿ ಮಾಡಿದ್ದು, ಇದರಲ್ಲಿ ರಾಜ್ಯ ಹಾಗೂ ಕೇಂದ್ರ ಸರಕಾರದ ಪಾತ್ರವಿದೆ. ಡಿಜಿಟಲ್ ವಹಿವಾಟಿನ ಯಶಸ್ಸಿಗೆ ಕಾರಣರಾಗಿರುವ ಸಣ್ಣ ವ್ಯಾಪಾರಿಗಳನ್ನು ಶೋಷಣೆ ಮಾಡಲಾಗುತ್ತಿದೆ. ಆರ್ಥಿಕತೆಗೆ ಬಹುದೊಡ್ಡ ಕೊಡುಗೆ ನೀಡಿದ್ದೇವೆ. ಆದರೆ ನೋಟಿಸ್ ನೀಡುವ ಮೂಲಕ ಡಿಜಿಟಲ್ ■ 6ನೇ ಪುಟಕ್ಕೆ

ಜು.25ರಂದು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ



ಆರ್‌ಸಿಬಿ ವಿಜಯೋತ್ಸವ ವೇಳೆ ನಡೆದ ಕಾಲ್ತುಳಿತ ದುರಂತದ ಹಿನ್ನೆಲೆ

ಮೈಸೂರು ದಸರಾ ಜಂಬೂಸವಾರಿ ವೇಳೆ ಸುರಕ್ಷತೆಗೆ ಭದ್ರತಾ ಮಾರ್ಗಸೂಚಿ ಅನಿವಾರ್ಯತೆ ಪ್ರತಿಪಾದನೆ

ಮೈಸೂರು, ಜು.21(ಎಂಕೆ)– ಇತಿಹಾಸ ಪ್ರಸಿದ್ಧ, ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಜಂಬೂಸವಾರಿ ಮೆರವಣಿಗೆಯಲ್ಲಿ ಭಾರಿ ಜನದಟ್ಟಣೆ, ನೂಕು–ನುಗ್ಗಲು, ಉಪ ಸಮಿತಿಗಳ ಸದಸ್ಯರೆಂದು ಅಡ್ಡಾಡುವವರ ಹಾವಳಿ ತಪ್ಪಿಸಬೇಕಾದರೆ ರಾಜ್ಯ ಸರ್ಕಾರ ದಸರಾ ಉತ್ಸವಕ್ಕೂ ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನ(ಎಸ್‌ಒಪಿ) ಅಳವಡಿಸುವುದು ಸೂಕ್ತ ಎಂಬ ಮಾತುಗಳು ವ್ಯಾಪಕವಾಗಿ ಕೇಳಿಬರುತ್ತಿವೆ.

ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಆರ್‌ಸಿಬಿ ವಿಜಯೋತ್ಸವ ಆಚರಣೆ ವೇಳೆ ಸಂಭವಿಸಿದ ಕಾಲ್ತುಳಿತ ದುರಂತದಿಂದ ಎಚ್ಚೆತ್ತುಕೊಂಡ ರಾಜ್ಯ ಸರ್ಕಾರ, ಬೃಹತ್ ಕಾರ್ಯಕ್ರಮಗಳು ಮತ್ತು ಸಾರ್ವಜನಿಕ ಸಮಾರಂಭಗಳಲ್ಲಿ ಜನಸಂದಣಿ ನಿರ್ವಹಣೆಗಾಗಿ ಎಸ್‌ಒಪಿ ಜಾರಿ ಮಾಡಿದ್ದು, ಲಕ್ಷಾಂತರ ಜನ ಸೇರುವ ಮೈಸೂರು ದಸರಾ ಜಂಬೂಸವಾರಿ ಮೆರವಣಿಗೆ ವ್ಯವಸ್ಥಿತವಾಗಿ, ಯಾವುದೇ ಗೊಂದಲ–ಗೋಜುಗಳಿಲ್ಲದೆ ನಡೆಯಬೇಕಾದರೆ ಎಸ್‌ಒಪಿ ಅಳವಡಿಕೆ ಅವಶ್ಯವಾಗಿದೆ ಎಂದು ಕೆಲ ಉದ್ಯಮಿಗಳು, ವ್ಯಾಪಾರಸ್ಥರು, ನಗರಪಾಲಿಕೆ ಮಾಜಿ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ.

ಜಗತ್ಪ್ರಸಿದ್ಧ ಜಂಬೂಸವಾರಿಯು ಅರಮನೆ ಆವರಣದಿಂದ ಹೊರಡುತ್ತಿದ್ದಂತೆಯೇ ಅಂಬಾರಿ ಆನೆಯ ಸುತ್ತಮುತ್ತ ಭಾರಿ ಜನದಟ್ಟಣೆ ಇರುತ್ತದೆ. ಯಾವುದೇ ನಿಯಂತ್ರಣ ಇರುವುದಿಲ್ಲ. ಅದರಲ್ಲೂ ದಸರಾ ಉಪ ಸಮಿತಿ ಪದಾಧಿಕಾರಿಗಳೆಂದು ಹೇಳಿಕೊಂಡೇ ಜಮಾಯಿಸುವ ಸಾವಿರಾರು ಮಂದಿ ಅಂಬಾರಿಯ ಮುಂದೆ, ಅಜು– ಬಾಜಲ್ಲಿ ಭಾರಿ ಪ್ರಮಾಣದ ನೂಕು–ನುಗ್ಗಲು ಉಂಟಾಗಲು ಕಾರಣವಾಗುತ್ತಾರೆ. ಅಲ್ಲದೆ ಸಾವಿರಾರು ರೂಪಾಯಿ ಹಣ ಕೊಟ್ಟುಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಖರೀದಿಸಿದವರು ತಾಯಿ ಚಾಮುಂಡೇಶ್ವರಿ ದರ್ಶನ, ಮೆರವಣಿಗೆ ನೋಡಲು ಹರಸಾಹಸವನ್ನೇ ಮಾಡಬೇಕಾಗುತ್ತದೆ. ಆದ್ದರಿಂದ ಅಗತ್ಯ ಸುರಕ್ಷತಾ ಕ್ರಮಗಳ ಜಾರಿ ಅನಿವಾರ್ಯವಾಗಿದೆ ಎಂದಿದ್ದಾರೆ. ಅರಮನೆ ಆವರಣದಲ್ಲಿ ಪ್ರತೀ ವರ್ಷ ಜನದಟ್ಟಣೆ ನಿಯಂತ್ರಿಸಲು ಒಂದಲ್ಲಾ ಒಂದು ಬಗೆಯ ಯೋಜನೆಗಳನ್ನು ಹಾಕಿಕೊಂಡರೂ ಅದೆಲ್ಲವೂ ■ 6ನೇ ಪುಟಕ್ಕೆ



ಸಂಗ್ರಹ ಚಿತ್ರ

> ‘ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಯಾವುದೇ ಕಾರ್ಯಕ್ರಮಗಳಲ್ಲಿ ಸಾರ್ವಜನಿಕರ ಸುರಕ್ಷತೆ, ಕಾನೂನು–ಸುವ್ಯವಸ್ಥೆ ಕಾಪಾಡಲು ಜನಸಂದಣಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ಎಸ್‌ಒಪಿ ರೂಪಿಸಲಾಗಿದೆ. ಆಯೋಜಕರು ಹಾಗೂ ಪೊಲೀಸ್ ಇಲಾಖೆಗೆ ಹಲವು ಭದ್ರತಾ ಮಾರ್ಗಸೂಚಿಗಳನ್ನು ನೀಡಿದ್ದು, ಅವುಗಳನ್ನು ಪಾಲಿಸಬೇಕಿದೆ. ದಸರಾ ಜಂಬೂಸವಾರಿ, ಅರಮನೆ ಆವರಣ, ಯುವ ದಸರಾ ಸೇರಿದಂತೆ ಜನದಟ್ಟಣೆ ಇರುವ ಸ್ಥಳಗಳಲ್ಲಿ ಸರ್ಕಾರದ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಲಾಗುವುದು. ಚಿನ್ನಸ್ವಾಮಿ ಸ್ಟೇಡಿಯಂ ಬಳಿ ನಡೆದಂತಹ ದುರ್ಘಟನೆಗಳು ನಡೆಯಬಾರದು ಎಂಬ ಉದ್ದೇಶದಿಂದ ಎಸ್‌ಒಪಿ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅಗತ್ಯ ವಿರುವ ಸ್ಥಳಗಳಲ್ಲಿ ಪಾಲಿಸಲಾಗುವುದು.
> – ಜಿ.ಲಕ್ಷ್ಮೀಕಾಂತ್ ರೆಡ್ಡಿ, ಜಿಲ್ಲಾಧಿಕಾರಿ

ನಕ್ಕರೆ ಅದೇ ಸ್ವರ್ಗ

ನಿಮಗಿದು ಗೊತ್ತಿರಲಿ...
ಹುಡುಗ ಪದೇ ಪದೆ ಕನ್ನಡಿ ನೋಡ್ತಿದಾನೆ ಅಂದ್ರೆ?
ಒಂದೋ ಅವನಿಗೆ ಪ್ರೀತಿಯಾಗಿದೆ ಅಥವಾ
ಅವನು ಜಿಮ್‌ಗೆ ಹೋಗೋಕೆ ಶುರು ಮಾಡಿದ್ದಾನೆ ಎಂದರ್ಥ...!!
ಹುಡುಗಿ ಕನ್ನಡಿ ನೋಡ್ತಾವ್ಳೆ ಅಂದ್ರೆ ಯಾರೋ
ಅಮಾಯಕ ಬಲಿ ಆಗ್ತಾವ್ನೆ ಎಂದರ್ಥ...!!

ಮೈಸೂರು ಮಿತ್ರ

ಮಂಗಳವಾರ, 22 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಈ ಪ್ರಪಂಚದಲ್ಲಿ ಎಲ್ಲರಿಗಿಂತ ಧನವಂತ ಯಾರು ಗೊತ್ತಾ...?
ಭಗವಂತ ಕೊಟ್ಟಿರುವುದರಲ್ಲಿ ಸಂತೃಪ್ತಿ ಹೊಂದುವವನು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಂಕೆ ಇಲ್ಲದ ಕುದುರೆ ಅಂಗಳ ಹಾರಿತು.

ನಿಮ್ಮ ಪತ್ರಗಳು

ಕೆಬಿಜಿಯವರಿಗೆ ನುಡಿ ನಮನ

■ ಅಬ್ರಕಡಬ್ರ–ಭೂಮಂತ್ರದ ಕೆಬಿಜಿ




ಮಾನ್ಯರೆ,

'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ ಅವರು ಕಳೆದ ನಾಲ್ಕೂವರೆ ದಶಕಗಳಿಂದ ಮೈಸೂರು ಪ್ರಾಂತ್ಯದ ಜಿಲ್ಲೆಗಳಲ್ಲಿ ಪತ್ರಿಕಾರಂಗದಲ್ಲಿ ಕೆಬಿಜಿ ಎಂದು ಚಿರಪರಿಚಿತರಾಗಿದ್ದರು. ಅವರ ಅಬ್ರಕಡಬ್ರ ಹಾಗೂ ಭೂಮಂತ್ರದ ಅಂಕಣಗಳು ಪ್ರತಿಯೊಬ್ಬರ ಮನಸೂರೆಗೊಂಡಿದ್ದವು. ಅವರು ಅಸ್ತಂಗತರಾದದ್ದು ತುಂಬಾ ವಿಷಾದಕರ ವಿಚಾರ. 'ಮೈಸೂರು ಮಿತ್ರ'ದ ಕೆ.ಬಿ.ಗಣಪತಿಯವರು ಹಾಗೂ ಆಂದೋಲನದ ರಾಜಶೇಖರ ಕೋಟಿಯವರು ಪತ್ರಿಕಾರಂಗದಲ್ಲಿ ಮೈಸೂರಿನ ಎರಡು ಕಣ್ಮಣಿಗಳಾಗಿದ್ದರು ಎಂದರೆ ಅತಿಶಯೋಕ್ತಿಯಲ್ಲ. ಇಬ್ಬರನ್ನು ಕಳೆದುಕೊಂಡದ್ದು ಪತ್ರಿಕಾರಂಗಕ್ಕೆ ತುಂಬಲಾರದ ನಷ್ಟ,

ಮೈಸೂರಿನಲ್ಲಿ ನಡೆಯುವ ಹಲವು ಪ್ರಮುಖ ಕಾರ್ಯಕ್ರಮಗಳಲ್ಲಿ ಕೆಬಿಜಿ ಅವರು ಅತಿಥಿಗಳಾಗಿ ಭಾಗವಹಿಸುತ್ತಿದ್ದುದು ಸಾಮಾನ್ಯವಾಗಿತ್ತು. ಸದಾ ಕಾಲ ಹಸನ್ಮುಖಿಯಾಗಿ ಲವಲವಿಕೆಯಿಂದ ಕೂಡಿದ ವ್ಯಕ್ತಿತ್ವವುಳ್ಳ ಕೆಬಿಜಿ ಅವರು ವೆಲ್ ಡ್ರೆಸ್ಡ್ ವ್ಯಕ್ತಿಯಾಗಿ ಅಜಾತಶತ್ರುವಾಗಿದ್ದುದ್ದು ಸರಿಯಷ್ಟೇ. 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಕರ್ತರನ್ನು ಉತ್ಪಾದಿಸುವ ಮೈಸೂರಿನ ಪತ್ರಿಕೋದ್ಯಮದ ಶಾಲೆಗಳಂತೆ ಕಾರ್ಯನಿರ್ವಹಿಸಿದ ಪ್ರಯುಕ್ತ ಹಳೆಯ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಅನೇಕರು ಬೆಳೆದರು. ನಿಮ್ಮ ಆತ್ಮಕ್ಕೆ ಚಿರಶಾಂತಿ ಸಿಗಲಿ.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

■ ಗೊಬ್ಬಳಿಮರ ತಂಗುದಾಣದ ದುಸ್ಥಿತಿ



ಮಾನ್ಯರೆ,

ಮೈಸೂರಿನ ಜೆ ಪಿ ನಗರದ ಪ್ರಮುಖ ಬಸ್ ಪ್ರಯಾಣಿಕರ ತಂಗುದಾಣವಾದ ಗೊಬ್ಬಳಿಮರ ತಂಗುದಾಣವು ನಿರ್ವಹಣೆಯಿಲ್ಲದೆ ದುಸ್ಥಿತಿಯಲ್ಲಿದೆ. ಚಿತ್ರದಲ್ಲಿ ಕಾಣುವಂತೆ ಕಸದ ರಾಶಿ, ಗೋಡೆಗೆ ಅಂಟಿಸಿರುವ ಭಿತ್ತಿಪತ್ರಗಳು ಹಾಗೂ ತಂಗುದಾಣದ ಪಕ್ಕದಲ್ಲಿ ಜೋಡಿಸಿರುವ ಮೂಟೆಗಳು. ಅಲ್ಲಿರುವ ವ್ಯಕ್ತಿ ಕಳೆದ ಹಲವು ತಿಂಗಳುಗಳಿಂದ ಈ ತಂಗುದಾಣವನ್ನು ತನ್ನ ವಾಸಸ್ಥಳವಾಗಿ ಮಾಡಿಕೊಂಡಿದ್ದಾನೆ. ಇಲ್ಲೇ ಮಲಗುವುದು, ಉಪಾಹಾರ ಸೇವಿಸುವುದು ಮಾಡುತ್ತಿದ್ದಾನೆ ಮತ್ತು ಸಾರ್ವಜನಿಕರನ್ನು ಹಣ ನೀಡುವಂತೆ ಒತ್ತಾಯಿಸುತ್ತಿದ್ದಾನೆ. ಇದರಿಂದ ಈ ತಂಗುದಾಣ ಅನೈರ್ಮಲ್ಯಕರ ಸ್ಥಳವಾಗಿ ಮಾರ್ಪಟ್ಟಿದೆ. ಸಾಲದೆಂಬಂತೆ ಈ ತಂಗುದಾಣಕ್ಕೆ ಬೆಳಕಿನ ಸೌಲಭ್ಯವಿಲ್ಲ. ದೇಶದ ಮೂರನೆಯ ಸ್ವಚ್ಛ ನಗರವೆಂದು ಪ್ರಶಸ್ತಿ ಪಡೆದಿರುವ ಮಹಾನಗರ ಪಾಲಿಕೆ ಆದಷ್ಟು ಶೀಘ್ರ ಈ ತಂಗುದಾಣವನ್ನು ಸುಸ್ಥಿತಿಗೆ ತಂದು, ಈ ವ್ಯಕ್ತಿಯನ್ನು ಇಲ್ಲಿಂದ ಸ್ಥಳಾಂತರಿಸಲಿ ಎಂಬುದು ಸಾರ್ವಜನಿಕರ ಕಳಕಳಿಯ ಮನವಿ.

–ಕೆ. ಗಣೇಶ್ ಕುಮಾರ್, ಮೈಸೂರು.

■ ಭಾರತ ಭಾವೈಕ್ಯತೆಯ ತಾಯಿ



ಮಾನ್ಯರೆ,

ಭಾರತ ಎಂದೆಂದಿಗೂ ಭಾವೈಕ್ಯತೆಯ ದೇಶ, ಸಹಿಷ್ಣುತೆಯ ದೇಶ ಎಂಬುದಕ್ಕೆ ಆಷಾಢ ಮಾಸದ ವೈಭವ, ಶ್ರೀ ಚಾಮುಂಡೇಶ್ವರಿ ಪದಕಮಲಗಳಲ್ಲಿ ಇಲ್ಲಿನ ಜನತೆ ಇಟ್ಟಿರುವ ಅಪರಿಮಿತ ಭಕ್ತಿಯ ಅನಾವರಣವೇ ಸಾಕ್ಷಿ.

ಮೈಸೂರು ನಗರ ಅಷ್ಟೇ ಅಲ್ಲದೆ ಇತರ ನಗರಗಳಲ್ಲೂ ಆಷಾಢ ಮಾಸದ ಪ್ರತಿ ಶುಕ್ರವಾರ, ಹಾಗೂ ಇದೇ ಮಾಸದಲ್ಲಿ ಬರುವ ಶ್ರೀ ಚಾಮುಂಡೇಶ್ವರಿಯ ಜನ್ಮದಿನೋತ್ಸವದಂದು ಪ್ರತಿಯೊಂದು ರಸ್ತೆ, ಗಲ್ಲಿ, ಚೌಕ, ತಿರುವು, ರಸ್ತೆ, ಆಟೋ ಸ್ಟ್ಯಾಂಡ್, ಟ್ಯಾಕ್ಸಿ ಸ್ಟ್ಯಾಂಡ್, ಸಣ್ಣ–ದೊಡ್ಡ ದೇವಸ್ಥಾನ ಇತ್ಯಾದಿ ಅಗಣಿತ ಸ್ಥಳಗಳಲ್ಲಿ ಶ್ರೀ ಚಾಮುಂಡೇಶ್ವರಿಯ ವರ್ಣರಂಜಿತ, ವಿವಿಧಲಾಂಕೃತ ವಿಗ್ರಹ ಅಥವಾ ಮಹಿಷಾಸುರ ಮರ್ಧಿನಿಯ ಬೃಹತ್ ಫೋಟೋ ಇಟ್ಟು ವಿವಿಧ ರೀತಿಯ ಕಲಾನೈಪುಣ್ಯಗಳಿಂದ ಅಲಂಕರಿಸಿ, ಪೂಜೆ ಮಾಡುವ ಭಕ್ತಿಯ ಪರಾಕಾಷ್ಟೆ ವರ್ಣನಾತೀತವಾದದ್ದು.

ಇದರ ಮುಖ್ಯ ಉದ್ದೇಶ ಅನ್ನದಾನ. ಇದರ ಮಹತ್ತು ಹಾಗೂ ವಿಶೇಷವೆಂದರೆ ಜಾತಿ, ಧರ್ಮ, ಮತ, ಪಂಥ, ಮಡಿ, ಮೈಲಿಗೆ, ಪಂಥ–ಗಿಂತ, ಸ್ತ್ರೀ–ಪುರುಷ ಮತ್ತು ವಯೋಮಾನಗಳ ಭೇದ–ಭಾವವಿಲ್ಲದೆ ನಡೆಯುತ್ತದೆ. ಅಲ್ಲಿನ ಆಯೋಜಕರು, ಸ್ವಯಂಸೇವಕರು ರಸ್ತೆಯಲ್ಲಿ ಹೋಗುವ ದಾರಿಹೋಕರನ್ನೆಲ್ಲ ಕೈ ಬೀಸಿ ಕರೆದು ಶ್ರೀ ಚಾಮುಂಡೇಶ್ವರಿಯ ಪ್ರಸಾದ ಸ್ವೀಕರಿಸಲು ಆಹ್ವಾನಿಸುವ ಪರಿಯಂತೂ ಸಹೋದರತ್ವದ ಅಮೋಘ ಸಂದೇಶ. ಇಂತಹ ನಮ್ಮ ಹಬ್ಬ ಹರಿದಿನಗಳೇ ನಮ್ಮ ಮಹಾನ್ ದೇಶ ಭಾರತವನ್ನು ಒಟ್ಟುಗೂಡಿಸಿ ಇಟ್ಟಿರುವುದು ಎಂಬುದನ್ನು ಮರೆಯದಿರೋಣ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಜನ ಮರುಳೋ...! ಜಾತ್ರೆ ಮರುಳೋ...!

ಸಾಮಾನ್ಯವಾಗಿ ಒಬ್ಬರು ಮತ್ತೊಬ್ಬರ ಆಲೋಚನೆಗೆ ತಮ್ಮನ್ನು ಒಡ್ಡಿಕೊಳ್ಳದೆ, ಸರಿಯೋ–ತಪ್ಪೋ ಎಂಬುದನ್ನು ಕೂಲಂಕಷವಾಗಿ ಪರಿಶೀಲಿಸದೇ ಸಾಗುವ ಮಂದಿಯನ್ನು ಕುರಿತು ರಚಿತವಾದ ಈ ಅನುಭವ ನುಡಿಯು ಜನರ ಮನಸ್ಥಿತಿಯನ್ನು ಸಹ ಅನಾವರಣ ಮಾಡುತ್ತಿದೆ.

ಮನುಷ್ಯರ ಸ್ವಭಾವವೇ ವಿಚಿತ್ರವಾದುದು, ತನ್ನ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳದೇ ಉಳಿದವರು ಮಾಡಿದಂತೆ ತಾನು ಮಾಡಬೇಕೆಂದೇ ಸದಾ ಕಾಲವೂ ಪ್ರಯತ್ನಿಸುತ್ತಿರುತ್ತಾನೆ. ಈ ಪ್ರಯತ್ನದಲ್ಲಿ ತಾನು ಮಾಡ ಹೊರಟಿರುವ, ಮಾಡುತ್ತಿರುವ ಕೆಲಸಗಳ ಬಗ್ಗೆ ಸ್ವಲ್ಪವೂ ಚಿಂತಿಸದೇ ಮುನ್ನುಗ್ಗುತ್ತಿರುವ ಜನರ ಗುಂಪಿನಲ್ಲಿ ತಾನು ಮುನ್ನುಗ್ಗುವ ಪ್ರಯತ್ನ ಮಾಡುತ್ತಾನೆಯೇ ಹೊರತು ಕೆಲಸದಿಂದ ಸಿಗುವ ತೃಪ್ತಿ, ಪ್ರತಿಫಲದ ಬಗ್ಗೆ ಸ್ವಲ್ಪವೂ ಆಲೋಚಿಸುವುದೇ ಇಲ್ಲ.

ಓಡುತ್ತಿರುವ ಜಗತ್ತಿನಲ್ಲಿ ತಾನು ಗುರುತಿಸಿಕೊಳ್ಳಬೇಕೆಂಬ ಹಠ ಮನುಷ್ಯನದು (ಟ್ರೆಂಡಿಂಗ್ ಯುಗದಲ್ಲಿ ತಾನು ಟ್ರೆಂಡಿಂಗ್ ಆಗಬೇಕೆಂಬ ಹುಚ್ಚು ಸಾಹಸ) ಇದರಲ್ಲಿ ತಪ್ಪೇನಿದೆ ಎಂದು ಕ್ಷಣ ಮಾತ್ರದಲ್ಲಿ ಹೇಳಬಹುದಾದರೂ ಒಂದು ವೇಳೆ ಈ ಬಗೆಯ ಅಮಲಿಗೆ ಒಳಗಾದರೆ ನಮ್ಮ ಸ್ಥಿತಿ ಆಳವನ್ನು ಅರಿಯದೇ ನೀರಿಗಿಳಿದಂತಾಗುತ್ತದೆ. ಆದ್ದರಿಂದ ಇಳಿಯುವ ಮುಂಚೆ ಆಲೋಚನೆಗಳನ್ನು ಮಾಡುವುದು ಒಳಿತು.

ವಿಜ್ಞಾನ ವಿಭಾಗವೆಂಬ ಮರೀಚಿಕೆಯ ಬೆನ್ನತ್ತಿ

ಜನ ಮರುಳೋ ಜಾತ್ರೆ ಮರುಳೋ ಎಂಬಂತಹ ಮಾತು ನೆನಪಿಗೆ ಬರುವುದು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕೊಡಿಸುವಾಗ. ವಿಜ್ಞಾನವನ್ನು ಓದಿದರೆ ಮಾತ್ರ ಜೀವನ, ನನ್ನ ಮಗ ವೈದ್ಯ, ಅಭಿಯಂತರ, ವಕೀಲನಾದರೆ ಮಾತ್ರ ಬದುಕು ಎಂಬ ಬಂಗಾರವೆಂಬ ಭ್ರಮೆಯ ಬೆನ್ನತ್ತಿ ವಿದ್ಯಾರ್ಥಿಗಳ ಸಾಮರ್ಥ್ಯವನ್ನು ತಿಳಿಯದೆ ಏನಾದರೂ ಸರಿ ನನ್ನ ಮಗ ಅಥವಾ ಮಗಳು ವಿಜ್ಞಾನ ವಿಷಯವನ್ನೇ ಓದಬೇಕೆಂಬ ಒತ್ತಾಸೆಯನ್ನು ಹೇರುವ ಮೂಲಕ ವಿದ್ಯಾರ್ಥಿಗಳಲ್ಲಿ ನೈಜವಾಗಿ ಅಡಗಿರುವ ಪ್ರತಿಭೆಯನ್ನು ಹೊರ ಬರದಂತೆ ಮಾಡುವ ಪೋಷಕರಿಗೇನು ಕಡಿಮೆ ಇಲ್ಲ.

ಸಾಮರ್ಥ್ಯಕ್ಕೆ ತಕ್ಕ ವಿದ್ಯಾಭ್ಯಾಸವನ್ನು ಕೊಡಿಸಿದರೆ ಅಥವಾ ವಿದ್ಯಾರ್ಥಿಗೆ ಆಸಕ್ತಿ ಇರುವ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಸೂಕ್ತವಾದ ವಾತಾವರಣವನ್ನು ನಿರ್ಮಿಸಿಕೊಟ್ಟರೆ ಖಂಡಿತವಾಗಿಯೂ ಸಮಾಜಕ್ಕೆ ಉತ್ತಮ ವ್ಯಕ್ತಿ ದೊರಕಲು ಸಾಧ್ಯ. ವಿಜ್ಞಾನ ವಿಭಾಗದಲ್ಲಿ ಓದಿ ಅಭಿಯಂತರರಾಗಿ (ಇಂಜಿನಿಯರ್) ಕೆಲಸವಿಲ್ಲದೆ ಅಲೆಯುವವರನ್ನು ನೋಡಿಯೂ ಕೂಡ ವಿಜ್ಞಾನದ ವಿಷಯಕ್ಕೆ ಸೇರಿಸುವುದನ್ನು ಬಿಟ್ಟಿಲ್ಲ. ಇಂಜಿನಿಯರಿಂಗ್ ಕೋರ್ಸ್, ಎಂ.ಬಿ.ಬಿ.ಎಸ್ ಕೋರ್ಸ್‌ಗಳಿಗಿರುವ ಬೇಡಿಕೆ ಏನು ಕಡಿಮೆಯಾಗದಿರುವುದು ನಿಜಕ್ಕೂ ಸೋಜಿಗವೆಂದೇ ಹೇಳಬಹುದು. ಈ ಅತಿಯಾದ ಬೇಡಿಕೆಯ ಕಾರಣದಿಂದ ದಿನೇ ದಿನೆ ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳು ಲಕ್ಷಗಟ್ಟಲೆ ಶುಲ್ಕವನ್ನು ವಿಧಿಸುತ್ತಿವೆ. ಧನಿಕರಿಗೆ ಲಕ್ಷ ಎಂಬುದು ಅಲಕ್ಷ್ಯವಾಗಿ ತೋರ ಬಹುದು ಅಂತೆಯೇ ದೊಡ್ಡ ಮೊತ್ತವೇನಲ್ಲ ಎಂದೆನಿಸಲೂಬಹುದು. ಆದರೆ ಬಡವರಿಗೆ, ಮಧ್ಯಮ ವರ್ಗದವರಿಗೆ ನಿಜಕ್ಕೂ ಶುಲ್ಕವನ್ನು ಭರಿಸಲು ಸಾಧ್ಯವಾಗುವುದಿಲ್ಲ. ಆದರೂ ಸಾಲವನ್ನು ಮಾಡಿ ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ತಮ್ಮ ಇಡೀ ಬದುಕನ್ನೇ ಮುಡುಪಿಡುವ ಜನರಿಗೇನು ಕಡಿಮೆ ಇಲ್ಲ. ನಮ್ಮ ಕೈಗಳಲ್ಲಿ ಇರುವ ಬೆರಳುಗಳೇ ಒಂದೇ ಸಮನಾಗಿ ಇರುವುದಿಲ್ಲ. ಹಾಗೆಯೇ ಎಲ್ಲಾ ವಿದ್ಯಾರ್ಥಿಗಳಲ್ಲೂ ಒಂದೇ ಸಮನಾದ ಬೌದ್ಧಿಕ ಬುದ್ಧಿಶಕ್ತಿ ಇರುವುದಿಲ್ಲ. ಇದನ್ನು ತಿಳಿದುಕೊಳ್ಳದೇ ಯಾರದೋ ಒತ್ತಾಸೆಯಿಂದ, ಮತ್ಯಾರೋ ಮೇಲಿನ ಪೈಪೋಟಿಯಿಂದ ಓದಿಸುವವರನ್ನು ನೋಡಿದಾಗ ನಗಬೇಕೊ ! ಅಳಬೇಕೊ ತಿಳಿಯಲಾಗದು.

ಭ್ರಮೆಯ ಜಗದಲ್ಲಿ ತಾನು ಮೆರೆಯಬೇಕೆಂಬ ಹುಚ್ಚು ಸಾಹಸ

ಪ್ರಸ್ತುತ ಪುಸ್ತಕವನ್ನು ಓದುವ ಅಭಿರುಚಿಯನ್ನು ಕಸಿದುಕೊಂಡ ಹೆಗ್ಗಳಿಕೆ ಜಂಗಮವಾಣಿಗೆ ಸೇರುತ್ತದೆ. ಅದರಲ್ಲೂ ಮುಖ್ಯವಾಗಿ ಸಾಮಾಜಿಕ ಜಾಲತಾಣಗಳು ಇಂದಿನ ಯುವ ಜನಾಂಗದ ಮನಸ್ಸನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡು ಹೇಗೆ ಬೇಕೋ ಹಾಗೆ ತಾಳಕ್ಕೆ ತಕ್ಕಂತೆ ಕುಣಿಸುವ ಕೆಲಸವನ್ನು ಮಾಡುತ್ತಿವೆ.

ಹೇಗಾದರೂ ಸರಿ ತನ್ನನ್ನು ಎಲ್ಲರೂ ಗುರುತಿಸಬೇಕೆಂಬ ಭ್ರಮೆಗೆ ಒಳಗಾಗಿ ಯಾವುದು ಪ್ರಚಲಿತದಲ್ಲಿ ಇರುತ್ತದೋ ಅದರ ಬೆನ್ನತ್ತಿ ಹೋಗುವ ಮೂಲಕ ಸರಿ ತಪ್ಪುಗಳ ಜಿಜ್ಞಾಸೆಯಲ್ಲಿ ತೊಡಗದೆ ಭ್ರಮೆಯಲ್ಲಿ ಬದುಕುವವರಿಗೇನು ಕಡಿಮೆ ಇಲ್ಲ. ಟ್ರೆಂಡಿಂಗ್‌ನಲ್ಲಿ ಇರುವ ವಿಡಿಯೋಗಳನ್ನು ನಾವು ಮಾಡಬೇಕು ಅಥವಾ ನಾವು ಮಾಡುವ ವಿಡಿಯೋಗಳು ಟ್ರೆಂಡಿಂಗ್‌ನಲ್ಲಿ ಇರಬೇಕು ಎಂದು ಇಲ್ಲ ಸಲ್ಲದ, ವಿವೇಚನಾ ರಹಿತ ಕೆಲಸಗಳಲ್ಲಿ ನಿರತರಾಗಿ ನೈತಿಕತೆಯನ್ನು ಮರೆಯುತ್ತಿರುವ ಯುವಜನತೆಗೆ ವಾಸ್ತವದ ಅರಿವನ್ನು ಮೂಡಿಸಲೇಬೇಕಾಗಿದೆ.

> ❝ ನಾವು ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವುದಕ್ಕಿಂತ ಮತ್ತೊಬ್ಬರನ್ನು ಅನುಕರಿಸಿ ನಾವು ಅವರಂತೆ ಇಲ್ಲವಲ್ಲ, ಅವರಂತೆ ಆಗಲು ಏನಾದರೂ ಮಾಡಬೇಕಲ್ಲ ಎಂಬ ಹಂಬಲದಿಂದ ವಿಲಾಸಿಯ ಬದುಕಿಗೆ ಜೋತು ಬಿದ್ದು ಬದುಕನ್ನು ನರಳುವಂತೆ ಮಾಡುವುದು ಎಷ್ಟು ಸರಿ? ಹಾಸಿಗೆ ಇಲ್ಲದಿದ್ದರೂ ಚಾಪೆಯಲ್ಲಾದರೂ ಬದುಕನ್ನು ನೇರ್ಪು ಮಾಡಿಕೊಂಡು ಹೋಗುವ ಇರುವುದರಲ್ಲೇ ಆನಂದದ ಜೀವನಕ್ಕೆ ಜೀವಂತಿಕೆಯನ್ನು ನಿರ್ಮಿಸಿದ್ದೇ ಆದರೆ ಬಾಳು ಗೋಳಾಗದೆ ಇರುವ ಭೂಗೋಳದಲ್ಲಿಯೇ ಸಂತೋಷವನ್ನು ಕಾಣಬಹುದು ಹಾಗೂ ತೃಪ್ತಿದಾಯಕವಾದ ಬದುಕನ್ನು ಬದುಕಲು ಸಾಧ್ಯವಾಗುತ್ತದೆ.

ಕ್ಷಣ ಮಾತ್ರದಲ್ಲಿ ದೊರೆತ ಯಶಸ್ಸು ಕ್ಷಣ ಮಾತ್ರವೇ ಅಳಿಸಿ ಹೋಗುತ್ತದೆ. ನಿಜವಾದ ಬೌದ್ಧಿಕ ಜ್ಞಾನ ಎಷ್ಟೇ ವರ್ಷಗಳಾದರೂ ನೆನಪಿನಲ್ಲಿ ಉಳಿಯುವ ಕೆಲಸವನ್ನು ಮಾಡುತ್ತದೆ. ಈ ಸತ್ಯದ ಅರಿವು ಎಲ್ಲರೂ ತಿಳಿಯಬೇಕಾ ಗಿದೆ. ಈ ಸತ್ಯ ತಿಳಿದಿದ್ದರೆ ಭ್ರಮೆಯ ಜಗದಲ್ಲಿ ತಾನು ಮೆರೆಯಬೇಕೆಂಬ ಹುಚ್ಚು ಸಾಹಸಕ್ಕೆ ಮುಳುಗುವವರ ಸಂಖ್ಯೆ ಹೆಚ್ಚಾಗುತ್ತಲೇ ಇರುತ್ತದೆ.

ಮತ್ಸರದ ವ್ಯಾಪಾರ

ನಮ್ಮಲ್ಲಿ ಬಹುತೇಕರಿಗೆ ಏನಾದರೊಂದು ಉದ್ಯೋಗವನ್ನು ಮಾಡಿ ಜೀವನ ಸಾಗಿಸಬೇಕೆಂಬ ಉದ್ದೇಶ ಇರುವುದಕ್ಕಿಂತ ಮತ್ಸರದ ಸಲುವಾಗಿ ಉದ್ಯೋಗ ಮಾಡುವವರ ಸಂಖ್ಯೆಯೇ ಹೆಚ್ಚಾಗಿ ಕಂಡುಬರುತ್ತದೆ. ಚಿಲ್ಲರೆ ಅಂಗಡಿ ಇಟ್ಟು ಸ್ವಲ್ಪ ಚೆನ್ನಾಗಿ ವ್ಯಾಪಾರ ಮಾಡಿದರೆ ಸಾಕು ಆ ಅಂಗಡಿಯ ಸುತ್ತಮುತ್ತ ಮತ್ತಷ್ಟು ಚಿಲ್ಲರೆ ಅಂಗಡಿಗಳು ಆರಂಭವಾಗುತ್ತವೆ. ಒಂದೇ ಸಾಲಿನಲ್ಲಿ ಎಂಟತ್ತು ಅಂಗಡಿಗಳಿದ್ದರೆ ಯಾರಿಗೂ ಲಾಭ ಸಿಗಲಾರದು. ಆದರೂ ವ್ಯಾಪಾರ ನಡೆಸಬೇಕು, ಅವನು ಬೆಳೆಯಬಾರದೆಂದು ಮತ್ಸರ ಪಡುವ ಜನರನ್ನು ನೋಡಿ ನಗಬೇಕೊ, ನಕ್ಕು ಸುಮ್ಮನಿರಬೇಕೋ ತಿಳಿಯದು. ಇಲ್ಲಿ ಚಿಲ್ಲರೆ ಅಂಗಡಿಯನ್ನು ಉದಾಹರಣೆಯಾಗಿ ಹೇಳಿರುವೆ ಇದು ಎಲ್ಲ ಉದ್ಯಮಗಳಲ್ಲಿಯೂ, ಎಲ್ಲ ವ್ಯಾಪಾರಗಳಲ್ಲಿಯೂ ಇದ್ದೇ ಇರುತ್ತದೆ. ಆರೋಗ್ಯಕರ ಪೈಪೋಟಿ ಇದ್ದರೆ ಚೆಂದ. ಆದರೆ ಮತ್ಸರದ ಕಾರಣದಿಂದ ಆರಂಭವಾಗುವ ಉದ್ಯಮ ಹೆಚ್ಚು ದಿನ ಉಳಿಯಲಾಗದು.ನಾಲ್ಕು ಜನ ಮಾಡಿರುವುದನ್ನೇ ತಾನು ಮಾಡುವೆನೆಂದು ಹೊರಡದೆ,ಹೊಸ ಆಲೋಚನೆಯನ್ನು ಮಾಡಿ ಹೊಸ ಉದ್ಯಮವನ್ನು ಆರಂಭಿಸಿದರೆ ಯಶಸ್ಸು ಸಿಗಬಹುದು.

ತನ್ನತನ ಮರೆಯಬಾರದು

ನಾನು ಮತ್ತೊಬ್ಬರಂತೆ ಆಗಬೇಕು ಎಂಬುದನ್ನು ಬಿಟ್ಟು ನನ್ನಂತೆ ಮತ್ತೊಬ್ಬರು ಆಗಬೇಕು ಎಂಬ ದೃಢವಾದ ನಿರ್ಧಾರ ನಮ್ಮಲ್ಲಿ ಬರಬೇಕು. ಯಾವುದೋ ಲಾಭ ದೃಷ್ಟಿಯಿಂದ, ನಮ್ಮನ್ನು ಮತ್ತೊಬ್ಬರು ಗುರುತಿಸಲೇಬೇಕೆಂಬ ಕಾರಣದಿಂದ ನಮ್ಮ ನೈಜ ವರ್ತನೆಯನ್ನು ಬಿಟ್ಟು, ನಮ್ಮತನವನ್ನು ಕಳೆದುಕೊಂಡು ಕೃತಕವಾದ ಶೈಲಿಯಲ್ಲಿ ಜೀವನ ನಡೆಸುವುದನ್ನು ಬಿಟ್ಟು ನಮ್ಮತನವನ್ನು ಬಿಡದ ಹಾಗೆ ಸತ್ವವನ್ನು ಉಳಿಸಿಕೊಂಡು ಬದುಕು ನಡೆಸಿದರೆ ನಿಜಕ್ಕೂ ಆ ಬದುಕು ಆದರ್ಶನೀಯವಾಗುತ್ತದೆ.

ಯಶಸ್ಸು ಕ್ಷಣ ಮಾತ್ರದಲ್ಲಿಯೇ ದೊರಕಬೇಕೆಂಬ ಉದ್ವೇಗ : ಪ್ರಸ್ತುತ ಸ್ಥಿತಿ ಹೇಗಿದೆ ಎಂದರೆ ಯಾವುದೇ ಯಶಸ್ಸು ಕ್ಷಣಮಾತ್ರದಲ್ಲಿ ದೊರಕಬೇಕು ಎಂಬ ಮನೋಭಾವ ಬಹುತೇಕರಲ್ಲಿ ಅಡಕವಾಗಿದೆ. ಒಬ್ಬರ ಸಿರಿವಂತಿಕೆಯನ್ನು ನೋಡಿ ಅಥವಾ ಒಬ್ಬರಿಗೆ ಸಿಕ್ಕ ಯಶಸ್ಸನ್ನು ನೋಡಿ ಅವರಿಗೆ ಸಿಕ್ಕಂತೆ ಯಶಸ್ಸು ನಮಗೂ ಸಿಗಬೇಕೆಂಬ ಆಲೋಚನೆಯನ್ನು ಮಾಡುತ್ತಾರೆ ವಿನಃ ಯಶಸ್ಸನ್ನು ಪಡೆಯಲು ಅವರು ಶ್ರಮಿಸಿದ ಪರಿಶ್ರಮವನ್ನು ಗಮನಿಸುವುದೇ ಇಲ್ಲ.

ಬೀಜವನ್ನು ಬಿತ್ತಿದರೆ ಅದು ಮೊಳಕೆ ಒಡೆದು ಸಸಿಯಾಗಿ, ಗಿಡವಾಗಿ, ಮರವಾಗಿ ಬೆಳೆದು ಫಲವನ್ನು ನೀಡಲು ಸಮಯವನ್ನು ತೆಗೆದುಕೊಳ್ಳುತ್ತದೆ. ರೈತನೊಬ್ಬ ವ್ಯವಸಾಯವನ್ನು ಮಾಡಿದರೆ ಅದರ ಪ್ರತಿಫಲವನ್ನು ಪಡೆಯಲು ವರ್ಷಗಟ್ಟಲೇ ಸಮಯ ಬೇಕಾಗುತ್ತದೆ. ಪರಿಸ್ಥಿತಿ ಈ ತರಹ ಇರುವಾಗ ಯಶಸ್ಸು ಮಾತ್ರ ಬೇಗ ಸಿಗಲೇಬೇಕೆಂದು ಬಯಸಿದರೆ ಅದು ಮೂರ್ಖತನವೆಂದೇ ಹೇಳಬೇಕು. ರಾತ್ರೋರಾತ್ರಿ ಯಶಸ್ಸನ್ನು ಯಾರಿಂದಲೂ ಪಡೆಯಲು ಸಾಧ್ಯವಿಲ್ಲ. ಸತತ ಪ್ರಯತ್ನ, ಪರಿಶ್ರಮ ಮುಖ್ಯವಾಗಿರುತ್ತದೆ. ಈ ಸತ್ಯವನ್ನು ಮೊದಲು ತಿಳಿದರೆ ಉದ್ವೇಗ ಕಡಿಮೆಯಾಗಬಹುದು.

ಹಣದ ವ್ಯಾಮೋಹ

ಹಣ ಸಿಕ್ಕರೆ ನಾವು ಏನು ಬೇಕಾದರೂ ಖರೀದಿ ಮಾಡಬಹುದು, ನೆಮ್ಮದಿಯಾಗಿರಬಹುದು ಸುಖ, ಶಾಂತಿ ದೊರಕುತ್ತದೆ ಎಂಬ ಹಸಿ ಸುಳ್ಳನ್ನು ನಂಬುತ್ತಾ, ಹಣವನ್ನು ಸಂಪಾದಿಸಲೇಬೇಕೆಂಬ ಪಣತೊಟ್ಟು ಸುಂದರವಾದ ಬದುಕನ್ನು ವ್ಯರ್ಥ ಮಾಡಿಕೊಳ್ಳುತ್ತಿದ್ದೇವೆ. ಬದುಕನ್ನು ನಡೆಸಲು ಹಣ ಅಗತ್ಯವು, ಅನಿವಾರ್ಯವೂ ಹೌದು. ಇದರಲ್ಲಿ ಯಾವುದೇ ರೀತಿಯಾದಂತಹ ಎರಡು ಮಾತಿಲ್ಲ. ಹಣವೊಂದೇ ಬದುಕಲ್ಲ. ಈ ಸತ್ಯ ತಿಳಿಯಲೇಬೇಕು. ಹಣದ ಬೆಂಬತ್ತಿ ಹೋಗಿ ಸಂಬಂಧಗಳಲ್ಲಿ ಇರುವ ಪರಸ್ಪರ ಗೌರವವನ್ನು, ಪ್ರೀತಿಯನ್ನು ಕಳೆದುಕೊಳ್ಳುವ ಮೂಲಕ ಹಣದ ಗುಲಾಮರಾಗುವ ಹುಚ್ಚುತನವನ್ನು ಬಿಡಬೇಕು.

ತೀರಾ ಇತ್ತೀಚೆಗೆ ಸಾವಿರಾರು ಕೋಟಿ ಆಸ್ತಿ ಇರುವ ತಂದೆ ತನ್ನ ಮಗನಿಂದಲೇ ತನಗೆ ಜೀವ ಬೆದರಿಕೆ ಇದೆ ಎಂದು ಮಾಧ್ಯಮದವರ ಎದುರು ತಮ್ಮ ಭಯವನ್ನು ತೋಡಿಕೊಂಡರೆ, ಮಗನಾದವನು ತನ್ನ ತಂದೆ ತನಗೇನು ಆಸ್ತಿ ಕೊಡಲಿಲ್ಲವೆಂದು ಜಗಳವಾಡಿದ್ದನ್ನು ನೋಡಿದಾಗ ಹಣಕ್ಕಿಂತ ಮಾನಸಿಕ ನೆಮ್ಮದಿ ಮುಖ್ಯವಾದುದೆಂಬ ಸತ್ಯದ ಅರಿವಾಯಿತು.

ಒಟ್ಟಾರೆಯಾಗಿ ಹೇಳುವುದಾದರೆ ನಾವು ಕನ್ನಡಿಯಲ್ಲಿ ಮುಖ ನೋಡಿಕೊಳ್ಳುವುದಕ್ಕಿಂತ ಮತ್ತೊಬ್ಬರನ್ನು ಅನುಕರಿಸಿ ನಾವು ಅವರಂತೆ ಇಲ್ಲವಲ್ಲ, ಅವರಂತೆ ಆಗಲು ಏನಾದರೂ ಮಾಡಬೇಕಲ್ಲ ಎಂಬ ಹಂಬಲದಿಂದ ವಿಲಾಸಿಯ ಬದುಕಿಗೆ ಜೋತು ಬಿದ್ದು ಬದುಕನ್ನು ನರಳುವಂತೆ ಮಾಡುವುದು ಎಷ್ಟು ಸರಿ? ಹಾಸಿಗೆ ಇಲ್ಲದಿದ್ದರೂ ಚಾಪೆಯಲ್ಲಾದರೂ ಬದುಕನ್ನು ನೇರ್ಪು ಮಾಡಿಕೊಂಡು ಹೋಗುವ ಇರುವುದರಲ್ಲೇ ಆನಂದದ ಜೀವನಕ್ಕೆ ಜೀವಂತಿಕೆಯನ್ನು ನಿರ್ಮಿಸಿದ್ದೇ ಆದರೆ ಬಾಳು ಗೋಳಾಗದೆ ಇರುವ, ಭೂಗೋಳದಲ್ಲಿಯೇ ಸಂತೋಷವನ್ನು ಕಾಣಬಹುದು ಹಾಗೂ ತೃಪ್ತಿದಾಯಕವಾದ ಬದುಕನ್ನು ಬದುಕಲು ಸಾಧ್ಯವಾಗುತ್ತದೆ.

ಅವರಂತೆ ನಾನು ಬದುಕುತ್ತೇನೆ, ಅವರಂತೆಯೇ ಜೀವನವನ್ನು ರೂಪಿಸಿಕೊಳ್ಳುತ್ತೇನೆ, ಅವರಂತೆ ಸಾಧನೆ ಮಾಡುತ್ತೇನೆ ನಮ್ಮ ಆಲೋಚನೆಗಳು ಈ ಬಗೆಯಲ್ಲಿ ಇರಬೇಕೇ ಹೊರತು ಅವರಂತೆಯೇ ಬದುಕನ್ನು ಯಥಾವತ್ತಾಗಿ ಅನುಕರಿಸಲು ಸಾಧ್ಯವಾಗುವುದಿಲ್ಲ. ಸುಂದರ ಕನಸುಗಳಿಗೆ ರೆಕ್ಕೆ ಕಟ್ಟಿ ಆಟವಾಡಿಸುವ ಬಣ್ಣದ ಲೋಕದಲ್ಲಿ ಮಿಂದೇಳುವ ಹಗಲುಗನಸಲ್ಲಿ ಈಜಾಡುವ, ವಾಸ್ತವ ಬದುಕಿಗೆ ಮುಖ ಮಾಡುವ, ಯಾರೋ ಒಬ್ಬರು ಯಾವುದೋ ಕೆಲಸವನ್ನು ಮಾಡಿದರೆಂದು ನಾವು ಅದನ್ನು ಮಾಡಿದರೆ ಅಥವಾ ಮಾಡಲು ಹೊರಟರೆ ನಮ್ಮತನವನ್ನು ಕಳೆದುಕೊಂಡು ಬದುಕಿದಂತಾಗುತ್ತದೆ. ಸಾಮರ್ಥ್ಯಕ್ಕೆ ತಕ್ಕಂತೆ ನಮಗೆ ಇಷ್ಟವಿರುವ ಕೆಲಸಗಳನ್ನು ಮಾಡುತ್ತಾ ಸುಂದರವಾದ ಈ ಬದುಕನ್ನು ಸಾರ್ಥಕವಾಗಿಸಿಕೊಳ್ಳಬೇಕೆಂಬ ವಾಸ್ತವದ ಅರಿವು ನಮ್ಮದಾಗಬೇಕಿದೆ.

ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಸಾಧನಾ ಸಮಾವೇಶ ಹೈಕಮಾಂಡ್ ಬ್ಲಾಕ್‌ಮೇಲ್‌ಗೆ; ಪ್ರಧಾನಿ ಮೋದಿ ಟೀಕಿಸಲು ಮೀಸಲು

● ಶಾಸಕ ಟಿ.ಎಸ್.ಶ್ರೀವತ್ಸ ವಾಗ್ದಾಳಿ ● ಜನರ ತೆರಿಗೆ ಹಣ ಪೋಲು

ಮೈಸೂರು,ಜು.21(ಎಂಟಿವೈ)– ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಕಳೆದ ಶನಿವಾರ ನಡೆದ ಸರ್ಕಾರದ ಸಾಧನಾ ಸಮಾವೇಶ, ಕಾಂಗ್ರೆಸ್ ಹೈಕಮಾಂಡ್ ಬ್ಲಾಕ್‌ಮೇಲ್ ಮಾಡಲು ಹಾಗೂ ಪ್ರಧಾನಿ ಮೋದಿ ಅವರನ್ನು ಟೀಕಿಸಲಷ್ಟೇ ಆಯೋಜಿಸಲಾಗಿತ್ತು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಲೇವಡಿ ಮಾಡಿದ್ದಾರೆ.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಲ್ಲಿ ನಡೆದ ರಾಜ್ಯ ಸರ್ಕಾರದ ಸಮಾವೇಶ ಸರ್ಕಾರದ ಸಾಧನಾ ಸಮಾವೇಶವೋ ಅಥವಾ ಪಕ್ಷದ ಸಮಾವೇಶವೋ ಎಂಬುದನ್ನು ಮುಖ್ಯಮಂತ್ರಿಗಳು ಸ್ಪಷ್ಟಪಡಿಸಬೇಕು. ಕಾರ್ಯಕ್ರಮದ ಆಹ್ವಾನ ಪತ್ರಿಕೆಯಲ್ಲಿ ಮೈಸೂರು ಜಿಲ್ಲೆಗೆ ಸಂಬಂಧಪಡದ ಮಲ್ಲಿಕಾರ್ಜುನ ಖರ್ಗೆ, ರಣದೀಪ್ ಸಿಂಗ್ ಸುರ್ಜೇವಾಲ ಅವರ ಹೆಸರು ಹಾಕಿಸಿದ್ದಾರೆ. ಆದರೆ, ಮಾಜಿ ಪ್ರಧಾನಿ ಹಾಗೂ ಹಿರಿಯ ರಾಜ್ಯಸಭಾ ಸದಸ್ಯ ಹೆಚ್.ಡಿ.ದೇವೇಗೌಡರ ಹೆಸರು ಹಾಕಿಲ್ಲ. ಕಾರ್ಯಕ್ರಮ ಆಹ್ವಾನ ಪತ್ರಿಕೆಯಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹೊರತುಪಡಿಸಿ ರಾಜ್ಯದ ಯಾರೊಬ್ಬರ ಹೆಸರನ್ನೂ ಹಾಕಿಲ್ಲ. ಸರ್ಕಾರಿ ಕಾರ್ಯಕ್ರಮ ಎಂದು ಹೇಳಿಕೊಂಡು ಶಕ್ತಿ ಪ್ರದರ್ಶನ ಸಮಾವೇಶ ಮಾಡಲಾಗಿದೆ. ಈ ಸಾಧನಾ ಸಮಾವೇಶಕ್ಕೂ ಸುರ್ಜೇವಾಲಗೂ ಏನು ಸಂಬಂಧ ಎಂದು ಶ್ರೀವತ್ಸ ಕಿಡಿಕಾರಿದರು.

ಸಮಾವೇಶದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ತೆಗಳುವ ಕಾರ್ಯ ಮಾಡಿದ್ದಾರೆ. ದೇಶಕ್ಕೆ, ರಾಜ್ಯಕ್ಕೆ ಮೋದಿ ಕೊಡುಗೆ ಏನು ಎಂದು ಪ್ರಶ್ನಿಸಿದ್ದಾರೆ. ಮೈಸೂರು ಜಿಲ್ಲೆಗೆ ಕೇಂದ್ರ ಸರ್ಕಾರ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗೆ 2627 ಕೋಟಿ ರೂ., ರೈಲ್ವೆ ಕೆಳಸೇತುವೆಗಳ ನಿರ್ಮಾಣಕ್ಕೆ 170 ಕೋಟಿ ರೂ., ಜಲಜೀವನ್ ಮಿಷನ್ ಯೋಜನೆಯಡಿ 1393 ಕೋಟಿ ರೂ. ಅನುದಾನ ನೀಡಿದೆ. ಇದ್ಯಾವುದನ್ನೂ ಸ್ಮರಿಸದೇ ಸಾಧನಾ ಸಮಾವೇಶ ಮಾಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರದ ಮುದ್ರಾ ಯೋಜನೆಯಡಿ ಮೈಸೂರು ಜಿಲ್ಲೆಗೆ 3 ಸಾವಿರ ಕೋಟಿಗೂ ಹೆಚ್ಚು ಅನುದಾನ ಸಿಕ್ಕಿದೆ. ವಿಶ್ವಕರ್ಮ ಯೋಜನೆಯಡಿ 6 ಸಾವಿರ ಮಂದಿಗೆ ತರಬೇತಿ ನೀಡಲಾಗುತ್ತಿದೆ. ಮುದ್ರಾ ಯೋಜನೆಯಲ್ಲಿ ಮೈಸೂರು ಜಿಲ್ಲೆಯಾದ್ಯಂತ 5,38,000 ಫಲಾನುಭವಿಗಳಿದ್ದಾರೆ. ಈ ಯೋಜನೆಯಡಿ ಇದುವರೆಗೂ 10 ಸಾವಿರ ಕೋಟಿಗೂ ಹೆಚ್ಚಿನ ಅನುದಾನ ನೀಡಲಾಗಿದೆ. ಅದರೂ ಮೈಸೂರು ಜಿಲ್ಲೆಗೆ ಕೇಂದ್ರ ಏನನ್ನೂ ಕೊಟ್ಟಿಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಸುಳ್ಳು ಹೇಳಿದ್ದಾರೆ. ಕೇಂದ್ರ ಸರ್ಕಾರ ಮೈಸೂರು ಜಿಲ್ಲೆಗೆ 20 ಸಾವಿರ ಕೋಟಿ ಅನುದಾನ ನೀಡಿದೆ. ಇದನ್ನು ಕಳೆದ ದಿಶಾ ಸಭೆಯಲ್ಲಿ ಜಿಲ್ಲಾಡಳಿತ ನೀಡಿರುವ ಅಂಕಿ ಅಂಶಗಳಲ್ಲೇ ಬಹಿರಂಗವಾಗಿದೆ. ಈ ಕುರಿತು ಚರ್ಚೆಗೆ ಸಿದ್ಧ ಎಂದು ಸವಾಲು ಹಾಕಿದರು.

ಸಾಧನಾ ಸಮಾವೇಶದಲ್ಲಿ ಸಿಎಂ–ಡಿಸಿಎಂ ಭಿನ್ನಾಭಿಪ್ರಾಯ ಬಹಿರಂಗಪಡಿಸಿದ್ದೇ ಸಾಧನೆ. ಡಿಸಿಎಂ ಡಿ.ಕೆ.ಶಿವಕುಮಾರ್ ತಮಗೆ ಹೇಳಿ ಹೋಗಿದ್ದರೂ ಸೌಜನ್ಯಕ್ಕಾದರೂ ಅವರ ಹೆಸರು ಹೇಳಬಹುದಿತ್ತು. ಆದರೂ ಯಾರೋ ಹಿಂದಿನಿಂದ ಬಂದು ಹೇಳಿದಾಗ ನೀವು ನಡೆದುಕೊಂಡ ರೀತಿ ಸರಿಯೇ? ಸಾಧನಾ ಸಮಾವೇಶದ ನೆಪದಲ್ಲಿ ಬಲ ಪ್ರದರ್ಶನ ಮಾಡಿದ್ದೀರಾ. ಸಮಾವೇಶದಲ್ಲಿ ಪರಸ್ಪರ ವಿಶ್ವಾಸದ ಕೊರತೆಯನ್ನ ಸಾರಿದ್ದೀರಿ. ಒಟ್ಟಾರೆ ಸಿದ್ದರಾಮಯ್ಯರ ಭಾಷಣ ಗಮನಿಸಿದರೆ ಅಧಿಕಾರ ಹಸ್ತಾಂತರ ಮಾಡುವ ಸಂದರ್ಭದಲ್ಲಿ ಚುನಾವಣೆಗೆ ಹೋಗುವ ಹುನ್ನಾರ ನಡೆಸಿದ್ದಾರೇನೊ ಎಂಬ ಅನುಮಾನ ವ್ಯಕ್ತವಾಗುತ್ತಿದೆ. ತೆರಿಗೆದಾರರ ಹಣದಲ್ಲಿ ಸಮಾವೇಶ ಮಾಡಿ ಜನರ ಹಣವನ್ನ ಪೋಲು ಮಾಡಿದ್ದಾರೆ. ಈ ಬಗ್ಗೆ ಮುಂಬರುವ ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ಮಾಧ್ಯಮ ವಕ್ತಾರ ಮೋಹನ್, ಮಹೇಶ್‌ರಾಜೇ ಅರಸ್ ಇದ್ದರು.

ಹಾವೇರಿಯ ತರಕಾರಿ ವ್ಯಾಪಾರಿಗೆ 29 ಲಕ್ಷ ಜಿಎಸ್‌ಟಿ ನೋಟಿಸ್!

ಬೆಂಗಳೂರು, ಜು.21– ಕರ್ನಾಟಕದ ಹಾವೇರಿಯ ತರಕಾರಿ ಮಾರಾಟ ಮಾಡುವ ಸಣ್ಣ ವ್ಯಾಪಾರಿಯೊಬ್ಬನಿಗೆ ಭಾರಿ ಮೊತ್ತದ ತೆರಿಗೆ ಪಾವತಿಸುವಂತೆ ಜಿಎಸ್‌ಟಿ ನೋಟಿಸ್ ನೀಡಲಾಗಿದೆ.

ಅಲ್ಲಿನ ಮುನ್ಸಿಪಲ್ ಹೈಸ್ಕೂಲ್ ಮೈದಾನದ ಬಳಿ ಸಣ್ಣ ತರಕಾರಿ ಅಂಗಡಿ ನಡೆಸುತ್ತಿರುವ ಶಂಕರಗೌಡ ಹಾದಿಮನಿ ಅವರಿಗೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ನಿಯಮಗಳ ಅಡಿಯಲ್ಲಿ 29 ಲಕ್ಷ ರೂ. ಪಾವತಿಸುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ

ಶಂಕರಗೌಡ ಕಳೆದ 4 ವರ್ಷಗಳಿಂದ ತರಕಾರಿಗಳನ್ನು ಮಾರಾಟ ಮಾಡುತ್ತಿದ್ದಾರೆ. ಅವರ ಹೆಚ್ಚಿನ ಗ್ರಾಹಕರು ಯುಪಿಐ ಅಥವಾ ಇತರ ಡಿಜಿಟಲ್ ವ್ಯಾಲೆಟ್‌ಗಳ ಮೂಲಕ ಪಾವತಿಸುತ್ತಾರೆ. ನಾಲ್ಕು ವರ್ಷಗಳಲ್ಲಿ ಅವರು 1.63 ಕೋಟಿ ರೂ.ಗಳ ವಹಿವಾಟು ನಡೆಸಿದ್ದಾರೆ. ಈಗ ಜಿಎಸ್‌ಟಿಯಾಗಿ 29 ಲಕ್ಷ ರೂ.ಗಳನ್ನು ಬಾಕಿ ಉಳಿಸಿಕೊಂಡಿದ್ದಾರೆ ಎಂದು ಜಿಎಸ್‌ಟಿ ಅಧಿಕಾರಿಗಳು ನೋಟಿಸ್ ಕಳುಹಿಸಿದ್ದಾರೆ.

ಶಂಕರಗೌಡ ಅವರು ರೈತರಿಂದ ನೇರವಾಗಿ ತಾಜಾ ತರಕಾರಿಗಳನ್ನು ಖರೀದಿಸಿ ತಮ್ಮ ಸಣ್ಣ ಅಂಗಡಿಯಲ್ಲಿ ಮಾರಾಟ ಮಾಡುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಗ್ರಾಹಕರು ಯುಪಿಐ ಅನ್ನು ಬಳಸುತ್ತಾರೆ. ಏಕೆಂದರೆ ಅವರು ವಿರಳವಾಗಿ ಹಣವನ್ನು ಒಯ್ಯುತ್ತಾರೆ ಎನ್ನುತ್ತಾರೆ ಶಂಕರಗೌಡ. ಪ್ರತಿ ವರ್ಷ ನಾನು ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸುತ್ತೇನೆ ಮತ್ತು ಸರಿಯಾದ ದಾಖಲೆಗಳನ್ನು ಇಟ್ಟಿದ್ದೇನೆ. ಈಗ 29 ಲಕ್ಷ ಪಾವತಿಸುವಂತೆ ನೊಟೀಸ್ ಬಂದಿದೆ ಎಂದು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಈ ಮೊತ್ತವನ್ನು ವ್ಯವಸ್ಥೆ ಮಾಡಲು ಅಸಾಧ್ಯ ಎಂದು ಹೇಳಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ
ಮಂಗಳವಾರ 22 ಜುಲೈ 2025

ಮೀಸಲಾತಿ ಉಲ್ಲಂಘಿಸಿ ಮಹಾರಾಜ, ಯುವರಾಜ ಕಾಲೇಜು ಪ್ರಾಂಶುಪಾಲರ ನೇಮಕಕ್ಕೆ ಅರ್ಜಿ ಆಹ್ವಾನ

ಪ್ರಕ್ರಿಯೆ ರದ್ದತಿಗೆ ಮಾಜಿ ಮೇಯರ್ ಪುರುಷೋತ್ತಮ್ ಆಗ್ರಹ

ಮೈಸೂರು,ಜು.21(ಜಿಎ)–ಮೈಸೂರಿನ ಮಹಾರಾಜ ಮತ್ತು ಯುವರಾಜ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ನೇಮಕಾತಿಗಾಗಿ ಮೀಸಲಾತಿ ಅನುಸರಿಸದೇ, ನಿಯಮಗಳನ್ನು ಗಾಳಿಗೆ ತೂರಿ ಮೈಸೂರು ವಿವಿ ಅರ್ಜಿ ಆಹ್ವಾನಿಸಿದೆ. ಹೀಗಾಗಿ ನೇಮಕಾತಿ ಪ್ರಕ್ರಿಯೆ ರದ್ದುಗೊಳಿಸಬೇಕು ಎಂದು ಮಾಜಿ ಮೇಯರ್ ಪುರುಷೋತ್ತಮ್, ಮೊದಲಾದವರು ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಲೇಜುಗಳ ಪ್ರಾಂಶುಪಾಲರ ನೇಮಕಕ್ಕೆ ಮೈಸೂರು ವಿವಿ ಹೊರಡಿಸಿರುವ ಪ್ರಕಟಣೆ ಎಸ್‌ಸಿ, ಎಸ್‌ಟಿ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿ ನಿರ್ಲಕ್ಷಿಸಿ, ಕಾನೂನುಬಾಹಿರವಾಗಿದೆ. ಹೀಗಾಗಿ ತಾವು ರಾಜ್ಯಪಾಲರು, ಶಿಕ್ಷಣ ಇಲಾಖೆ ಮೊದಲಾದವರಿಗೆ ಮನವಿ ಸಲ್ಲಿಸಿ ಪ್ರಕ್ರಿಯೆ ರದ್ದುಗೊಳಿಸಬೇಕು ಎಂದು ಒತ್ತಾಯಿಸುವುದಾಗಿ ತಿಳಿಸಿದರು.


ಪುರುಷೋತ್ತಮ್

ಮೈಸೂರು ವಿವಿಯ ಈ ಕೆಲಸ ಉನ್ನತ ಶಿಕ್ಷಣಕ್ಕೆ ಅಗೌರವ ತರುವಂತದ್ದಾಗಿದೆ. ಕೇಂದ್ರ ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಮೈಸೂರು ವಿವಿಯಲ್ಲಿ ಮಹಾರಾಜ ಕಾಲೇಜು, ಯುವರಾಜ ಕಾಲೇಜು, ವಿವಿ ಸಂಜೆ ಕಾಲೇಜು, ಲಲಿತ ಕಲಾ ಕಾಲೇಜುಗಳೆಂಬ 4 ಕಾಲೇಜುಗಳು ಇವೆ. ಆದರೆ ಇವುಗಳಲ್ಲಿ ಎರಡಕ್ಕೆ ಮಾತ್ರ ಪ್ರಕಟಣೆ ಹೊರಡಿಸಿದ್ದು, ಉಳಿದವಕ್ಕೆ ಏಕೆ ಹೊರಡಿಸಿಲ್ಲ. ಈ ಪ್ರಕಟಣೆ ವೇಳೆ ಮೀಸಲಾತಿ ಅನುಸರಿಸಿಲ್ಲ ಎಂದು ಆರೋಪಿಸಿದರು.


ನೇಮಕಾತಿಗಾಗಿ ಹೊರಡಿಸಿರುವ ಪ್ರಕಟಣೆಗೆ ಮೈಸೂರು ವಿವಿ ಸಿಂಡಿಕೇಟ್ ಅನುಮತಿ ನೀಡಿದೆಯೇ? ಸರ್ಕಾರ ಹಣಕಾಸು ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಅನುಮತಿಯನ್ನು ಪಡೆಯಲಾಗಿದೆಯೇ ಎಂಬುದನ್ನು ಸ್ಪಷ್ಟಪಡಿಸಿಲ್ಲ. ಹೀಗಾಗಿ ಈ ಪ್ರಕ್ರಿಯೆ ರದ್ದುಗೊಳಿಸಬೇಕು. ಇಲ್ಲದಿದ್ದರೆ ಹೋರಾಟ ನಡೆಸಲಾಗುವುದೆಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು, ಸಿ.ಹರಕುಮಾರ್, ಸಿದ್ದಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಮಾಜಿ ಸಚಿವ ಡಾ.ಅಶ್ವತ್ ನಾರಾಯಣ್‌ಗೆ ಸನ್ಮಾನ...


ನೂತನವಾಗಿ ಬಿಜೆಪಿಗೆ ಸೇರ್ಪಡೆಗೊಂಡ ವಾಯುಪುತ್ರ ಡೆವಲಪರ್ಸ್‌ನ ಮಾಲೀಕರೂ ಆದ ಬಿಜೆಪಿ ಮುಖಂಡ ಚಲುವರಾಜು, ಮಾಜಿ ಸಚಿವ ಡಾ.ಅಶ್ವತ್ ನಾರಾಯಣ್ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಆತ್ಮೀಯವಾಗಿ ಸನ್ಮಾನಿಸಿ, ಆಶೀರ್ವಾದ ಪಡೆದರು. ಈ ವೇಳೆ ವೇದರಾಜು, ಹೇಮಂತ್‌ಕುಮಾರ್, ಅಪ್ಪಾಜಿಗೌಡ, ಡಾ.ಮನು ಶಿವರಾಮು, ಚಿನ್ನಸ್ವಾಮಿ, ಮಹದೇವಸ್ವಾಮಿ, ರಾಜೇಶ್, ತಿರುಮಲ್ಲೇಶ್, ಕುಮಾರ್ ಇತರರಿದ್ದರು.

ಕುಂಬ್ರಳ್ಳಿ ಸುಬ್ಬಣ್ಣರಿಗೆ ಹುಟ್ಟುಹಬ್ಬದ ಶುಭಾಶಯ...


ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಮೈಸೂರು ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈವೇಳೆ ನಗರ ಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಟೆನ್ನಿಸ್ ಗೋಪಿ, ಕೆ.ಆರ್.ಕ್ಷೇತ್ರ ಅಧ್ಯಕ್ಷ ನಂದೀಶ್‌ನಾಯಕ, ರಾಜ್ಯ ಕಾರ್ಯಕಾರಿಣಿ ಸದಸ್ಯ ಮಹೇಶ್, ಚಾಮುಂಡೇಶ್ವರಿ ಕ್ಷೇತ್ರ ಬಿಜೆಪಿ ಮುಖಂಡ ಗೊರೂರು ಶಿವು, ಪಾಲಿಕೆ ಮಾಜಿ ಸದಸ್ಯ ಗುರು ವಿನಾಯಕ್, ಉದ್ಬೂರು ಉಮೇಶ, ಹಂಚ್ಯಾ ರವಿಕುಮಾರ್, ದಂಡನಾಯಕ ಇನ್ನಿತರರು ಉಪಸ್ಥಿತರಿದ್ದರು.

ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್‌ನಿಂದ ಕ್ರೀಡಾಕೂಟ

ಮೈಸೂರು,ಜು.21–ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಆ.3ರಂದು ಬೆಳಗ್ಗೆ 9 ಗಂಟೆಯಿಂದ ಹಿರಿಯ ನಾಗರಿಕರು, ಟ್ರಸ್ಟ್‌ನ ಸದಸ್ಯರು ಹಾಗೂ ವಿದ್ಯಾರ್ಥಿಗಳು, ಪುರುಷ ಮತ್ತು ಮಹಿಳೆಯರಿಗಾಗಿ ವಿವೇಕಾನಂದ ಕ್ರೀಡಾಂಗಣದಲ್ಲಿ ಕ್ರೀಡಾಕೂಟ ಏರ್ಪಡಿಸಲಾಗಿದೆ. ಆಸಕ್ತ ಒಕ್ಕಲಿಗ ಹಿರಿಯ ನಾಗರಿಕರು, ಬಾಲಕ, ಬಾಲಕಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9844145183, 9900181634 ಸಂಪರ್ಕಿಸಬಹುದು.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ನಾಳೆಯಿಂದ ಕೈಮಗ್ಗ ವಸ್ತುಪ್ರದರ್ಶನ, ಮಾರಾಟ 'ಹಾಥ್ ಕರ್ಘಾ ಉತ್ಸವ್'

ಮೈಸೂರು, ಜು.21(ಜಿಎ)–ಮೈಸೂರಿನ ರಿಂಗ್‌ರಸ್ತೆಯಲ್ಲಿರುವ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ರಾಜ್ಯ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ 'ಹಾಥ್ ಕರ್ಘಾ ಉತ್ಸವ್' ಜು.23ರಿಂದ ಆ.5ರ ವರೆಗೆ ನಡೆಯಲಿದೆ ಎಂದು ಕಾವೇರಿ ಹ್ಯಾಂಡ್‌ಲೂಮ್ಸ್ ವ್ಯವಸ್ಥಾಪಕ ಜಿ.ಪಿ. ಶ್ರೀನಿವಾಸ ಮೂರ್ತಿ ತಿಳಿಸಿದರು.


ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಕಾವೇರಿ ಹ್ಯಾಂಡ್‌ಲೂಮ್ಸ್ ವ್ಯವಸ್ಥಾಪಕ ಜಿ.ಪಿ.ಶ್ರೀನಿವಾಸ ಮೂರ್ತಿ ಮಾತನಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜವಳಿ ಅಭಿವೃದ್ಧಿ, ಕೈಮಗ್ಗ ಜವಳಿ ಮಂತ್ರಾಲಯ, ರಾಜ್ಯ ಸಹಕಾರಿ ಕೈಮಗ್ಗ ನೇಕಾರರ ಮಹಾಮಂಡಳಿ, ಕಾವೇರಿ ಹ್ಯಾಂಡಲೂಮ್ಸ್, ಜೆಎಸ್‌ಎಸ್ ಮಹಾವಿದ್ಯಾಪೀಠದ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಸಹಯೋಗದೊಂದಿಗೆ ಮೇಳ ಆಯೋಜಿಸುತ್ತಿದ್ದು, ನೇಕಾರರು ಮತ್ತು ಸಹಕಾರ ಸಂಘಗಳ ಕೈಮಗ್ಗ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ಒದಗಿಸುವ ದೃಷ್ಟಿಯಿಂದ ಇಂತಹ ಮೇಳವನ್ನು ಆಯೋಜನೆ ಮಾಡಲಾಗುತ್ತದೆ ಎಂದರು.

ಮೇಳವನ್ನು ಜು.23ರಂದು ಸಂಜೆ 4 ಗಂಟೆಗೆ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ. ಶಾಸಕ ರಮೇಶ್ ಬಂಡಿಸಿದ್ದೇಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕ ಜಿ.ಟಿ. ದೇವೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ತಿಳಿಸಿದರು.

ಈ ವೃತ್ತಿಯನ್ನು ಅವಲಂಬಿಸಿ ಜೀವನ ನಿರ್ವಹಣೆ ಮಾಡುತ್ತಿರುವ ನೇಕಾರರ ಕುಟುಂಬಗಳಿಗೆ ಒಂದೇ ಸೂರಿನಡಿಯಲ್ಲಿ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಅವಕಾಶವನ್ನು ಕಲ್ಪಿಸಿಕೊಡಲಾಗುತ್ತಿದೆ ಎಂದರು. ರಾಜ್ಯದ ಮೊಳಕಾಲ್ಮೂರು ಸೀರೆ ಇಳಕಲ್, ಸೀರೆ, ಕಸೂತಿ ಸೀರೆ, ಕಾಟನ್ ಸೀರೆಗಳು, ನೆಲ ಹೊದಿಕೆಗಳು ಬೆಡ್‌ಶೀಟ್‌ಗಳು, ತಮಿಳುನಾಡು ರಾಜ್ಯದ ಪರಿಶುದ್ಧ ಕಾಂಜಿವರಂ ಸೀರೆಗಳು, ಕೇರಳದ ಕೈಮಗ್ಗ ಉತ್ಪನ್ನಗಳು, ಬಿಹಾರ್ ಮತ್ತು ಜಾರ್ಖಂಡ್ ರಾಜ್ಯದ ತಸ್ಸರ್ ಸೀರೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಸೀರೆ, ಕಾಟನ್ ಸೀರೆಗಳು, ಉತ್ತರ ಪ್ರದೇಶ ರಾಜ್ಯದ ಬನಾರಸಿ ಸಿಲ್ಕ್ ಸೀರೆಗಳು, ಚಿಕನ್ ಎಂಬ್ರಾಡರಿ ಸೀರೆಗಳು, ಮಧ್ಯಪ್ರದೇಶದ ಚಂದೇರಿ, ಮಹೇಶ್ವರಿ ಸಿಲ್ಕ್ ಸೀರೆಗಳು, ಒರಿಸ್ಸಾ ರಾಜ್ಯದ ಸಂಬಲ್ಪುರಿ ಸೀರೆ,ಇಕ್ಕತ್ ಸೀರೆಗಳು, ಬೋಂಕಾಯಿ ಸೀರೆ, ಕಾಶ್ಮೀರದ ಪಶ್ಮೀನಾ ಶಾಲ್‌ಗಳು, ಆಂಧ್ರಪ್ರದೇಶದ ಗೊದ್ವಲ್, ಕಲಮ್ಕಾರಿ ಸೀರೆಗಳು, ಪೋಚಂಪಲ್ಲಿ ಸೀರೆಗಳು, ಗುಜರಾತ್‌ನ ಪಟೋಲಾ ಸೀರೆಗಳು ವಿವಿಧ ರಾಜ್ಯಗಳ ಡ್ರೆಸ್ ಮೆಟೀರಿಯಲ್‌ಗಳು ಹಾಗೂ ಕರಕುಶಲಕರ್ಮಿಗಳ ಕರಕುಶಲ ವಸ್ತುಗಳು ಇಲ್ಲಿ ದೊರೆಯುತ್ತವೆ. ಶೇ.20ರ ದರದಲ್ಲಿ ಉತ್ಪನ್ನಗಳನ್ನು ಗ್ರಾಹಕರು ಖರೀದಿಸಬಹುದು ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ಅರ್ಬನ್ ಹಾತ್ ಯೋಜನಾಧಿಕಾರಿ ಶಿವನಂಜಸ್ವಾಮಿ, ಸಂಯೋಜನಾಧಿಕಾರಿ ರಾಕೇಶ್ ರೈ ಇದ್ದರು.

ಮೇಳದಲ್ಲಿ ದೇಶದ ಸುಮಾರು 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳು ಪ್ರದರ್ಶನ ಮತ್ತು ಮಾರಾಟಗೊಳ್ಳುತ್ತಿವೆ.

ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನಿಂದ ಸಾಧಕರಿಗೆ ಸನ್ಮಾನ; ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ


ಮೈಸೂರಿನ ವಿಜಯನಗರ(ಹೆಬ್ಬಾಳು) ರೈಲ್ವೆ ಬಡಾವಣೆಯಲ್ಲಿರುವ ರಂಗಮಂದಿರದಲ್ಲಿ ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಹಮ್ಮಿಕೊಂಡಿದ್ದ ಶೈಕ್ಷಣಿಕ ಸಾಧಕರಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು. ಈ ವೇಳೆ ಮಂಡ್ಯ ಡಿಸಿ ಡಾ.ಕುಮಾರ್, ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಮಾಜಿ ಕಾರ್ಪೋರೇಟರ್‌ಗಳಾದ ಕೆ.ವಿ.ಶ್ರೀಧರ್, ಶಿವಣ್ಣ ಉಪಸ್ಥಿತರಿದ್ದರು.

ಸಾಧಕರ ಸಂದೇಶ ಸಮಾಜಕ್ಕೆ ತಿಳಿಸಲು ಜಯಂತಿ ಆಚರಣೆ

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು

ಮೈಸೂರು,ಜು.21–ಸಾಧಕರ ಸಂದೇಶಗಳು, ಜೀವನ ಮೌಲ್ಯಗಳನ್ನು ಸಮಾಜಕ್ಕೆ ಸಾರುವ ಸಲುವಾಗಿ ವಿವಿಧ ಮಹನೀಯರ ಜಯಂತಿಗಳ ಆಚರಣೆ ಮಾಡಲಾಗುತ್ತಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ತಿಳಿಸಿದರು

ಇಂದು ಡಿಸಿ ಕಚೇರಿ ಸಭಾಂಗಣದಲ್ಲಿ ನುಲಿಯ ಚಂದಯ್ಯ ಜಯಂತಿ, ಶ್ರೀ ಕೃಷ್ಣ ಜಯಂತಿ ಆಚರಣೆ ಸಂಬಂಧ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ಆ.16ರಂದು ಶ್ರೀಕೃಷ್ಣ ಜಯಂತಿಯನ್ನು ಕಲಾಮಂದಿರದ ಕಿರುಮಂದಿರದಲ್ಲಿ ಆಚರಣೆ ಮಾಡಲಾಗುವುದು. ವೇದಿಕೆ ಮೇಲೆ ಗೀತಾ ಗಾಯನ ಏರ್ಪಡಿಸಲಾಗುವುದು. ಸಮುದಾಯದ ಮುಖಂಡರ ಸಲಹೆಯಂತೆ ಡಾ. ಶೆಲ್ವ ಪಿಳ್ಳೆ ಅಯ್ಯಂಗಾರ್ ಅವರನ್ನು ಶ್ರೀ ಕೃಷ್ಣನ ಕುರಿತು ವಿಶೇಷ ಉಪನ್ಯಾಸ ನೀಡಲು ಆಹ್ವಾನಿಸಲಾಗುವುದು ಎಂದರು.


ಡಾ.ಶಿವರಾಜು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಸುದರ್ಶನ್ ಮಾತನಾಡಿ, ಮೆರವಣಿಗೆಗೆ ಕಲಾ ತಂಡಗಳನ್ನು ನೀಡಲಾಗುವುದು. ಕಲಾಮಂದಿರದಲ್ಲಿ ಗೀತಾ ಗಾಯನ ಏರ್ಪಡಿಸಲಾಗುವುದು ಎಂದರು. ಸಮುದಾಯದ ಮುಖಂಡರು, ನುಲಿಯ ಚಂದಯ್ಯ ಜಯಂತಿಗೆ ಬೇರೆ ದಿನಾಂಕ ತಿಳಿಸಲಾಗುವುದು. ತಮ್ಮ ತಮ್ಮ ಜಯಂತಿಗಳ ಆಚರಣೆಯ ದಿವ್ಯ ಸಾನ್ನಿಧ್ಯಕ್ಕೆ ತಮ್ಮ ಸಮುದಾಯದ ಸ್ವಾಮೀಜಿಗಳ, ವಿಶೇಷ ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಗಳನ್ನು ಆಯ್ಕೆ ಮಾಡಿ ಕಳಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧ ಜಯಂತಿಗಳ ಆಚರಣೆಯ ಸಂಬಂಧ ಸಮುದಾಯಗಳ ಮುಖಂಡರು ಉಪಸ್ಥಿತರಿದ್ದರು.

ಪತ್ರಿಕೋದ್ಯಮದ ಮೂಲಕ ಮೈಸೂರು ಅಭಿವೃದ್ಧಿಗೂ ಕೆಬಿಜಿ ಕೊಡುಗೆ

● ಕೆ.ಟಿ.ಹನುಮಂತು ಬಣ್ಣನೆ ● ವಿವಿಧ ಸಂಘಟನೆಗಳಿಂದ ನುಡಿನಮನ

ಮಂಡ್ಯ, ಜು.21– 'ಮೈಸೂರು ಮಿತ್ರ ಹಾಗೂ ಸ್ಟಾರ್ ಆಫ್ ಮೈಸೂರ್' ದಿನಪತ್ರಿಕೆಗಳ ಸಂಸ್ಥಾಪಕ ಸಂಪಾದಕ ಡಾ.ಕೆ.ಬಿ.ಗಣಪತಿಯವರು ಪತ್ರಿಕೋದ್ಯಮದ ಭೀಷ್ಮನಂತಿದ್ದರು. ಅವರ ಅಗಲಿಕೆಯಿಂದ ಪತ್ರಿಕಾ ಕ್ಷೇತ್ರಕ್ಕೆ ಅಪಾರ ನಷ್ಟವಾಗಿದೆ ಎಂದು ಅಸೋಸಿಯೇಷನ್ ಆಫ್ ಅಲಯನ್ಸ್ ಇಂಟರ್‌ನ್ಯಾಷನಲ್ ಕ್ಲಬ್ ಸೌತ್ ಮಲ್ಟಿಪಲ್ ಕೌನ್ಸಿಲ್ ಅಧ್ಯಕ್ಷ ಕೆ.ಟಿ.ಹನುಮಂತು ವಿಷಾದಿಸಿದರು.

ಮಂಡ್ಯ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಜಿಲ್ಲಾ ಕೃಷಿಕ ಅಲಯನ್ಸ್ ಸಂಸ್ಥೆ ಹಾಗೂ ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ ಅವರ ಸಂಯುಕ್ತಾಶ್ರಯದಲ್ಲಿ ಸೋಮವಾರ ನಗರದ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಆಯೋಜಿಸಿದ್ದ ಇತ್ತೀಚೆಗೆ ಅಗಲಿದ ಡಾ.ಕೆ.ಬಿ.ಗಣಪತಿ ಅವರ ನುಡಿನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕೊಡಗು ಜಿಲ್ಲೆಯಲ್ಲಿ ಗಣಪತಿ ಅವರು ಹುಟ್ಟಿದ್ದರೂ ಅವರ ಕಾರ್ಯ ಕ್ಷೇತ್ರ ಮೈಸೂರು ಆಗಿತ್ತು. ಬಾಲ್ಯದಿಂದಲೇ ಸಂಸ್ಕಾರವಂತರಾಗಿದ್ದ ಡಾ.ಕೆಬಿಜಿ ಅವರು, ವಕೀಲಿಕೆ ಮೂಲಕ ವೃತ್ತಿ ಜೀವನ ಆರಂಭಿಸಿದರೂ ಅವರನ್ನು ಪತ್ರಿಕೋದ್ಯಮ ಕೈ ಬೀಸಿ ಕರೆಯಿತು. ಹಾಗಾಗಿ ಮುಂಬೈನಲ್ಲಿ ಪತ್ರಿಕೋದ್ಯಮದ ಡಿಪ್ಲೊಮಾ ಮುಗಿಸಿ ಆ ಕಾಲದಲ್ಲೇ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಸಹ ಸಂಪಾದಕರಾಗಿ ಕಾರ್ಯನಿರ್ವಹಿಸುವ ಮೂಲಕ ಹೆಸರು ಮಾಡಿದರು. ನಂತರ ಹಲವು ಪತ್ರಿಕೆಗಳಲ್ಲಿ ಕೆಲಸ ಮಾಡಿದ ತರುವಾಯ ಮೈಸೂರಿಗೆ ಬಂದು 1978ರಲ್ಲಿ 'ಸ್ಟಾರ್ ಆಫ್ ಮೈಸೂರು' ಪತ್ರಿಕೆಯನ್ನು ಆಂಗ್ಲ ಭಾಷೆಯಲ್ಲಿ ಪ್ರಾರಂಭಿಸಿ, 1980ರಲ್ಲಿ 'ಮೈಸೂರು ಮಿತ್ರ' ಕನ್ನಡ ಪತ್ರಿಕೆ ಪ್ರಾರಂಭಿಸಿ 5 ಜಿಲ್ಲೆಗೆ ವಿಸ್ತರಣೆ ಮಾಡಿ, ಎರಡೂ ಪತ್ರಿಕೆಗಳನ್ನು ಓದುಗರ ಸದಭಿರುಚಿಗೆ ತಕ್ಕಂತೆ ನಡೆಸಿಕೊಂಡು ಬಂದ ಹೆಗ್ಗಳಿಕೆ ಅವರಿಗೆ ಸಲ್ಲುತ್ತದೆ ಎಂದು ಸ್ಮರಿಸಿದರು.

ಹಲವು ಯುವ ಪತ್ರಕರ್ತರ ಪ್ರತಿಭೆ ಹೊರಹೊಮ್ಮಿದ್ದೇ 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಪತ್ರಿಕೆಗಳ ಮೂಲಕ. ಇಂದು ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಈ ಎರಡು ಸಂಸ್ಥೆಯಲ್ಲಿ ಕೆಲಸ ಮಾಡಿದ ಪತ್ರಕರ್ತರಿದ್ದಾರೆ. ವಿಶ್ವನಾಥ್ ಮತ್ತು ಪ್ರತಾಪ್ ಸಿಂಹರಂತಹ ರಾಜಕಾರಣಿಗಳು ರಾಜಕೀಯವಾಗಿ ಹೊರ ಹೊಮ್ಮಲು ಉತ್ತಮ ವೇದಿಕೆಯನ್ನು ಗಣಪತಿ ಅವರು ಒದಗಿಸಿಕೊಟ್ಟಿದ್ದರು ಎಂದು ಸ್ವತಃ ಅವರೇ ಹೇಳಿಕೊಂಡಿದ್ದಾರೆ. ಇದು ಗಣಪತಿ ಅವರ ಬರವಣಿಗೆಗೆ ಇದ್ದ ಶಕ್ತಿ ಎಂದು ಬಣ್ಣಿಸಿದರು.

ಪತ್ರಿಕೋದ್ಯಮದ ಜೊತೆಗೆ ಸಾಹಿತ್ಯ ಕ್ಷೇತ್ರದಲ್ಲಿ ಅನೇಕ ಕಾದಂಬರಿ ಬರೆದಿದ್ದು, ಪ್ರವಾಸೋದ್ಯಮ ಕ್ಷೇತ್ರದಲ್ಲೂ ಹೆಸರು ಮಾಡಿದ್ದಾರೆ. ಭೂಮಂತ್ರದ ಮೂಲಕ ಒಳ್ಳೆ ಅಂಕಣಗಳನ್ನು ಬರೆಯುವ ಮೂಲಕ


ಪತ್ರಿಕೋದ್ಯಮಿ ಡಾ.ಕೆ.ಬಿ.ಗಣಪತಿ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಮೈಸೂರು ಅಭಿವೃದ್ಧಿಗೆ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಮೈಸೂರು ಅಭಿವೃದ್ಧಿ, ನಾಡು, ನುಡಿ, ಜಲಕ್ಕಾಗಿ ತಮ್ಮ ಬರವಣಿಗೆ ಮೂಲಕ ಹಲವು ಕೊಡುಗೆ ನೀಡಿದ್ದಾರೆ ಎಂದು ತಿಳಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಕೆ.ಎನ್.ರವಿ ಮಾತನಾಡಿ, ಡಾ.ಕೆ.ಬಿ. ಗಣಪತಿ ಅವರನ್ನು ಹತ್ತಿರದಿಂದ ಬಲ್ಲವನು ನಾನು. ಮೈಸೂರು ಮಿತ್ರ, ಆಂದೋಲನ ದಿನಪತ್ರಿಕೆಯಲ್ಲಿ ಹಲವು ವರ್ಷ ಕಾರ್ಯ ನಿರ್ವಹಿಸಿದ್ದೆ. ಆಂದೋಲನ ಪತ್ರಿಕೆಯ ರಾಜಶೇಖರ ಕೋಟಿ ಅವರಿಂದ ಸಾಮಾಜಿಕ ಕಳಕಳಿ ಬಗ್ಗೆ ಕಲಿತರೆ ಗಣಪತಿ ಅವರಿಂದ ಶಿಸ್ತು, ಪ್ರಾಮಾಣಿಕತೆ ಹಾಗೂ ಸಾಮಾಜಿಕ ಬದ್ಧತೆಯನ್ನು ನಾನು ಸೇರಿದಂತೆ ಹಲವು ಪತ್ರಕರ್ತರು ಕಲಿತಿದ್ದೇವೆ ಎಂದು ಹೇಳಿದರು.

ನಾನು ಹಲವು ವರ್ಷ ಪತ್ರಿಕೋದ್ಯಮದಲ್ಲಿ ದುಡಿದು ಸ್ವಲ್ಪ ವಿರಾಮ ತೆಗೆದುಕೊಂಡಿದ್ದಾಗ ಗಣಪತಿ ಅವರೇ ನನ್ನನ್ನು ಖುದ್ದಾಗಿ ಕರೆದು 'ಮೈಸೂರು ಮಿತ್ರ' ಪತ್ರಿಕೆಯ ಜಿಲ್ಲಾ ವರದಿಗಾರ ಹುದ್ದೆ ನೀಡಿದ್ದರು. ಹಾಗೆ ಕೆಲಸ ಮಾಡುವ ಹಂಬಲ ಇರುವವರನ್ನು ಕರೆದು ಕೆಲಸ ಕೊಡುವ ವೃತ್ತಿಯನ್ನು

> ಈಗ 'ಮೈಸೂರು ಮಿತ್ರ', 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳು ಮನೆ ಮಾತಾಗಿದ್ದು, 'ಮೈಸೂರು ಮಿತ್ರ' 2ರಿಂದ 3 ಲಕ್ಷಕ್ಕೂ ಹೆಚ್ಚು ಓದುಗರಿದ್ದರೆ, 'ಸ್ಟಾರ್ ಆಫ್ ಮೈಸೂರ್' ಪತ್ರಿಕೆ ಓದುಗರ ಸಂಖ್ಯೆ ಲಕ್ಷಕ್ಕೂ ಮೀರಿದೆ. ಮೈಸೂರು ಎಂದರೆ ನೆನಪಾಗುವುದು ಮೈಸೂರು ಮಲ್ಲಿಗೆ ಮತ್ತು ಮೈಸೂರು ಪಾಕ್. ಅದರಷ್ಟೇ ಸರಿಸಮಾನವಾಗಿ ಮೈಸೂರಿನಲ್ಲಿ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಮನೆ ಮಾತಾಗಿವೆ. –ಕೆ.ಟಿ.ಹನುಮಂತು.

ಗಣಪತಿ ಅವರು ಮೈಗೂಡಿಸಿಕೊಂಡಿದ್ದರು. ಮಂಡ್ಯ ಜಿಲ್ಲೆಯಲ್ಲಿ ಪ್ರತಿಭೆ ಇರುವ ಹಲವು ಪತ್ರಕರ್ತರಿಗೆ ಅವಕಾಶ ಮಾಡಿಕೊಟ್ಟಿದ್ದು ಗಣಪತಿ ಅವರು. ಅವರ ಜೀವಿತಾವಧಿವರೆಗೂ ಪತ್ರಿಕೋದ್ಯಮದ ಬಗ್ಗೆ ಆಸಕ್ತಿ ಹೊಂದಿದ್ದರು ಎಂದು ಬಣ್ಣಿಸಿದರು.

ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ಎನ್.ನವೀನ್ ಕುಮಾರ್ ಮಾತನಾಡಿ, ಡಾ.ಕೆ.ಬಿ.ಗಣಪತಿ ಅವರದ್ದು ಪ್ರತಿ ಪತ್ರಕರ್ತರನ್ನು ಆಕರ್ಷಿಸುವ ವ್ಯಕ್ತಿತ್ವವಾಗಿತ್ತು. ಇಂದು ಒಂದು ಪತ್ರಿಕೆ ನಡೆಸುವುದು ಬಹಳ ಕಷ್ಟ, ಆದರೆ 1975ರಿಂದ ನಿರಂತರವಾಗಿ ಎರಡು ಪತ್ರಿಕೆಗಳನ್ನು ಯಶಸ್ವಿಯಾಗಿ ನಡೆಸುತ್ತಾ ಬಂದಿರುವುದು ಸಾಮಾನ್ಯ ವಿಷಯವಲ್ಲ. ಇಂದಿಗೂ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗೆ ಈ ಭಾಗದಲ್ಲಿ ಸಾಕಷ್ಟು ಬೇಡಿಕೆ ಇದೆ. ಪತ್ರಿಕೆಗಳು ಮನೆ ತಲುಪಲಿಲ್ಲ ಎಂದರೆ ಏಜೆಂಟ್‌ಗಳಿಗೆ ಕರೆ ಮಾಡಿ ಪತ್ರಿಕೆಗಳನ್ನು ತರಿಸಿಕೊಳ್ಳುತ್ತಾರೆ. ಈ ಪತ್ರಿಕೆಗಳ ಸಿಬ್ಬಂದಿಗಳು ಜಾಹೀರಾತನ್ನು ಹೋಗಿ ತರಬೇಕಾದ ಅವಶ್ಯಕತೆ ಇಲ್ಲ. ಎರಡು ಪತ್ರಿಕೆಗಳ ಬೇಡಿಕೆಗೆ ತಮ್ಮ ಬಳಿಗೆ ಜಾಹೀರಾತು ಹುಡುಕಿ ಬರುತ್ತವೆ. ಅದು ಈ ಎರಡು ಪತ್ರಿಕೆಗಳಿಗಿರುವ ಶಕ್ತಿಯಾಗಿದೆ. ಈ ಶಕ್ತಿಯ ಹಿಂದೆ ಇದ್ದವರೇ ಗಣಪತಿ ಅವರು ಎಂದು ಪ್ರಶಂಸಿಸಿದರು.

ಈ ವೇಳೆ ಗಾಯಕಿ ಐಶ್ವರ್ಯ ಹೆಚ್.ಎಸ್.ವೆಂಕಟೇಶಮೂರ್ತಿ ರಚನೆಯ 'ತೂಗು ಮಂಚದಲ್ಲಿ ಕೂತು' ಗೀತೆ ಹಾಡಿ ಗೀತನಮನ ಸಲ್ಲಿಸಿದರು. ವೇದಿಕೆಯಲ್ಲಿ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ನವೀನ್ ಚಿಕ್ಕಮಂಡ್ಯ, ಖಜಾಂಚಿ ಆರ್.ಎನ್.ನಂಜುಂಡಸ್ವಾಮಿ, ಹಿರಿಯ ಪತ್ರಕರ್ತ ಕಬ್ಬನಹಳ್ಳಿ ಶಂಭು, ಪ್ರತಿಭಾಂಜಲಿ ಸುಗಮ ಸಂಗೀತ ಅಕಾಡೆಮಿ ಅಧ್ಯಕ್ಷ ಡೇವಿಡ್, ಅಸೋಸಿಯೇಷನ್ ಆಫ್ ಅಲಯನ್ಸ್‌ನ ಉಪರಾಜ್ಯಪಾಲ ಚಂದ್ರಶೇಖರ್, 'ಮೈಸೂರು ಮಿತ್ರ' ಜಿಲ್ಲಾ ವರದಿಗಾರ ಎಂ.ಕೆ.ಮೋಹನ್‌ರಾಜ್ ಸೇರಿದಂತೆ ಹಲವು ಮಂದಿ ಪತ್ರಕರ್ತರು, ವಿವಿಧ ಸಂಘಟನೆಯ ಮುಖಂಡರು ಉಪಸ್ಥಿತರಿದ್ದರು.

ಹೆಚ್‌ಎಂಟಿ ಕಾರ್ಖಾನೆ ಪುನಶ್ಚೇತನ ಸಂಬಂಧ

ಪ್ರಧಾನಿ ಮೋದಿ, ಹೆಚ್‌ಡಿಕೆ ವಿರುದ್ಧ ಸುರ್ಜೇವಾಲ ಹೇಳಿಕೆಗೆ ಖಂಡನೆ

ಕೆ.ಆರ್.ಪೇಟೆ, ಜು.21– ದೇಶದ ಪ್ರತಿಷ್ಠಿತ ಹೆಚ್‌ಎಂಟಿ ಕಾರ್ಖಾನೆ ಪುನಶ್ಚೇತನಕ್ಕೆ ಮುಂದಾಗಿರುವ ಪ್ರಧಾನಿ ಮೋದಿ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡಲು ಹೊರಟಿದ್ದಾರೆ ಎಂದಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿಕೆಯನ್ನು ಶಾಸಕ ಹೆಚ್.ಟಿ.ಮಂಜು ಖಂಡಿಸಿದ್ದಾರೆ.

ಪಟ್ಟಣದ ತಾಲೂಕು ಯುವ ಜೆಡಿಎಸ್ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುರ್ಜೇವಾಲ ಅವರಿಗೆ ಹೆಚ್‌ಎಂಟಿ ಕಾರ್ಖಾನೆ ಬಗ್ಗೆ ಮಾಹಿತಿ ಕೊರತೆ ಇದೆ. ಸುರ್ಜೇವಾಲ ಸರಿಯಾದ ಮಾಹಿತಿ ಪಡೆಯದೇ ಅವೈಜ್ಞಾನಿಕ ಹಾಗೂ ಅಪ್ರಬುದ್ಧರಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿದರು.

1961ರಲ್ಲಿ ಬೆಂಗಳೂರಿನಲ್ಲಿ ಆರಂಭವಾದ ಹೆಚ್‌ಎಂಟಿ ಕಂಪನಿಯನ್ನು ಮಾಜಿ ಪ್ರಧಾನಿ ಜವಾಹರಲಾಲ್ ನೆಹರು ಉದ್ಘಾಟಿಸಿದ್ದರು. ಗಡಿಯಾರ, ಟ್ರಾಕ್ಟರ್, ಮುದ್ರಣ ಯಂತ್ರ, ಆಹಾರ ಸಂಸ್ಕರಣಾ ಯಂತ್ರ ಸೇರಿದಂತೆ ದೇಶದ ರಕ್ಷಣಾ ವಲಯಕ್ಕೆ ಬೇಕಾದ



ಸಾಮಗ್ರಿಗಳನ್ನು ಉತ್ಪಾದಿಸುವ ಸರ್ಕಾರಿ ಸ್ವಾಮ್ಯದ ಹೆಚ್‌ಎಂಟಿ ಕಾರ್ಖಾನೆ ದೇಶಾದ್ಯಂತ 6 ಅಂಗಸಂಸ್ಥೆಗಳನ್ನು ಒಳಗೊಂಡಿದೆ. 1980 ರಿಂದ 1990ರ ನಡುವೆ ಕೇಂದ್ರ ಮತ್ತು ರಾಜ್ಯದಲ್ಲಿ ಅಧಿಕಾರ ನಡೆಸಿದ ಕಾಂಗ್ರೆಸ್ ಸರ್ಕಾರದ ದುರಾಡಳಿತದಿಂದ ಹೆಚ್‌ಎಂಟಿ ಕಾರ್ಖಾನೆ ರೋಗಗ್ರಸ್ಥವಾಗಿ ಕಾರ್ಖಾನೆ ಕೆಲವು ಘಟಕಗಳು ಉತ್ಪಾದನೆ, ಇತರ ಘಟಕಗಳು ಚಾಲ್ತಿಯಲ್ಲಿದ್ದು, ರಕ್ಷಣಾ ಇಲಾಖೆಗೆ ಅಗತ್ಯ ಸಲಕರಣೆಗಳನ್ನು ಉತ್ಪಾದಿಸಿ ಪೂರೈಕೆ ಮಾಡುತ್ತಿದೆ. 2500 ಕಾರ್ಮಿಕರು ಇಂದಿಗೂ ಹೆಚ್‌ಎಂಟಿ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಇದರ ಅರಿವಿಲ್ಲದ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲ ಮುಚ್ಚಿ ಹೋಗಿರುವ ಹೆಚ್‌ಎಂಟಿ ಕಾರ್ಖಾನೆ ಭೂಮಿ ವಾಪಸ್ ನೀಡದೆ ಪ್ರಧಾನಿ ಮೋದಿ ಮತ್ತು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ರಿಯಲ್ ಎಸ್ಟೇಟ್ ಮಾಡಲು ಹೊರಟಿದ್ದಾರೆ ಎಂದು ಅಪಪ್ರಚಾರ ಮಾಡುವ ಮೂಲಕ ತಾನೊಬ್ಬ ಅಪ್ರಬುದ್ಧ ಮತ್ತು ಅಜ್ಞಾನಿ ಎಂದು ಸಾಬೀತುಪಡಿಸಿಕೊಂಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಅರಣ್ಯ ಕಾಯ್ದೆ ಜಾರಿಗೆ ಬಂದಿದ್ದು 1980ರಲ್ಲಿ. ಅದಕ್ಕೂ ಮುನ್ನವೇ ಹೆಚ್‌ಎಂಟಿ ಕಾರ್ಖಾನೆಗೆ ಗಿಫ್ಟ್ ಡೀಡ್ ಮೂಲಕ ರಾಜ್ಯ ಸರ್ಕಾರ 433 ಎಕರೆ ಭೂಮಿ ನೀಡಿದೆ. ಇದರಲ್ಲಿ 177 ಎಕರೆ ಭೂಮಿಯನ್ನು 2000 ದಿಂದ 2006 ರವರೆಗೆ ವಿವಿಧ ಖಾಸಗಿ ಕಂಪನಿಗೆ ಮಾರಾಟ ಮಾಡಿ ರಿಯಲ್ ಎಸ್ಟೇಟ್ ದಂಧೆ ಆರಂಭಿಸಿದ್ದೇ ಕಾಂಗ್ರೆಸ್ ಸರ್ಕಾರ. ಇದೀಗ ಜೀವ ವೈವಿಧ್ಯತೆ ವಲಯ ನಿರ್ಮಾಣ ಹೆಸರಿನಲ್ಲಿ ಹೆಚ್‌ಎಂಟಿ ಕಾರ್ಖಾನೆ ಭೂ ಕಬಳಿಕೆಗೆ ರಾಜ್ಯ ಸರ್ಕಾರ ಮುಂದಾಗಿದೆ. ಜೀವ ವೈವಿಧ್ಯ ವಲಯ ನಿರ್ಮಾಣಕ್ಕೆ ಬೆಂಗಳೂರಲ್ಲಿ ಸಾಕಷ್ಟು ಸರ್ಕಾರಿ ಜಾಗವಿದೆ. ಅಲ್ಲಿ ನಿರ್ಮಾಣ ಮಾಡದೇ ಹೆಚ್.ಡಿ. ಕುಮಾರಸ್ವಾಮಿ ಅವರಿಗೆ ಹೆಸರು ಬರುತ್ತದೆ ಎನ್ನುವ ಏಕೈಕ ಕಾರಣಕ್ಕೆ ರಾಜ್ಯ ಸರ್ಕಾರ ಹೆಚ್‌ಎಂಟಿ ಪುನಶ್ಚೇತನಕ್ಕೆ ಅಡ್ಡಿಪಡಿಸುತ್ತಿದೆ. ಕಾರ್ಖಾನೆ ಪುನಶ್ಚೇತನಗೊಂಡರೆ ಸಾವಿರಾರು ಜನರಿಗೆ ಉದ್ಯೋಗಾವಕಾಶ ದೊರೆಯಲಿದ್ದು, ರಾಜ್ಯ ಸರ್ಕಾರ ಸಹಕರಿಸಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ರಾಜ್ಯ ಯುವ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಕೆ.ಬಿ.ನಾಗೇಶ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹದೇವೇಗೌಡ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಹೆಚ್.ಕೆ.ಅಶೋಕ್, ತಾಪಂ ಮಾಜಿ ಸದಸ್ಯ ಮೋಹನ್, ತಾಲೂಕು ಜೆಡಿಎಸ್ ರೈತ ಮೋರ್ಚಾ ಘಟಕದ ಅಧ್ಯಕ್ಷ ಹೆಳವೇಗೌಡ, ಟಿಎಪಿಸಿಎಂಎಸ್ ನಿರ್ದೇಶಕ ಬಲದೇವ್, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ತೋಟ ಪ್ರಶೆಟ್ಟಿ, ಪರಮೇಶ್, ಹರೀಶ್, ಮರೀಗೌಡ, ಕೆ.ಆರ್.ಹೇಮಂತಕುಮಾರ್ ಇದ್ದರು.

ಜಿಲ್ಲೆಯ ಕೆರೆಗಳಿಗೆ ನೀರು ತುಂಬಿಸಲು ಆದ್ಯತೆ ನೀಡಿ

ಅಧಿಕಾರಿಗಳಿಗೆ ಸಚಿವ ಚಲುವರಾಯಸ್ವಾಮಿ ತಾಕೀತು

ಶ್ರೀರಂಗಪಟ್ಟಣ, ಜು.21– ಕಾವೇರಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆಯಾಗುತ್ತಿದ್ದು, ಜಿಲ್ಲೆಯ ಕೆರೆ, ಕಟ್ಟೆಗಳನ್ನು ತುಂಬಿಸಲು ಆದ್ಯತೆ ನೀಡಿ. ಇದರಿಂದ ಮುಂದಿನ ದಿನಗಳಲ್ಲಿ ರೈತರಿಗೆ ಉಪಯುಕ್ತವಾಗಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವ ರಾಯಸ್ವಾಮಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

ಸೋಮವಾರ ತಾಲೂಕಿನ ಕೆಆರ್‌ಎಸ್‌ನ ಕಾವೇರಿ ಸಭಾಂಗಣದಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ನಡೆಸಿ ಮಾತನಾಡಿದ ಅವರು, ಕೆರೆ, ಕಟ್ಟೆಗಳನ್ನು ತುಂಬಿಸಿಕೊಳ್ಳಲು ಇದು ಉತ್ತಮ ಸಮಯವಾಗಿದ್ದು, ತಾಲೂಕುಗಳ ಕೊನೆಯ ಭಾಗದಲ್ಲಿರುವ ಕೆರೆಗಳಿಗೆ ನೀರು ತುಂಬುವಂತೆ ನೋಡಿಕೊಳ್ಳಬೇಕು. ಜಲಾಶಯ ತುಂಬಿದ್ದು, ರೈತರು, ಜನಪ್ರತಿನಿಧಿಗಳು ಹಾಗೂ ಸಂಘಟನೆಗಳಿಂದ ಕೃಷಿ ಪದ್ಧತಿಗೆ ನೀರು ಸಿಗುತ್ತಿಲ್ಲ ಎಂಬ ದೂರು ಬಾರದಂತೆ ನೋಡಿಕೊಂಡು ಎಚ್ಚರಿಕೆಯಿಂದ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದರು.


ಕೆಆರ್‌ಎಸ್‌ನಲ್ಲಿ ನೀರಾವರಿ ಸಲಹಾ ಸಮಿತಿ ಸಭೆ ನಡೆಯಿತು.

ಕೆರೆಗಳ ಹೂಳು ತೆಗೆಯುವ ಕೆಲಸ ಹಾಗೂ ಕೆರೆಗಳ ನಿರ್ವಹಣೆಗೆ ಸಂಬಂಧಿಸಿದಂತೆ ಅನುದಾನದ ಕೊರತೆ ಇಲ್ಲ. ಸ್ಥಳೀಯ ಶಾಸಕರೊಂದಿಗೆ ಚರ್ಚಿಸಿ ಅನುದಾನ ಪಡೆದು ಕೆರೆಗಳ ನಿರ್ವಹಣೆ ಕಾಮಗಾರಿ ನಡೆಸಿ, ರೈತರ ಪರ ಸದಾ ನಮ್ಮ ಸರ್ಕಾರ ಕಾರ್ಯ ನಿರ್ವಹಿಸುತ್ತದೆ ಮುಂಗಾರು ಬೆಳೆಗೆ ಗುಣಮಟ್ಟದ ಬಿತ್ತನೆ ಬೀಜ, ಗೊಬ್ಬರ ಒದಗಿಸುವಂತೆ ಕೃಷಿ ಇಲಾಖೆಗೆ ಸೂಚಿಸಲಾಗಿದೆ. ಕೃಷಿ ಚಟುವಟಿಕೆಗಳು ಚುರುಕಾಗಿದ್ದು, ರೈತರಿಗೆ ಬೇಕಿರುವ ಮಾಹಿತಿ ಒದಗಿಸಿ ಎಂದು ಸೂಚಿಸಿದರು.

ಶಾಸಕ ರಮೇಶ್‌ಬಾಬು ಮಾತನಾಡಿ, ಸದ್ಯದ ಪರಿಸ್ಥಿತಿಯಲ್ಲಿ ಕೃಷಿಗೆ ಯಾವುದೇ ತೊಂದರೆ ಇಲ್ಲ. ಬೇಸಿಗೆ ಬೆಳೆಗೆ ಬೇಕಿರುವ ನೀರಿನ ಬಗ್ಗೆ ಯೋಜನೆ ರೂಪಿಸಬೇಕಿದೆ ಎಂದರು.

ಈ ಬಾರಿ ವರುಣಾ ನಾಲಾ ವ್ಯಾಪ್ತಿಯ 7,500 ಎಕರೆ ವ್ಯವಸಾಯ ಭೂಮಿಗೆ ನೀರು ಕೊಡಲಿದ್ದೇವೆ. ಮುಂದಿನ ಹತ್ತು ದಿನಗಳಲ್ಲಿ ಕೆರೆಕಟ್ಟೆ ತುಂಬುವ ನಿರೀಕ್ಷೆ ಇದೆ ಎಂದು ನೀರಾವರಿ ಇಲಾಖೆ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಶಾಸಕರಾದ ಪಿ.ರವಿಕುಮಾರ್ ಗಣಿಗ, ಕೆ.ಎಂ.ಉದಯ್, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಕೆ.ಆರ್. ನಂದಿನಿ, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಕಾವೇರಿ ನೀರಾವರಿ ನಿಗಮದ ಅಧೀಕ್ಷಕ ಅಭಿಯಂತರ ರಘುರಾಮ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ವಿರುದ್ಧದ ಇಡಿ ಮೇಲ್ಮನವಿ ವಜಾ

ಪರಿಗಣಿಸಿದ ಪೀಠ, ಹೈಕೋರ್ಟ್ ಏಕಸದಸ್ಯ ಪೀಠ ವ್ಯಕ್ತಪಡಿಸಿರುವ ಅಭಿಪ್ರಾಯದಲ್ಲಿ ಯಾವುದೇ ದೋಷವಿಲ್ಲ, ಪ್ರಕರಣಕ್ಕೆ ಸಂಬಂಧಿಸಿದ ವಿಶೇಷ ಸಂದರ್ಭ ಹಾಗೂ ಸನ್ನಿವೇಶದ ಹಿನ್ನೆಲೆಯಲ್ಲಿ ನಾವು ಮೇಲ್ಮನವಿ ತಿರಸ್ಕರಿಸುತ್ತಿದ್ದೇವೆ ಎಂದು ನ್ಯಾಯಾಪೀಠ ಹೇಳಿತು. ಮುಖ್ಯಮಂತ್ರಿ ಕುಟುಂಬ ಕಾನೂನುಬಾಹಿರವಾಗಿ 14 ಬಿಡಿ ನಿವೇಶನಗಳನ್ನು ಅಭಿವೃದ್ಧಿ ಹೊಂದಿದ ಬಡಾವಣೆಗಳಲ್ಲಿ ಪಡೆದು ಸರ್ಕಾರಕ್ಕೆ ಕೋಟ್ಯಾಂತರ ರೂ. ವಂಚಿಸಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ರಾಜಭವನ ಹಾಗೂ ಹೈಕೋರ್ಟ್ ಮೊರೆ ಹೋಗಿದ್ದರು.

ಭಾರೀ ಮೊತ್ತ ಕೈಬದಲಾವಣೆ ಆಗಿದೆ ಎಂಬುದಾಗಿ ಜಾರಿ ನಿರ್ದೇಶನಾಲಯಕ್ಕೆ ದೂರು ನೀಡಿದ್ದರು. ದೂರಿನನ್ವಯ ಇ.ಡಿ. ಅಧಿಕಾರಿಗಳು ಮುಡಾ ಕಚೇರಿ ಹಾಗೂ ಅಧಿಕಾರಿಗಳ ಮನೆ ಮೇಲೆ ದಾಳಿ ನಡೆಸಿ, ಕೆಲವು ದಾಖಲೆಗಳನ್ನು ವಶಕ್ಕೆ ತೆಗೆದುಕೊಂಡಿ ದ್ದಲ್ಲದೆ, ಕೆಲವು ಅಧಿಕಾರಿಗಳನ್ನು ವಿಚಾರಣೆಗೂ ಒಳಪಡಿಸಿತ್ತು. ಪ್ರಮುಖ ಆರೋಪಿಗಳಾದ ಬಿ.ಎಂ.ಪಾರ್ವತಿ ಹಾಗೂ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರುಗಳಿಗೆ ವಿಚಾರಣೆಗೆ ಹಾಜರಾಗುವಂತೆ ಎರಡು ಬಾರಿ ಸಮನ್ಸ್ ಜಾರಿಗೊಳಿಸಿತ್ತು. ಇದನ್ನು ಪ್ರಶ್ನಿಸಿ ಪಾರ್ವತಿ ಹಾಗೂ ಬೈರತಿ ಸುರೇಶ್ ನ್ಯಾಯಾಲಯದ ಮೊರೆ ಹೋಗಿದ್ದರು. ಈಗ ಈ ಇಬ್ಬರು ನಿರಾಳರಾದಂತಾಗಿದೆ.

ಕೇಂದ್ರ ಸರ್ಕಾರಕ್ಕೆ ಕಪಾಳ ಮೋಕ್ಷ

ನ್ಯಾಯಮೂರ್ತಿ ಕೆ.ವಿನೋದ್‌ಚಂದ್ರನ್ ಒಳಗೊಂಡ ಪೀಠದ ಆದೇಶವನ್ನು ನಾನು ವಿನೀತನಾಗಿ ಸ್ವಾಗತಿಸುತ್ತೇನೆ. ನನ್ನ ಸುದೀರ್ಘ ರಾಜಕೀಯ ಜೀವನದಲ್ಲಿ ನಾನು ಸದಾ ಸಂವಿಧಾನ ಮತ್ತು ನೆಲದ ಕಾನೂನಿಗೆ ತಲೆಬಾಗುತ್ತಾ ಬಂದವನು. ಈ ನಂಬಿಕೆಯನ್ನು, ಸುಪ್ರೀಂ ಕೋರ್ಟ್ ಆದೇಶ ಉಳಿಸಿ, ಕಾಪಾಡಿದೆ.

ನನ್ನ ಮನದಾಳದ ಮಾತನ್ನೇ ಸುಪ್ರೀಂ ಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಗವಾಯಿ ಹೇಳಿದ್ದಾರೆ. ರಾಜಕೀಯ ಸಮರಕ್ಕೆ ಮತದಾರರನ್ನು ಬಳಸಕೊಳ್ಳಬೇಕೇ ಹೊರತು, ಜಾರಿ ನಿರ್ದೇಶನಾಲಯದಂತಹ ಸಂವಿಧಾನಿಕ ಸಂಸ್ಥೆಗಳ ದುರ್ಬಳಕೆ ಮಾಡಬಾರದು ಎಂಬ ಮಾತುಗಳು ಸಂವಿಧಾನದ ಮೇಲೆ ನಂಬಿಕೆ ಇಟ್ಟಿರುವ ಪ್ರತಿಯೊಬ್ಬ ಪ್ರಜ್ಞಾವಂತ ಭಾರತೀಯನ ಅಭಿಪ್ರಾಯವಾಗಿದೆ. ಕಳೆದ 10–11 ವರ್ಷಗಳಿಂದ ಕೇಂದ್ರ ಸರ್ಕಾರ ಮತ್ತು ಬಿಜೆಪಿ ಆದಾಯ ತೆರಿಗೆ (ಐಟಿ), ಕೇಂದ್ರ ತನಿಖಾ ದಳ (ಸಿಬಿಐ) ಮತ್ತು ಜಾರಿ ನಿರ್ದೇಶನಾಲಯ (ಇ.ಡಿ.)ದಂತಹ ಸಂಸ್ಥೆಗಳ ದುರ್ಬಳಕೆ ಮೂಲಕ ರಾಜಕೀಯ ದ್ವೇಷಕ್ಕೆ ಬಲಿಯಾದ ಎಲ್ಲರಿಗೂ ಈ ತೀರ್ಪು ಸಮಾಧಾನ ಉಂಟು ಮಾಡಿದೆ ಮತ್ತು ನ್ಯಾಯ ವ್ಯವಸ್ಥೆಯ ಮೇಲೆ ಭರವಸೆ ಮೂಡಿಸಿದೆ.

ಕಣ್ಣು ತೆರೆಸುವ ಸುಪ್ರೀಂಕೋರ್ಟ್‌ನ ಆದೇಶದ ನಂತರವಾದರೂ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಷಾ ಎಚ್ಚೆತ್ತುಕೊಂಡು ಐಟಿ, ಸಿಬಿಐ ಮತ್ತು ಇ.ಡಿ.ಯಂತಹ ಸಂವಿಧಾನಿಕ ಸಂಸ್ಥೆಗಳ ದುರ್ಬಳಕೆ ನಿಲ್ಲಿಸಿ ಅವುಗಳಿಗೆ ಸ್ವಾಯತ್ತತೆ ಕೊಟ್ಟು ತಮ್ಮ ಪಾಪ ತೊಳೆದುಕೊಳ್ಳಬೇಕು.

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ನನ್ನ ಮತ್ತು ನನ್ನ ಕುಟುಂಬದ ವಿರುದ್ಧ ಕಪೋಲಕಲ್ಪಿತ ಆರೋಪಗಳನ್ನು ಮಾಡುತ್ತಾ ಬಂದಿರುವ ರಾಜ್ಯದ ಬಿಜೆಪಿ ಮತ್ತು ಜೆಡಿಎಸ್ ನಾಯಕರಲ್ಲಿ ಕಿಂಚಿತ್ತಾದರೂ ಮಾನ–ಮರ್ಯಾದೆ ಎನ್ನುವುದು ಉಳಿದುಕೊಂಡಿದ್ದರೆ ಅವರೆಲ್ಲರೂ ತಕ್ಷಣ ತಮ್ಮ ತಪ್ಪಿಗಾಗಿ ಸಾರ್ವಜನಿಕವಾಗಿ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದ್ದಾರೆ.

ಮೈಸೂರಿನ ಕೆಸರೆ ಗ್ರಾಮದಲ್ಲಿ ಸ್ವಾಧೀನಪಡಿಸಿಕೊಂಡ ಪಾರ್ವತಿ ಅವರ 3 ಎಕರೆ 16 ಗುಂಟೆ ಭೂಮಿಗೆ ಬದಲಾಗಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಪ್ರಭಾವ ಬಳಸಿ ಮೈಸೂರಿನಲ್ಲಿ 14 ನಿವೇಶನಗಳನ್ನು ಪಡೆದ ಆರೋಪವಿದೆ.

ಈ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೊದಲ ಆರೋಪಿ ಎಂದು ಹೆಸರಿಸಲಾಗಿದ್ದು, ಅವರ ಪತ್ನಿ ಬಿಎಂ ಪಾರ್ವತಿ ಅವರನ್ನು ಎರಡನೇ ಆರೋಪಿಯನ್ನಾಗಿ ಮಾಡಲಾಗಿದೆ. ಜಾರಿ ನಿರ್ದೇಶನಾಲಯವು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ಪಾರ್ವತಿ ಮತ್ತು ನಗರಾಭಿ ವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ನೋಟಿಸ್‌ಗಳನ್ನು ನೀಡಿತ್ತು. ನಂತರ ಅವುಗಳನ್ನು ಕರ್ನಾಟಕ ಹೈಕೋರ್ಟ್ ರದ್ದು ಗೊಳಿಸಿತ್ತು. ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದ ಇಡಿ, ಹೈಕೋರ್ಟ್‌ನ ತೀರ್ಪನ್ನು ಪ್ರಶ್ನಿಸಿತ್ತು.

ಡಿಸಿಎಂ, ಬಳಿಕ ಸಿಎಂ ದೆಹಲಿ ಯಾತ್ರೆ!

ಮೂರು ಬಾರಿ ರಾಜ್ಯಕ್ಕೆ ಭೇಟಿ ನೀಡಿ ಸಚಿವರು ಮತ್ತು ಪಕ್ಷದ ಶಾಸಕರಿಂದ, ಪಕ್ಷ ಸಂಘಟನೆ ಮತ್ತು ರಾಜಕೀಯಕ್ಕೆ ಸಂಬಂಧಿಸಿದಂತೆ ಮುಖಾಮುಖಿ ಭೇಟಿ ಮಾಡಿ ಮಾಹಿತಿ ಪಡೆದಿದ್ದರು. ಸಚಿವರು, ಶಾಸಕರ ಭೇಟಿ ನಂತರ ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಜೊತೆಗೂ ಸಮಾಲೋಚನೆ ಮಾಡಿದ್ದರು. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರುಗಳ ದೆಹಲಿ ಭೇಟಿ ಹಿನ್ನೆಲೆಯಲ್ಲಿ ರಾಜ್ಯ ಕಾಂಗ್ರೆಸ್‌ನಲ್ಲಿನ ರಾಜಕೀಯ ಬೆಳವಣಿಗೆಗಳ ಕುರಿತು ಕುತೂಹಲ ಮೂಡಿದೆ.

ಮಾರ್ಗಸೂಚಿ ಅನಿವಾರ್ಯತೆ ಪ್ರತಿಪಾದನೆ

ವಿಫಲವಾಗುತ್ತಿವೆ. ಸ್ತಬ್ಧ ಚಿತ್ರಗಳು ಹಾಗೂ ಜಂಬೂ ಸವಾರಿ ವ್ಯವಸ್ಥಿತಗೊಳಿಸಲು ಶಿಸ್ತು ಕ್ರಮಗಳ ಅಳವಡಿಕೆಯಾಗಬೇಕು. ಇದರಿಂದ ದೇಶ–ವಿದೇಶಗಳಿಂದ ಬರುವ ಪ್ರವಾಸಿಗರು ಸಹ ದಸರಾ ಸಂಭ್ರಮಪಡಲು ಸಾಧ್ಯವಾಗುತ್ತದೆ ಎಂದು ತಿಳಿಸಿದ್ದಾರೆ.

ಎಸ್‌ಒಪಿ ಜಾರಿ ಸ್ವಾಗತ: ಮೈಸೂರಿನ ಪರಂಪರೆಯನ್ನು ವಿಶ್ವಮಟ್ಟಕ್ಕೆ ಮೆರೆಸಬೇಕಾದರೆ, ಜನದಟ್ಟಣೆ ಹೆಚ್ಚಾಗಿರುವ ಕಾರ್ಯಕ್ರಮಗಳಲ್ಲಿ ಶಿಸ್ತು ಪಾಲನೆ ಆಗಲೇಬೇಕು. ಅಂತಹದ್ದರಲ್ಲಿ ದೇಶ–ವಿದೇಶಗಳಿಂದ ಲಕ್ಷಾಂತರ ಜನರು ಸೇರುವ ಜಂಬೂ ಸವಾರಿ ಮೆರವಣಿಗೆ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಟ್ಟು–ನಿಟ್ಟಿನ ಭದ್ರತಾ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳುವುದು ಅವಶ್ಯವಾಗಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ದಸರಾ ಜಂಬೂ ಸವಾರಿಗೂ ಎಸ್‌ಒಪಿ ಜಾರಿ ಮಾಡುವುದಾದರೆ ಸ್ವಾಗತ ಮಾಡುವುದಾಗಿ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಅನಾಹುತಗಳು ತಪ್ಪಲಿವೆ: ತಾಯಿ ಚಾಮುಂಡೇಶ್ವರಿ ದಯೆಯಿಂದ ಇಲ್ಲಿಯವರೆಗೆ ದಸರಾ ವೇಳೆ ಯಾವ ಅಹಿತಕರ ಘಟನೆ ನಡೆದಿಲ್ಲ. ಆದರೆ, ಮುಂದೆ ಆಗುವುದಿಲ್ಲ ಎನ್ನುವುದನ್ನೂ ಹೇಳಲಾಗದು. ಆದ್ದರಿಂದ ಶಿಸ್ತು ಬದ್ಧವಾಗಿ ದಸರಾ ಆಚರಣೆಯಾಗಬೇಕಾದರೆ, ಭದ್ರತಾ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ಜಂಬೂ ಸವಾರಿ, ಪಂಜಿನ ಕವಾಯತು ನೋಡಲು ಬರುವ ಪ್ರವಾಸಿಗರಿಗೂ ಅನುಕೂಲವಾಗುವ ಜೊತೆಗೆ ಕಾರ್ಯಕ್ರಮವೂ ಯಶಸ್ವಿಯಾಗಲಿದೆ. ಅವಘಡಗಳು ಯಾವಾಗ ಬೇಕಾದರೂ ಸಂಭವಿಸಬಹುದು. ಆದ್ದರಿಂದ ಮುಂಜಾಗ್ರತಾ ಕ್ರಮವಾಗಿ ಕೆಲ ಸಣ್ಣ–ಪುಟ್ಟ ಬದಲಾವಣೆಗೊಂದಿಗೆ ಎಸ್‌ಒಪಿ ಅಳವಡಿಕೆ ಒಳ್ಳೆಯದು ಎಂದು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಸಹ ಅಭಿಪ್ರಾಯಪಟ್ಟಿದ್ದಾರೆ.

ಎಸ್‌ಒಪಿ ಮಾರ್ಗಸೂಚಿಗಳು....

ಸಾರ್ವಜನಿಕರ ಪ್ರಮುಖ ಪ್ರವೇಶ ದ್ವಾರಗಳಲ್ಲಿ ತರಬೇತಿ ಪಡೆದ ಸಿಬ್ಬಂದಿಯನ್ನು ನಿಯೋಜಿಸುವುದು, ಜನಸಂದಣಿಯನ್ನು ಸುಗಮಗೊಳಿಸಲು ಕೋಡ್ ಅಥವಾ ಬಯೋಮೆಟ್ರಿಕ್ ತಂತ್ರಜ್ಞಾನದ ಬಳಕೆ ಮತ್ತು ವಿಭಿನ್ನ ವರ್ಗಗಳಿಗೆ (ಉದಾಹರಣೆ: ಪುರುಷರು, ಮಹಿಳೆಯರು, ವೃದ್ಧರು, ವಿಶೇಷಚೇತನರು) ಪ್ರತ್ಯೇಕ ಪ್ರವೇಶ ದ್ವಾರಗಳನ್ನು ಕಲ್ಪಿಸುವುದು. ತುರ್ತು ನಿರ್ಗಮನ ಮಾರ್ಗಗಳನ್ನು ಸ್ಪಷ್ಟವಾಗಿ ಗುರುತಿಸುವುದು, ಹಾಗಾಗ ಲೌಡ್‌ಸ್ಪೀಕರ್‌ಗಳ ಮೂಲಕ ಸಾರ್ವಜನಿಕರಿಗೆ ಸೂಚನೆಗಳನ್ನು ನೀಡುವುದು. ತುರ್ತು ವಾಹನಗಳಿಗೆ ಸೂಕ್ತ ಪಾರ್ಕಿಂಗ್ ವ್ಯವಸ್ಥೆ, ವೈದ್ಯಕೀಯ ನೆರವು, ಟಿಕೆಟ್ ವ್ಯವಸ್ಥೆ, ಟ್ರಾಫಿಕ್ ನಿಯಂತ್ರಣದಂತಹ ಪ್ರಮುಖ ಸೂಚನೆಗಳನ್ನು ಎಸ್‌ಒಪಿಯಲ್ಲಿ ತಿಳಿಸಲಾಗಿದೆ. ಹಾಗೆಯೇ ಜನಸಂದಣಿಯ ಸಂಚಾರ, ತೆಗೆದುಕೊಂಡ ನಿರ್ಧಾರಗಳು ಮತ್ತು ನೀಡಿದ ಎಚ್ಚರಿಕೆಗಳನ್ನು ಆಡಿಯೋ ಮತ್ತು ವಿಡಿಯೋಗಳನ್ನು ದಾಖಲಿಸಬೇಕು. ಕರ್ನಾಟಕ ಪೊಲೀಸ್ ಕಾಯಿದೆ ಮತ್ತು ಬಿಎನ್‌ಎಸ್‌ಎಸ್ ಪಾಲನೆಯ ಮೂಲಕ ಸಾರ್ವಜನಿಕ ಭದ್ರತೆ, ಕಾನೂನು ಸುವ್ಯವಸ್ಥೆ ಮತ್ತು ಮಾನವ ಘನತೆ ಎತ್ತಿ ಹಿಡಿಯುವ ಗುರಿ ಹೊಂದಿದೆ.

ಸದ್ಯದಲ್ಲೇ ನಿಷೇಧಾಜ್ಞೆ ಜಾರಿ

ಹಿನ್ನೀರು ಪ್ರದೇಶದಲ್ಲಿ ಪ್ರವಾಸಿಗರ ಪ್ರವೇಶಕ್ಕೆ ಕಡಿವಾಣ ಬೀಳಲಿದೆ.

ಸ್ಥಳೀಯರ ಸಮ್ಮತಿ: ಹಿನ್ನೀರು ಪ್ರದೇಶಕ್ಕೆ ಪ್ರತಿದಿನ ನೂರಾರು ಜನ ಬರುತ್ತಾರೆ. ವಾರಾಂತ್ಯ ಹಾಗೂ ರಜೆ ದಿನಗಳಲ್ಲಂತೂ ಈ ಸಂಖ್ಯೆ ದುಪ್ಪಟ್ಟಾಗಿ ರುತ್ತದೆ. ಇದರಿಂದ ನಮ್ಮ ಅಂಗಡಿ, ಹೋಟೆಲ್‌ಗಳಲ್ಲಿ ಭರ್ಜರಿ ವ್ಯಾಪಾರವಾ ಗುತ್ತಿದೆ. ಆದರೆ, ಕುಡಿದ ನಶೆಯಲ್ಲಿ ಹಿನ್ನೀರಿನಲ್ಲಿ ಪುಂಡಾಟ ಮೆರೆಯುವ ಕೆಲವರು ಅಪಾಯವನ್ನು ಮೈಮೇಲೆ ಎಳೆದುಕೊಳ್ಳುತ್ತಿದ್ದಾರೆ ಎಂದು ಸ್ಥಳೀಯರು ದೂರಿದ್ದಾರೆ.

ಜು.7ರಂದು 'ಮೈಸೂರು ಮಿತ್ರ'ನಲ್ಲಿ 'ಅಕ್ರಮ ಚಟುವಟಿಕೆಯ ತಾಣ ಕೆಆರ್‌ಎಸ್ ಹಿನ್ನೀರಿನ ಪ್ರದೇಶ' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟವಾಗಿತ್ತು. ಮರುದಿನ ಇಲವಾಲ ಪೊಲೀಸರು ಕಾರ್ಯಾಚರಣೆ ನಡೆಸಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ಓರ್ವ ಹಾಗೂ ಹಿನ್ನೀರಿನ ಪ್ರದೇಶದಲ್ಲಿ ಮದ್ಯ ಸೇವಿಸುತ್ತಿದ್ದ ನಾಲ್ವರ ವಿರುದ್ಧ ಪ್ರಕರಣ ದಾಖಲಿಸಿದ್ದರು.

ನಂತರ ಗ್ರಾಮಸ್ಥರು ಹಾಗೂ ಇಲವಾಲ ಪೊಲೀಸರು ಹಿನ್ನೀರು ಪ್ರದೇಶಕ್ಕೆ ವಾಹನಗಳು ತೆರಳದಂತೆ ರಸ್ತೆಗೆ ಮರ ಹಾಗೂ ಕಲ್ಲುಗಳನ್ನು ಅಡ್ಡಲಾಗಿ ಇಟ್ಟು ವಾಹನ ಸಂಚಾರಕ್ಕೆ ನಿರ್ಬಂಧಿಸಲಾಗಿತ್ತು. ಮೀನಾಕ್ಷಿಪುರದ ಹಿನ್ನೀರು ಪ್ರದೇಶದಲ್ಲಿ ದುರಂತ ತಡೆಗೆ ಹಂತ ಹಂತವಾಗಿ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿತ್ತು. ಆದರೆ, ಮೂರು ನರ್ಸಿಂಗ್ ವಿದ್ಯಾರ್ಥಿಗಳ ಸಾವು ಪ್ರಕರಣ, ದೊಡ್ಡ ಮಟ್ಟದ ಅನಾಹುತಕ್ಕೆ ಎಚ್ಚರಿಕೆ ಗಂಟೆಯಾಗಿ ಪರಿಣಿಸಿದ್ದರಿಂದ ಜಿಲ್ಲಾಡಳಿತ, ಸ್ವೇಚ್ಛಾಚಾರಕ್ಕೆ ಕಡಿವಾಣ ಹಾಕಲು ಮಹತ್ತರ ನಿರ್ಧಾರಕ್ಕೆ ಮುಂದಾಗಿದೆ.

ಮೃತದೇಹಗಳ ಹಸ್ತಾಂತರ: ಭಾನುವಾರ ಮೀನಾಕ್ಷಿಪುರದ ಕೆಆರ್‌ಎಸ್ ಹಿನ್ನೀರಿನಲ್ಲಿ ಮುಳುಗಿ ಮೃತಪಟ್ಟ ನರ್ಸಿಂಗ್ ವಿದ್ಯಾರ್ಥಿಗಳಾದ ಪಿರಿಯಾಪಟ್ಟಣದ ಪ್ರಶಾಂತ್, ಸಂತೆಮರಳ್ಳಿಯ ಸಿದ್ದೇಶ, ಕೊಪ್ಪಳದ ಕೃಷ್ಣ ಅವರ ಮರಣೋತ್ತರ ಪರೀಕ್ಷೆ ಬಳಿಕ ಪೋಷಕರಿಗೆ ದೇಹಗಳ ಹಸ್ತಾಂತರಿಸಲಾಯಿತು.

ಇಂದು ಸುಪ್ರೀಂಕೋರ್ಟ್‌ನಲ್ಲಿ ನಟ ದರ್ಶನ್ ಜಾಮೀನು ಭವಿಷ್ಯ ನಿರ್ಧಾರ

ನವದೆಹಲಿ, ಜು.21– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಗಳಾದ ನಟ ದರ್ಶನ್, ಪವಿತ್ರಾಗೌಡ ಸೇರಿ ಇತರ ಆರೋಪಿಗಳಿಗೆ ಹೈಕೋರ್ಟ್ ನೀಡಿರುವ ಜಾಮೀನು ರದ್ದಾಗುತ್ತಾ ಅಥವಾ ಮುಂದುವರೆಯುತ್ತಾ ಎಂಬುದು ನಾಳೆ (ಜು.22) ತೀರ್ಮಾನ ವಾಗಲಿದೆ. ಸರ್ಕಾರದ ಪರ ವಾದ ಆಲಿಸಿರುವ ಸುಪ್ರೀಂಕೋರ್ಟ್ ನಾಳೆ ದರ್ಶನ್ ಸೇರಿ 7 ಆರೋಪಿಗಳ ಪರ ವಾದ ಆಲಿಸಲಿದೆ.



ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ನಟ ದರ್ಶನ್, ಪವಿತ್ರಾಗೌಡ ಹಾಗೂ ಇತರೆ ಆರೋಪಿಗಳ ಜಾಮೀನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿರುವ ಅರ್ಜಿ ವಿಚಾರಣೆಯು ಸುಪ್ರೀಂಕೋರ್ಟ್‌ನಲ್ಲಿ ಮಂಗಳವಾರ ಮುಂದುವರಿಯಲಿದೆ. ನ್ಯಾ.ಜೆ ಬಿ ಪಾರ್ದಿವಾಲಾ ನೇತೃತ್ವದ ದ್ವಿಸದಸ್ಯ ಪೀಠವು ನಾಳೆ ಆರೋಪಿಗಳ ಪರ ವಕೀಲರ ಪ್ರತಿವಾದ ಆಲಿಸಲಿದ್ದು, ಬಳಿಕ ಅಂತಿಮ ತೀರ್ಪು ಪ್ರಕಟಿಸುವ ಸಾಧ್ಯತೆ ಇದೆ. ಸುಪ್ರೀಂಕೋರ್ಟ್‌ನಲ್ಲಿ ಕರ್ನಾಟಕ ಸರ್ಕಾರ, ಪೊಲೀಸ್ ಇಲಾಖೆ ಪರವಾಗಿ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ ವಾದ ಮಂಡಿಸಿದ್ದು, ದರ್ಶನ್ ಪರ ಹಿರಿಯ ವಕೀಲ ಕಪಿಲ್ ಸಿಬಲ್ ಮಂಗಳವಾರ ವಾದ ಮಂಡಿಸಲಿದ್ದಾರೆ. ಇದಾದ ಬಳಿಕ ಉಳಿದ ಆರೋಪಿಗಳ ಪರ ವಕೀಲರು ವಾದ ಮಂಡಿಸಲಿದ್ದಾರೆ. ಮಂಗಳವಾರ ವಾದ ಆಲಿಸಿದ ಬಳಿಕ ಸುಪ್ರೀಂಕೋರ್ಟ್ ನಾಳೆಯೇ ಆದೇಶ ನೀಡುವ ಸಾಧ್ಯತೆ ಇದೆ.

ಹುಟ್ಟುಹಬ್ಬದ ಶುಭಾಶಯ...



ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ 83ನೇ ಹುಟ್ಟುಹಬ್ಬದ ಅಂಗವಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನರೇಂದ್ರ ಸೋಮವಾರ ನವದೆಹಲಿಯಲ್ಲಿ ಶುಭ ಕೋರಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಜಿ.ಎನ್. ನಂಜುಂಡಸ್ವಾಮಿ, ಆಡಿ ಮೂರ್ತಿ, ಆರೀಫ್ ಮೊಹಮ್ಮದ್ ಇನ್ನಿತರರಿದ್ದರು.

ಮಾರಾಟ ಬಂದ್

ಇಂಡಿಯಾಗೆ ಕೊಳ್ಳಿ ಇಡಲು ಮುಂದಾಗಿದ್ದಾರೆ ಎಂದು ಅವರು ದೂರಿದರು. ಹಣ್ಣು ತರಕಾರಿ, ಹೂವಿನ ಮಾರಾಟ ಮಾಡುವವರಿಗೆ ತೆರಿಗೆ ನೋಟಿಸ್ ನೀಡಬಾರದು ಎಂಬ ನಿಯಮವಿದೆ. ಅದನ್ನು ಉಲ್ಲಂಘಿಸಿ ನೋಟಿಸ್ ನೀಡಲಾಗಿದೆ ಎಂದು ಟೀಕಿಸಿದರು. ಕೇಂದ್ರ ಸರಕಾರ ಸಣ್ಣ ಉದ್ದಿಮೆದಾರರ ವಿರೋಧಿ ನೀತಿ ಅನುಸರಿಸುತ್ತಿದ್ದು, ನಮಗೆ ನ್ಯಾಯ ಸಿಗುವ ತನಕ ಹೋರಾಟ ನಡೆಸುತ್ತೇವೆ. ನಮ್ಮ ಹೋರಾಟಕ್ಕೆ ವ್ಯಾಪಕ ಬೆಂಬಲ ವ್ಯಕ್ತವಾಗಿದೆ. ತೆರಿಗೆ ನೋಟಿಸ್ ನೋಡಿ ಈವರೆಗೆ ಯಾರಿಗೂ ಆಘಾತವಾಗಿಲ್ಲ. ಒಂದು ವೇಳೆ ಮುಂದಿನ ದಿನಗಳಲ್ಲಿ ಏನಾದರೂ ಅನಾಹುತ ಸಂಭವಿಸಿದರೆ ಯಾರು ಹೊಣೆ ಎಂದು ರವಿಶೆಟ್ಟಿ ಬೈಂದೂರು ಪ್ರಶ್ನಿಸಿದರು.

ಚಾಲಕರ ಸಂಘದ ಅಧ್ಯಕ್ಷ ಗಂಡಸಿ ಸದಾನಂದ ಸ್ವಾಮಿ ಮಾತನಾಡಿ, ಚಾಲಕರು ಆನ್‌ಲೈನ್ ಮೂಲಕ ಹಣ ಸಂಗ್ರಹಿಸುತ್ತಿದ್ದು, ಭವಿಷ್ಯದಲ್ಲಿ ನಮಗೂ ತೆರಿಗೆ ಪಾವತಿಸುವಂತೆ ನೋಟಿಸ್ ನೀಡುವ ಆತಂಕವಿದೆ. ಏಕಾಏಕಿ ನೋಟಿಸ್ ನೀಡಿದರೆ ಪ್ರತಿಯೊಬ್ಬರಿಗೂ ತೊಂದರೆಯಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರಕಾರದ ಧೋರಣೆ ವಿರುದ್ಧ ಚಾಲಕ ಸಂಘಟನೆಗಳು ಹೋರಾಟಕ್ಕೆ ಬೆಂಬಲ ನೀಡುತ್ತಿವೆ ಎಂದರು.

ಸಿಇಒಗಳಿಗೆ ಪಿಡಿಒ ನಿಯೋಜನೆ ಅಧಿಕಾರ: ಪಂಚಾಯತ್ ರಾಜ್ ಇಲಾಖೆ ಆದೇಶ

ಬೆಂಗಳೂರು, ಜು.21– ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ಆಡಳಿತಾತ್ಮಕ ಕಾರಣಗಳಿಗಾಗಿ ಆಯಾ ಜಿಲ್ಲಾ ವ್ಯಾಪ್ತಿಯ ಒಳಗೆ ನಿಯೋಜನೆ ಮಾಡುವ ಅಧಿಕಾರವನ್ನು ಜಿಲ್ಲಾ ಪಂಚಾಯಿತಿ ಸಿಇಒಗಳಿಗೆ ನೀಡಿ ಪಂಚಾಯತ್ ರಾಜ್ ಇಲಾಖೆ ಆದೇಶ ಹೊರಡಿಸಿದೆ.

ಕೌನ್ಸೆಲಿಂಗ್ ಮೂಲಕ ವರ್ಗಾವಣೆ ಮಾಡಲು ಪಂಚಾಯತ್ ರಾಜ್ ಇಲಾಖೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದಿಪಡಿ ತಂದಿತ್ತು. ಆದರೆ, ಕೆಲವರು ಕೋರ್ಟ್ ಮೆಟ್ಟಿಲೇರಿದ ಕಾರಣ ವರ್ಗಾವಣೆ ಪ್ರಕ್ರಿಯೆ ವಿಳಂಬವಾಗಿದೆ. ಆಡಳಿತಾತ್ಮಕ ಅಥವಾ ಇತರೆ ಕಾರಣಗಳಿಗಾಗಿ ನಿಯೋಜನೆ ಮಾಡಲು ಇಲಾಖೆಯ ಸಚಿವರ ಅನುಮತಿ ಪಡೆಯಬೇಕಿತ್ತು.

ಹೊಸ ಆದೇಶದ ಪ್ರಕಾರ ಸಿಇಒಗಳು ಆಯಾ ಜಿಲ್ಲೆಯ ವ್ಯಾಪ್ತಿಯಲ್ಲಿ ಕೆಲಸ ಮಾಡುವ ಪಿಡಿಒಗಳ ಒಟ್ಟು ಸಂಖ್ಯೆಯಲ್ಲಿ ಶೇ 4ರಷ್ಟು ಮಂದಿಯನ್ನು ಖಾಲಿ ಇರುವ ಹುದ್ದೆಗಳಿಗೆ ನಿಯೋಜನೆ ಮಾಡಬಹುದು. ನಿಯೋಜನೆಗೊಳ್ಳುವ ಪಿಡಿಒಗಳು ಒಂದು ಸ್ಥಳದಲ್ಲಿ ಮೂರು ವರ್ಷ ಪೂರೈಸಿರುವುದು ಕಡ್ಡಾಯ.

ಬನ್ನೂರು ಲಯನ್ಸ್ ಶಾಲೆ ನೂತನ ಪದಾಧಿಕಾರಿಗಳು


ಬಿ. ಬಸವರಾಜು


ಎಸ್. ರಾಮಚಂದ್ರ


ಹೆಚ್.ಎಂ. ಸ್ವಾಮಿ

ಮೈಸೂರು, ಜು. 21– ಲಯನ್ಸ್ ಕ್ಲಬ್ ಆಫ್ ಬನ್ನೂರು ಹಾಗೂ ಬನ್ನೂರು ಲಯನ್ಸ್ ವಿದ್ಯಾಸಂಸ್ಥೆಯ 2025–26ನೇ ಸಾಲಿನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಲಯನ್ ಬಿ. ಬಸವರಾಜು, ಕಾರ್ಯದರ್ಶಿಯಾಗಿ ಲಯನ್ ಎಸ್. ರಾಮಚಂದ್ರ, ಖಜಾಂಚಿಯಾಗಿ ಲಯನ್ ಹೆಚ್.ಎಂ. ಸ್ವಾಮಿ ಅವರನ್ನು ಆಯ್ಕೆ ಮಾಡಲಾಯಿತು.

ಮೈಸೂರು ಮಿತ್ರ

ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳ ಸಂಖ್ಯೆ ಗಣನೀಯ ಇಳಿಕೆ; ಕಾರಣ ಪತ್ತೆಗೆ ಸೂಚನೆ

● ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಸೆಲ್ವಕುಮಾರ್ ಪ್ರಗತಿ ಪರಿಶೀಲನಾ ಸಭೆ ವೇಳೆ ಈ ವಿಚಾರ ಬೆಳಕಿಗೆ ● ಇಲಾಖಾವಾರು ಶೇ.100ರಷ್ಟು ಪ್ರಗತಿಗೆ ತಾಕೀತು

ಮೈಸೂರು,ಜು.21(ಎಂಟಿವೈ)– ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳಲ್ಲಿ ಮೂರರಿಂದ ಆರು ವರ್ಷದೊಳಗಿನ ಮಕ್ಕಳ ಸಂಖ್ಯೆ ಕ್ಷೀಣಿಸಿರುವುದಕ್ಕೆ ಕಾರಣ ಪತ್ತೆ ಮಾಡಿ ಒಂದು ವಾರದೊಳಗೆ ವರದಿ ಸಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೂ ಆದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಸೂಚಿಸಿದ್ದಾರೆ.



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯೂ ಆದ ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಎಸ್.ಸೆಲ್ವಕುಮಾರ್ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಮೈಸೂರಿನ ಜಿ.ಪಂ ಸಭಾಂಗಣದಲ್ಲಿ ಸೋಮವಾರ ನಡೆದ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮೈಸೂರು ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರುವ ಮಕ್ಕಳಲ್ಲಿ ಮೂರರಿಂದ ಆರು ವರ್ಷದೊಳಗಿನ ಮಕ್ಕಳ ಸಂಖ್ಯೆಯಲ್ಲಿ ದೊಡ್ಡ ಮಟ್ಟದ ವ್ಯತ್ಯಾಸವಿದೆ. ಆ ವಯಸ್ಸಿನ ಮಕ್ಕಳು ಅಂಗನವಾಡಿಗೆ ದಾಖಲಾಗದೆ ಎಲ್ಲಿಗೆ ಹೋಗಿದ್ದಾರೆ ಎಂದು ಪತ್ತೆ ಮಾಡಬೇಕು. ಅಲ್ಲದೆ, ಮಕ್ಕಳ ಹಾಜರಾತಿಯಲ್ಲಿನ ವ್ಯತ್ಯಾಸದ ಬಗ್ಗೆಯೂ ಪರಿಶೀಲಿಸಬೇಕು. ಒಂದು ವೇಳೆ ಮಕ್ಕಳು ಗೈರಾಗುತ್ತಿದ್ದರೆ, ಅದಕ್ಕೆ ಕಾರಣ ಪತ್ತೆ ಮಾಡುವಂತೆ ಸೂಚಿಸಿದರು.

ಇದಕ್ಕೂ ಮುನ್ನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಬಿ.ಬಸವರಾಜು ಮಾತನಾಡಿ, ಜಿಲ್ಲೆಯಲ್ಲಿ 2933 ಅಂಗನವಾಡಿ ಕೇಂದ್ರಗಳಿದ್ದು, 1,57,128 ಫಲಾನುಭವಿಗಳಿದ್ದಾರೆ. 6 ತಿಂಗಳಿಂದ 3 ವರ್ಷದೊಳಗಿನ 75,536, 3–6 ವರ್ಷದೊಳಗಿನ 47,796 ದಾಖಲಾಗಿದ್ದಾರೆ. ಅಲ್ಲದೆ, ಗರ್ಭಿಣಿಯರು–14,880, 13,157 ಬಾಣಂತಿಯರಿಗೆ ಸೌಲಭ್ಯ ನೀಡುತ್ತಿರುವುದಾಗಿ ಮಾಹಿತಿ ನೀಡಿದರು.

ಈ ವೇಳೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎಸ್.ಯುಕೇಶ್ ಕುಮಾರ್ ಮಾತನಾಡಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಜನಿಸಿದ ಮಗುವಿನ ಸಂಖ್ಯೆಯ ವಿವರ ಇರುತ್ತದೆ. ಕಳೆದ ಆರು ವರ್ಷಗಳಲ್ಲಿ ಜನಿಸಿರುವ ಮಕ್ಕಳ ವಿವರ ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಪರಿಶೀಲಿಸಬೇಕು. ಜು.28 ರೊಳಗೆ ವರದಿ ಸಲ್ಲಿಸುವಂತೆ ಹೇಳಿದರು.

ಶೀಘ್ರದಲ್ಲೇ ಶೇ.100ರಷ್ಟು ನಳ ಸಂಪರ್ಕ: ಗ್ರಾಮೀಣ ನೀರು ಸರಬರಾಜು ನೈರ್ಮಲ್ಯ ಇಲಾಖೆ ಕಾರ್ಯಪಾಲಕ ಅಭಿಯಂತರ ಎ.ಎಸ್.ರಂಜಿತ್ ಕುಮಾರ್ ಮಾತನಾಡಿ, 1909 ಕುಡಿಯುವ ನೀರಿನ ಕಾಮಗಾರಿಗಳಲ್ಲಿ 1580 ಪೂರ್ಣವಾಗಿದ್ದು, 4.71 ಲಕ್ಷ ಮನೆಗಳಲ್ಲಿ 4.45 ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲಾಗಿದೆ. ಶೀಘ್ರದಲ್ಲೇ ಶೇ.100ರಷ್ಟು ಪೂರ್ಣಗೊಳ್ಳಲಿದೆ. ಹರ್‌ಘರ್‌ಜಲ್ ಗ್ರಾಮಗಳಲ್ಲಿ 478 ಗ್ರಾಮಗಳನ್ನು ಘೋಷಣೆ ಮಾಡಲಾಗಿದೆ ಎಂದು ವರದಿ ಒಪ್ಪಿಸಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಕೆ.ಹೆಚ್.ರವಿ ಮಾತನಾಡಿ, ವಾಡಿಕೆ ಮಳೆಗಿಂತ ಜನವರಿಯಿಂದ ಜುಲೈವರೆಗೆ 443 ಮಿಲಿ ಮೀಟರ್ ಮಳೆಯಾಗಿದ್ದು, ಜೂನ್ ತಿಂಗಳಲ್ಲಿ 33 ಮಿ.ಮೀಟರ್, ಜುಲೈ ತಿಂಗಳಲ್ಲಿ 22 ಮಿಲಿ ಮೀಟರ್ ಕೊರತೆ ಉಂಟಾಗಿದೆ. ತಿಂಗಳಾಂತ್ಯಕ್ಕೆ ಮಳೆ ಬೀಳದಿದ್ದರೆ ಸ್ವಲ್ಪ ಪ್ರಮಾಣದಲ್ಲಿ ರಾಗಿ ಇಳುವರಿ ಕಡಿಮೆಯಾಗಬಹುದು. ರಸಗೊಬ್ಬರ, ಬಿತ್ತನೆ ಬೀಜದ ಕೊರತೆ ಇಲ್ಲ. 91,568 ಮೆಟ್ರಿಕ್ ಟನ್ ರಸಗೊಬ್ಬರ ಬೇಡಿಕೆಯಲ್ಲಿ 50,809 ಮೆಟ್ರಿಕ್ ಟನ್ ದಾಸ್ತಾನಿದೆ ಎಂದು ತಿಳಿಸಿದರು.

ಫಲಿತಾಂಶ ಹೆಚ್ಚಳಕ್ಕೆ ಕ್ರಮ: ಡಿಡಿಪಿಐ ಜವರೇಗೌಡ ಮಾತನಾಡಿ, ಎಸ್‌ಎಸ್‌ಎಲ್‌ಸಿ ಫಲಿತಾಂಶ ಹೆಚ್ಚಳಕ್ಕೆ ಸರ್ಕಾರ 20 ಅಂಶಗಳ, ಜೊತೆಗೆ ಜಿಲ್ಲೆಯಲ್ಲಿ 25 ಅಂಶಗಳ ಕಾರ್ಯಕ್ರಮ ರೂಪಿಸಲಾಗಿದೆ. ಪಾಠ ಮುಗಿದ ಮೇಲೆ ಪರೀಕ್ಷೆ ನಡೆಸಿ ಅದನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡುವಂತೆ ಸರ್ಕಾರ ಸೂಚನೆ ನೀಡಿದೆ. ಇದರಿಂದ ಕಾರ್ಯಭಾರ ಹೆಚ್ಚಾಗಿದೆ ಎಂದು ಶಿಕ್ಷಕರು ಹೇಳುತ್ತಿದ್ದಾರೆ. ಆದರೆ ಸರ್ಕಾರದ ಆದೇಶ ಪಾಲಿಸಬೇಕಾಗಿರುವುದರಿಂದ ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡುವಂತೆ ಎಲ್ಲಾ ಶಿಕ್ಷಕರಿಗೆ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ ಮಾತನಾಡಿ, ಪ್ರತಿ ಇಲಾಖೆಯವರು ಉಳಿದಿರುವ ಕಾಮಗಾರಿಗಳನ್ನು ಪರಿಶೀಲಿಸಿ ಪ್ರಗತಿಯನ್ನು ಸಾಧಿಸಬೇಕು. ಮುಂದೆ ನಡೆಯುವ ಸಭೆಯಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಶೇ.100ರಷ್ಟು ಫಲಿತಾಂಶ ನೀಡಬೇಕು ಎಂದು ಸೂಚಿಸಿದರು.

ಅಕ್ಷರ ದಾಸೋಹ ಯೋಜನೆ ಸಮನ್ವಯಾಧಿಕಾರಿ ಕೃಷ್ಣ ಮಾತನಾಡಿ, ಜಿಲ್ಲೆಯಲ್ಲಿ 1,65,513 ಮಕ್ಕಳಿದ್ದು, 110 ಶಾಲೆಗಳಲ್ಲಿ 19,710 ಮಕ್ಕಳಿಗೆ ಅಕ್ಷಯ ಪಾತ್ರೆ ವತಿಯಿಂದ ಬಿಸಿಯೂಟ ನೀಡಲಾಗುತ್ತಿದೆ. ಈ ಮಕ್ಕಳಿಗೆ 5 ದಿನ ಹಾಲು, ಮೂರು ದಿನ ರಾಗಿಮಾಲ್ಟ್, 6 ದಿನ ಮೊಟ್ಟೆ ನೀಡಲಾಗುತ್ತಿದೆ. ಮೊಟ್ಟೆ ಬೆಲೆ ಹೆಚ್ಚಾಗಿರುವುದರಿಂದ ದರ ಹೆಚ್ಚಿಸುವಂತೆ ಮುಖ್ಯೋಪಾಧ್ಯಾಯರು ಪ್ರಸ್ತಾವನೆ ಸಲ್ಲಿಸಿದ್ದಾರೆ. ಆಯುಕ್ತರ ಸಭೆಯಲ್ಲೂ ಈ ವಿಚಾರ ಗಮನಕ್ಕೆ ತರಲಾಗಿದೆ. ತಾವು ಸಹ ಸಚಿವರು, ಪ್ರಧಾನ ಕಾರ್ಯದರ್ಶಿಗಳ ಗಮನಕ್ಕೆ ತರುವಂತೆ ಕೋರಿದರು.

ಮನೆಗಳ ನಿರ್ಮಾಣ ಪ್ರಗತಿ: ಜಿಲ್ಲಾ ನಗರಾಭಿವೃದ್ಧಿ ಕೋಶ ಯೋಜನಾಧಿಕಾರಿ ವಿ.ಪ್ರಿಯದರ್ಶಿನಿ ಮಾತನಾಡಿ, ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ರಾಜೀವ್‌ಗಾಂಧಿ ಆವಾಸ್ ಯೋಜನೆಯಡಿ ಅನುಮೋದನೆಗೊಂಡಿರುವ ಮನೆಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಒಂದು ವರ್ಷದೊಳಗೆ ಮುಗಿಸುವ ಗುರಿಯನ್ನು ಕೊಡಲಾಗಿದೆ. 9720 ಮನೆಗಳು ಮಂಜೂರಾಗಿದ್ದು, 6905 ಪೂರ್ಣಗೊಂಡಿದೆ. ಇನ್ನು 907ಮನೆಗಳು ಪ್ರಗತಿ, 1908 ಮನೆಗಳು ಈಗಷ್ಟೇ ಪ್ರಾರಂಭವಾಗಬೇಕಿದೆ. ಗುಂಪು ಮನೆ ಯೋಜನೆಯಡಿ ಮಂಡಕಳ್ಳಿಯಲ್ಲಿ 2448, ಲಲಿತಾದ್ರಿಪುರದಲ್ಲಿ 1440, ಕೆ.ಆರ್.ನಗರ ಪುರಸಭೆಯಲ್ಲಿ 843 ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ ಎಂದರು. ಎಡಿಸಿ ಡಾ.ಪಿ.ಶಿವರಾಜು, ಕಂದಾಯ ಇಲಾಖೆಯ ಪ್ರಗತಿ ಕುರಿತು ವಿವರಣೆ ನೀಡಿ, ಜಿಲ್ಲೆಯಲ್ಲಿ 137 ಗ್ರಾಮಗಳನ್ನು ಕಂದಾಯ ಗ್ರಾಮಗಳೆಂದು ಘೋಷಿಸಲಾಗಿದೆ. ಹಕ್ಕುಪತ್ರ, ಭೂ ಸಾಗುವಳಿದಾರರ ಅರ್ಜಿಗಳನ್ನು ಇತ್ಯರ್ಥಪಡಿಸಲು ಕಾಲಮಿತಿ ಹಾಕಿಕೊಳ್ಳಲಾಗಿದೆ ಎಂದರು. ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಜು.27ಕ್ಕೆ ಶ್ರೀನಿವಾಸ ಕಲ್ಯಾಣೋತ್ಸವ, ವಧು–ವರರ ಉಚಿತ ಸಮಾವೇಶ

ಮೈಸೂರು,ಜು.21(ಜಿಎ)–ಮೈಸೂರಿನ ಸಪ್ತಪದಿ ಫೌಂಡೇಷನ್ ಟ್ರಸ್ಟ್‌ನ 12ನೇ ವಾರ್ಷಿಕೋತ್ಸವದ ಅಂಗವಾಗಿ ಮಂಗಳ ಸೂತ್ರ ಫೌಂಡೇಷನ್, ಶ್ರೀರಾಮಮಂದಿರ ಆಡಳಿತ ಮಂಡಳಿ ಹಾಗೂ ವಿವಿಧ ಬ್ರಾಹ್ಮಣ ಸಂಘಟನೆಗಳ ಸಹಯೋಗದಲ್ಲಿ ಜು.27 ರಂದು ಕೃಷ್ಣಮೂರ್ತಿಪುರಂನ ಶ್ರೀರಾಮ ಮಂದಿರದಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ ಹಾಗೂ ವಧು–ವರರ ಉಚಿತ ಸಮಾವೇಶ ಆಯೋಜಿಸಿರುವುದಾಗಿ ಸಂಚಾಲಕ ಶ್ರೀನಿವಾಸ ಎಸ್.ಭಾರದ್ವಾಜ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಳೈ ಆಳ್ವಾರ್ ಸ್ವಾಮೀಜಿ ಸಾನ್ನಿಧ್ಯ ವಹಿಸುವರು, ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸುವರು. ಶಾಸಕ ಕೆ.ಹರೀಶ್ ಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಮಾಜ ಸೇವಕ ರಘುರಾಂ ವಾಜಪೇಯಿ, ಎಕೆಬಿಎಂಎಸ್ ಅಧ್ಯಕ್ಷ ರಘುನಾಥ್, ಹಿರಿಯ ಉಪಾಧ್ಯಕ್ಷ ಲಕ್ಷ್ಮೀಕಾಂತ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು.

ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆವರೆಗೆ ರಾಜ್ಯಮಟ್ಟದ ತ್ರಿಮತಸ್ಥ ಬ್ರಾಹ್ಮಣ ವಧು–ವರರ ಸಮಾವೇಶ ನಡೆಯಲಿದ್ದು, ಜು.22ರಿಂದ ನೋಂದಣಿ ಆರಂಭವಾಗಲಿದೆ. ನೋಂದಾಯಿಸಿಕೊಳ್ಳುವವರು ಮಾಹಿತಿಗೆ 94494 25536 ಸಂಪರ್ಕಿಸಬಹುದು. ಸಂಜೆ 4 ಗಂಟೆಯಿಂದ 7 ಗಂಟೆವರೆಗೆ ಶ್ರೀನಿವಾಸ ಕಲ್ಯಾಣೋತ್ಸವ ನಡೆಯಲಿದೆ ಎಂದರು.

ಗೋಷ್ಠಿಯಲ್ಲಿ ವೆಂಗಿಪುರ ಮಠದ ಇಳೈ ಆಳ್ವಾರ್ ಸ್ವಾಮೀಜಿ, ರಘುರಾಂ ವಾಜಪೇಯಿ, ಎಸ್.ಬಾಲಕೃಷ್ಣ ಸಂಗಾಪುರ ಇದ್ದರು.

ಭಜನಾ ಕಾರ್ಯಕ್ರಮ



ಆಷಾಢ ಶುಕ್ರವಾರದ ಪ್ರಯುಕ್ತ ಮೈಸೂರಿನ ಸೋಮನಾಥನಗರದ ಶ್ರೀ ಸೋಮೇಶ್ವರ ಸತ್ಸಂಗ ಭಜನಾ ಮಂಡಳಿಯವರಿಂದ ಕೇರ್ಗಳ್ಳಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಭಜನಾ ಕಾರ್ಯಕ್ರಮ ನಡೆಯಿತು.

ಪರಿಸರ ದೀವಿಗೆ ಸಖಿ–ಸಸಿ ಕಾರ್ಯಕ್ರಮ



ಸಖಿ ಫೌಂಡೇಶನ್ ಹಾಗೂ ಸೂರ್ಯ ಚಾರಿಟೆಬಲ್ ಟ್ರಸ್ಟ್‌ನ ಕಚೇರಿಯಲ್ಲಿ ಆಯೋಜಿಸಿದ್ದ ಪರಿಸರ ದೀವಿಗೆ ಸಖಿ–ಸಸಿ ಕಾರ್ಯಕ್ರಮದಲ್ಲಿ ಸುರಹೊನ್ನೆ ಅಂತರ್ಜಾಲ ಪತ್ರಿಕೆ ಸಂಪಾದಕಿ ಶ್ರೀಮತಿ ಹೇಮಮಾಲಾ ರೇಷಿಮೆ ಪತ್ರೆ ಹಿಪ್ಪನೇರಲೆ ಕುರಿತು ವಿಶೇಷ ಮಾಹಿತಿ ಪ್ರಸ್ತುತಪಡಿಸಿದರು. ಚಿತ್ರದಲ್ಲಿ ಸಂಸ್ಥೆಯ ಸಂಸ್ಥಾಪನಾ ಕಾರ್ಯದರ್ಶಿ ಲೇಖಕಿ ಶ್ರೀಮತಿ ಗಾಯತ್ರಿ ಸುಂದರೇಶ್, ಸಾಹಿತಿ ಬಿ.ಆರ್.ನಾಗರತ್ನ, ವಕೀಲೆ ಶ್ರೀಮತಿ ರೂಪಶ್ರೀ ಹೇಮಂತ್‌ಕುಮಾರ್ ಇದ್ದಾರೆ.

ಸ್ಕೂಟರ್ ಅಪಘಾತ: ಮಹಿಳೆ ಸಾವು

ಮೈಸೂರು, ಜು.21– ಅಪಘಾತದಲ್ಲಿ ಗಾಯಗೊಂಡಿದ್ದ ಮಹಿಳೆ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿರುವ ಬಗ್ಗೆ ಮೈಸೂರಿನ ಕೃಷ್ಣರಾಜ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಟಿ.ಕೆ.ಲೇಔಟ್‌ನಲ್ಲಿರುವ ಆಶೋದಯ ಸಮಿತಿಯಲ್ಲಿ ಆಶ್ರಯ ಪಡೆದಿದ್ದ ಶೃತಿ(34) ಮೃತಪಟ್ಟವರು. ಇವರು ಜು.18ರಂದು ರಾತ್ರಿ ಪರಿಚಿತರೊಬ್ಬರ ಜೊತೆ ಸ್ಕೂಟರ್‌ನಲ್ಲಿ ಮಾನಂದವಾಡಿ ಮುಖ್ಯರಸ್ತೆಯಿಂದ ಅಶೋಕಪುರಂ ಕಡೆಗೆ ಬರುವಾಗ ಮನೆ ಮಂಚಮ್ಮ, ದಂಡಿನ ಮಾರಮ್ಮ ದೇವಸ್ಥಾನದ ಬಳಿ ಅಪಘಾತ ಸಂಭವಿಸಿತ್ತು. ಸ್ಕೂಟರ್ ನಿಯಂತ್ರಣ ತಪ್ಪಿ ಬಿದ್ದಿದ್ದರಿಂದ ಹಿಂಬದಿಯಲ್ಲಿ ಕುಳಿತಿದ್ದ ಶೃತಿ ತಲೆಗೆ ಗಂಭೀರ ಗಾಯವಾಗಿತ್ತು. ಕೂಡಲೇ ಅವರನ್ನು ಆಂಬುಲೆನ್ಸ್‌ನಲ್ಲಿ ಕೆ.ಆರ್.ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿತ್ತು. ಆದರೆ, ಮರುದಿನ ಅವರು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು.

ಜು.24ರಿಂದ ವಿಜ್ಞಾನ ನಾಟಕೋತ್ಸವ

ಮೈಸೂರು, ಜು.21(ಜಿಎ)–ಮೈಸೂರು ವಿಜ್ಞಾನ ನಾಟಕೋತ್ಸವ ಟ್ರಸ್ಟ್, ಭಾರತೀಯ ಖಗೋಳ ಭೌತಶಾಸ್ತ್ರ ಸಂಸ್ಥೆ ಹಾಗೂ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ವತಿಯಿಂದ ಜು.24ರಿಂದ 27ರವರೆಗೆ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಮೈಸೂರು ವಿಜ್ಞಾನ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಸದಸ್ಯ ಮಾಧವ ಖರೆ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ವಿಜ್ಞಾನಿ ಹಾಗೂ ಸಂಗೀತಗಾರರಾದ ಡಾ.ಅನ್ನಪೂರ್ಣ ಸುಬ್ರಹ್ಮಣ್ಯ ನಾಟಕೋತ್ಸವ ಉದ್ಘಾಟಿಸುವರು, ಇಂಗ್ಲಿಷ್ ನಾಟಕಕಾರ ನೀಲಾಂಜನ್ ಚೌಧರಿ ಆಶಯ ಭಾಷಣ ಮಾಡುವರು. ಬಳಿಕ ಗಣಿತ ಕುಣಿತ, ಸೂರ್ಯಕಲೆ ವೀಕ್ಷಣೆ, ಸಂಜೆ 6.30ಕ್ಕೆ ರಿದ್ಧಿ ರಂಗತಂಡದಿಂದ 'ದಿ ಟ್ರಯಲ್ ಆಫ್ ಅಬ್ದುಸ್ ಸಲಾಮ್' ಇಂಗ್ಲಿಷ್ ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

ಜು.25ರಂದು ಸಂಜೆ 6.30ಕ್ಕೆ ಕನ್ನಡ ನಾಟಕ 'ಹಸಿವು', ಜು.26ರಂದು ಸಂಜೆ 6.30ಕ್ಕೆ 'ರಾಮನ್: ಬೆಳಕು, ಶಬ್ದ, ಸಿಡಿಲು', 27ರಂದು ಸಂಜೆ 6.30ಕ್ಕೆ 'ಮೂರನೇ ಕಿವಿ' ಕನ್ನಡ ನಾಟಕ ಪ್ರದರ್ಶನವಾಗಲಿದೆ. ಪ್ರತಿದಿನವೂ ಗಣಿತದ ಆಟಿಕೆ ಪ್ರದರ್ಶನ, ಪುಸ್ತಕ ಹಾಗೂ ಭಾರತೀಯ ಮಹಿಳಾ ವಿಜ್ಞಾನಿಗಳ ಪೋಸ್ಟರ್ ಪ್ರದರ್ಶನವಿರಲಿದೆ. ನಾಟಕಕ್ಕೆ 100 ರೂ., ಪ್ರವೇಶ ಶುಲ್ಕವಿದೆ. ಗೋಷ್ಠಿಯಲ್ಲಿ ಕೊಳ್ಳೇಗಾಲ ಶರ್ಮ, ಅವರೋಘ್ ವರ್ಷ ಉಪಸ್ಥಿತರಿದ್ದರು.

ಜು.25ಕ್ಕೆ ಉದ್ಯಮಶೀಲತಾ ತಿಳುವಳಿಕೆ ಶಿಬಿರ

ಮೈಸೂರು,ಜು.21– ಕೌಶಲಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಸರ್ಕಾರ ಬೆಂಗಳೂರು ಹಾಗೂ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರ ಹಾಗೂ ಜಿಲ್ಲಾ ಕೈಗಾರಿಕಾ ಕೇಂದ್ರ, ಮೈಸೂರು ಇವರ ಸಂಯುಕ್ತ ಆಶ್ರಯದಲ್ಲಿ, ಮೈಸೂರು ಜಿಲ್ಲೆಯಲ್ಲಿ ಸ್ವಯಂ ಉದ್ಯಮವನ್ನು ಸ್ಥಾಪಿಸಲು ಬಯಸುವವರಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಜುಲೈ 25 ರಂದು ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್, ಜೆ.ಎಲ್.ಬಿ ರಸ್ತೆ ಮೈಸೂರು ಇಲ್ಲಿ ನಡೆಸಲು ತೀರ್ಮಾನಿಸಲಾಗಿದೆ.

ಕಾರ್ಯಕ್ರಮದಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸ ಬಯಸುವ ಆಸಕ್ತರಿಗೆ ಉದ್ಯಮಂತ ಪ್ರೇರಣೆ. ಸ್ವಂತ ಉದ್ಯಮ ಸ್ಥಾಪನೆಗಾಗಿ ಸರ್ಕಾರ ಹಾಗೂ ಹಣಕಾಸು ಸಂಸ್ಥೆಗಳಿಂದ ದೊರೆಯುವ ನೆರವು, ಪ್ರೋತ್ಸಾಹ. ಯೋಜನೆಗಳ ಆಯ್ಕೆ, ಮುಂದೆ ಕೈಗೊಳ್ಳಲಾಗುವ ಉದ್ಯಮಶೀಲತಾಭಿವೃದ್ಧಿ ತರಬೇತಿ ಬಗ್ಗೆ ಮಾಹಿತಿ ಹಾಗೂ ಇತರೆ ಕೈಗಾರಿಕಾ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು ಆಸಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಯೋಜನ ಪಡೆಯಲು ಕೋರಲಾಗಿದೆ. ಭಾಗವಹಿಸುವವರು ಕನಿಷ್ಠ 18 ವರ್ಷ ಮೇಲಟ್ಟ ವಯಸ್ಸಿನವರಾಗಿರಬೇಕು ಹಾಗೂ ಕನಿಷ್ಠ ಹತ್ತನೇ ತರಗತಿ ವ್ಯಾಸಂಗ ಮಾಡಿರಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವಿಳಾಸ: ಜಂಟಿ ನಿರ್ದೇಶಕರು ಕಚೇರಿ, ಸಿಡಾಕ್, ಜಿಲ್ಲಾ ಕೈಗಾರಿಕಾ ಕೇಂದ್ರ, ಸಯ್ಯಾಜಿರಾವ್ ರಸ್ತೆ, ಮೈಸೂರು. ದೂ.ಸಂ: 8310738819, 6361611136, 7760145784 ಸಂಪರ್ಕಿಸಬಹುದು.

'ಒತ್ತಡ ನಿರ್ವಹಣೆ ಬಗ್ಗೆ ವೈಜ್ಞಾನಿಕ ಒಳನೋಟ' ಉಪನ್ಯಾಸ



'ಒತ್ತಡ ನಿರ್ವಹಣೆಯ ಬಗ್ಗೆ ವೈಜ್ಞಾನಿಕ ಒಳನೋಟ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು,ಜು.21(ಎಂಕೆ)–ಸರಳ ಜೀವನ ಶೈಲಿ, ಉಸಿರಾಟದ ಅಭ್ಯಾಸಗಳು, ತಾಳ್ಮೆ ಮತ್ತು ಪೂರ್ವ ನಿಯೋಜಿತ ದೈನಂದಿನ ದಿನಚರಿಗಳಲ್ಲಿ ಉತ್ಸಾಹದಿಂದ ತೊಡಗಿಕೊಳ್ಳುವ ಮೂಲಕ ಒತ್ತಡ ನಿರ್ವಹಣೆ ಮಾಡಬಹುದು ಎಂದು ಮೈಸೂರು ವಿವಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಭಾಗದ ಮುಖ್ಯಸ್ಥರಾದ ಪ್ರೊ.ಎಸ್.ಸುತ್ತೂರು ಎಸ್.ಮಾಲಿನಿ ತಿಳಿಸಿದರು.

ಮೈಸೂರು–ಹುಣಸೂರು ರಸ್ತೆಯಲ್ಲಿರುವ ಲೀ ರುಚಿ ಹೋಟೆಲ್‌ನಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮೆಟೀರಿಯಲ್ಸ್ ಮ್ಯಾನೇಜ್‌ಮೆಂಟ್‌ನ ಮೈಸೂರು ಶಾಖೆ ವತಿಯಿಂದ 'ಒತ್ತಡ ನಿರ್ವಹಣೆ ಬಗ್ಗೆ ವೈಜ್ಞಾನಿಕ ಒಳನೋಟ' ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒತ್ತಡವನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಮಾನವ ದೇಹಕ್ಕೆ ಒತ್ತಡದಿಂದ ಉಂಟಾಗುವ ಹಾನಿ ತಡೆಗಟ್ಟಲು ಜೈವಿಕ ತಿಳುವಳಿಕೆಯಲ್ಲಿನ ಪ್ರಾಯೋಗಿಕ ತಂತ್ರಗಳ ಬಗ್ಗೆ ತಿಳಿಸಿದರು. ಐಐಎಂಎಂ ಮೈಸೂರು ಶಾಖೆ ಅಧ್ಯಕ್ಷ ಎಂ.ಎನ್.ಸುರೇಶ್, ಕಾರ್ಯದರ್ಶಿ ನಂಜುಂಡ ನಾಯಕ ಮತ್ತಿತರರು ಉಪಸ್ಥಿತರಿದ್ದರು.

'ಪಾತಾಳದಿಂದ ಪರ್ವತವೇರಿದ ರುದ್ರಮ್ಮ' ಪುಸ್ತಕ ಬಿಡುಗಡೆ

ಮೃತ ಪತ್ನಿ ಕುರಿತು ಪತಿಯಿಂದ ಕೃತಿ ರಚನೆ

ಮೈಸೂರು,ಜು.21–ಅಗಲಿದ ಪತ್ನಿ ರುದ್ರಮ್ಮ ಕುರಿತು ಪತಿ ನಾಗೇಂದ್ರ ರಾವಣಿಕರ್ ರಚಿಸಿದ 'ಪಾತಾಳದಿಂದ ಪರ್ವತವೇರಿದ ರುದ್ರಮ್ಮ' ಕೃತಿ ಅಪರೂಪವಾದುದು ಎಂದು ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಡಾ.ಕಲಾಶ್ರೀ ಎಚ್.ಎಂ. ಹೇಳಿದರು.



ಮೈಸೂರಿನ ಕಳಲವಾಡಿಯ ಆರ್.ಆರ್.ಫಾರ್ಮಿನಲ್ಲಿ 'ಪಾತಾಳದಿಂದ ಪರ್ವತವೇರಿದ ರುದ್ರಮ್ಮ' ಪುಸ್ತಕವನ್ನು ಡಾ. ಕಲಾಶ್ರೀ ಎಚ್.ಎಂ. ಬಿಡುಗಡೆಗೊಳಿಸಿದರು. ಪ್ರೊ.ಕೋಮಲಾ ಗಂಗಾಧರ್, ನಾಗೇಂದ್ರ ರಾವಣಿಕರ್, ಎಸ್.ಅರುಣ್‌ಕುಮಾರ್, ಚೇತನ್ ರಾವಣಿಕರ್, ನಿತಿನ್ ರಾವಣೀಕರ್, ಡಾ.ಚತುರ್, ಕವಿತಾ ಪ್ರಕಾಶನದ ಗಣೇಶ ಅಮೀನಗಡ ಉಪಸ್ಥಿತರಿದ್ದರು.

ಎಚ್.ಡಿ.ಕೋಟೆ ರಸ್ತೆಯ ಕಳಲವಾಡಿಯಲ್ಲಿರುವ ಆರ್.ಆರ್.ಫಾರ್ಮಿನಲ್ಲಿ ಕವಿತಾ ಪ್ರಕಾಶನದಿಂದ ಏರ್ಪಡಿಸಿದ್ದ ನಾಗೇಂದ್ರ ರಾವಣಿಕರ್ ಅವರ 'ಪಾತಾಳದಿಂದ ಪರ್ವತವೇರಿದ ರುದ್ರಮ್ಮ' ಪುಸ್ತಕ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಅರ್ಧನಾರೀಶ್ವರದಂತೆ ಈ ಕೃತಿ ಆತ್ಮಚರಿತ್ರೆಯೂ ಹೌದು, ಜೀವನಚರಿತ್ರೆಯೂ ಹೌದು. ಎಲ್ಲಾ ರೀತಿಯಲ್ಲೂ ಭಿನ್ನ ಕೃತಿ ಇದು ಎಂದು ಬಣ್ಣಿಸಿದರು.

ಗೃಹವಿಜ್ಞಾನವನ್ನು ಯುವರಾಜ ಕಾಲೇಜಿನ ಬಿಎಸ್ಸಿ ಪಠ್ಯಕ್ರಮದಲ್ಲಿ ಅಳವಡಿಸಿ ಮೊದಲ ಬಾರಿಗೆ ವಿದ್ಯಾರ್ಥಿಗಳು ಈ ವಿಷಯ ಆಯ್ಕೆ ಮಾಡಿಕೊಳ್ಳುವ ಅವಕಾಶ ಕಲ್ಪಿಸಿದ್ದಲ್ಲದೆ ಸ್ನಾತಕೋತ್ತರ ಪದವಿಗೂ ಯುವಕರು ಸೇರ್ಪಡೆಯಾಗಲು ಶ್ರಮಿಸಿದ ಹೆಗ್ಗಳಿಕೆ ರುದ್ರಮ್ಮನವರದು. ಗೃಹ ವಿಜ್ಞಾನದ ಹೆಸರಿಗೆ ಬದಲು ಆಹಾರ ವಿಜ್ಞಾನ ಮತ್ತು ಮಾನವ ವಿಕಾಸ ವಿಭಾಗ ಎಂದು ಹೆಸರಿಟ್ಟರು. ಅಲ್ಲದೆ ಈ ವಿಭಾಗಕ್ಕೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಟ್ಟಡದ ಜೊತೆಗೆ ಮಾನ್ಯತೆ ಹಾಗೂ ಘನತೆ ತಂದು ಕೊಟ್ಟವರು ಎಂದು ಸ್ಮರಿಸಿದರು.

ಮಗುವಾಗಿದ್ದಾಗಲೇ ತಾಯಿಯನ್ನು ಕಳೆದುಕೊಂಡ ರುದ್ರಮ್ಮ ಅವರು ತಮ್ಮ ನೋವು, ಸಂಕಟ, ಅವಮಾನಗಳನ್ನೇ ಸವಾಲುಗಳನ್ನಾಗಿಸಿಕೊಂಡು ಪರ್ವತದೆಡೆಗೆ ನಡೆದವರು. ತಾಯಿಯ ಅಕಾಲಿಕ ಸಾವಿಗೆ ಕಾರಣ ಅರಿಯದೆ, ಬಾಲ್ಯದಿಂದಲೇ ವೈದ್ಯರಾಗುವ ಕನಸು ಹೊತ್ತ ಅವರಿಗೆ ಅದು ಸಾಧ್ಯವಾಗದಿದ್ದರೂ ವಿಶ್ವವಿದ್ಯಾನಿಲಯದಲ್ಲಿ ವಿಭಾಗದ ಪ್ರಾಧ್ಯಾಪಕರಾಗಿ, ಮುಖ್ಯಸ್ಥರಾಗಿ ನಿವೃತ್ತರಾದರು. ಕುಲಪತಿಯಾಗುವ ಅರ್ಹತೆಯಿದ್ದರೂ ವ್ಯವಸ್ಥೆಯಲ್ಲಿನ ರಾಜಕೀಯದಿಂದ ಅವರಿಗೆ ಅದು ಸಾಧ್ಯವಾಗಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.


ಮುಖ್ಯ ಅತಿಥಿಯಾದ ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಹಾಗೂ ಪೋಷಣಾ ವಿಭಾಗದ ಅಧ್ಯಕ್ಷರಾದ ಪ್ರೊ.ಕೋಮಲಾ ಗಂಗಾಧರ್ ಮಾತನಾಡಿ, ದಲಿತ ಮಹಿಳೆಯರಿಗೆ ಉತ್ತೇಜನ ಸಿಗದ ಕಾಲದಲ್ಲಿ ರುದ್ರಮ್ಮ ಓದಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದರು. ಅವರಿಗೆ ಮಾರ್ಗದರ್ಶಕರಾಗಿ ಪ್ರೋತ್ಸಾಹಿಸಿದವರು ಡಾ.ಸೆಲ್ವಿದಾಸ್ ಎಂದರು.

ಅನ್ಯಾಯ ಕಂಡರೆ ಖಂಡಿಸುತ್ತಿದ್ದ ಅವರು, ಎಲ್ಲರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ತಾನು ಪಡೆದ ಸಂಬಳ ತನಗೆ ಮಾತ್ರವಲ್ಲ; ತನ್ನ ಸುತ್ತಲಿನವರ ಸುಧಾರಣೆಗೆ ಎಂದು ತಿಳಿದಿದ್ದರು. ಅವರ ಮಾರ್ಗದರ್ಶನದಲ್ಲಿ ಪಿಎಚ್.ಡಿ ಪದವಿ ಪಡೆದು ಮೈಸೂರು ವಿಶ್ವವಿದ್ಯಾನಿಲಯದ ಆಹಾರ ವಿಜ್ಞಾನ ಹಾಗೂ ಪೋಷಣಾ ವಿಭಾಗದ ಅಧ್ಯಕ್ಷೆಯಾಗಲು ಸಾಧ್ಯವಾಯಿತು ಎಂದು ವಿವರಿಸಿದರು. ವಕೀಲರಾದ ಎಸ್.ಅರುಣ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೃತಿ ರಚನೆಕಾರ ನಾಗೇಂದ್ರ ರಾವಣಿಕರ್, ಅವರ ಮಕ್ಕಳಾದ ಚೇತನ್, ನಿತಿನ್ ಹಾಗೂ ಮೊಮ್ಮಗ ಡಾ.ಚತುರ್ ವೇದಿಕೆ ಮೇಲಿದ್ದರು. ಕವಿತಾ ಪ್ರಕಾಶನದ ಗಣೇಶ ಅಮೀನಗಡ ಕಾರ್ಯಕ್ರಮ ನಿರ್ವಹಿಸಿದರು.


ದೇಶ – ವಿದೇಶ

ಬರಾಕ್ ಒಬಾಮ ಬಂಧನವಾಗುವ AI ವಿಡಿಯೊ ಹಂಚಿಕೊಂಡ ಟ್ರಂಪ್

ವಾಷಿಂಗ್ಟನ್: ಯಾವುದಾದರೊಂದು ವಿಚಾರಕ್ಕೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುದ್ದಿಯಾಗುತ್ತಲೇ ಇರುತ್ತಾರೆ. ಇದೀಗ ಅಮೆರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮ ಅವರು ಜೈಲಿನಲ್ಲಿ ಇರುವಂತೆ ಕಾಣುವ ಎಐ ವಿಡಿಯೊ ಹಂಚಿಕೊಂಡಿದ್ದಾರೆ. ಎಐ ವಿಡಿಯೊದಲ್ಲಿ ಒಬಾಮ ಅವರು ವಿಶೇಷವಾಗಿ ಅಧ್ಯಕ್ಷರು ಕಾನೂನಿಗಿಂತ ದೊಡ್ಡವರು ಎನ್ನುತ್ತಾರೆ. ನಂತರ ಅಮೆರಿಕದ ಮಾಜಿ ಅಧ್ಯಕ್ಷ ಜೋ ಬೈಡೆನ್ ಸಹಿತ ಹಲವು ರಾಜಕೀಯ ನಾಯಕರ ಫೋಟೊವನ್ನು ತೋರಿಸಲಾಗುತ್ತದೆ. ಬೈಡನ್ ಅವರು ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ ಎನ್ನುತ್ತಾರೆ. ಮುಂದುವರಿದು ಟ್ರಂಪ್ ಮತ್ತು ಒಬಾಮ ಶ್ವೇತಭವನದಲ್ಲಿ ಕುಳಿತಿರುತ್ತಾರೆ. ಆಗ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್‌ನ ಅಧಿಕಾರಿಗಳು ಒಬಾಮರ ಕೈಗಳಿಗೆ ಕೋಳ ಹಾಕಿ ಕರೆದೊಯ್ಯುತ್ತಾರೆ. ವೀಡಿಯೊದ ಕೊನೆಯಲ್ಲಿ ಒಬಾಮ ಕೇಸರಿ ಬಣ್ಣದ ಉಡುಗೆಯಲ್ಲಿ ಜೈಲಿನೊಳಗಿರುವಂತೆ ತೋರಿಸಲಾಗಿದೆ. ಈ ವೀಡಿಯೊ ಕುರಿತು ಟ್ರಂಪ್ ಯಾವುದೇ ಸ್ಪಷ್ಟನೆ ನೀಡಿಲ್ಲ. ಆದರೆ ವೀಡಿಯೊದ ಮೇಲೆ 'ಕಾನೂನಿಗಿಂತ ದೊಡ್ಡವರು ಯಾರೂ ಇಲ್ಲ' ಎಂದು ಬರೆದುಕೊಂಡಿದ್ದಾರೆ



2006ರ ಮುಂಬೈ ಸರಣಿ ಸ್ಫೋಟ: 12 ಆರೋಪಿಗಳು ಖುಲಾಸೆ



ಮುಂಬೈ: 180ಕ್ಕೂ ಅಧಿಕ ಮಂದಿಯ ಸಾವಿಗೆ ಕಾರಣವಾಗಿದ್ದ 2006ರ ಮುಂಬೈ ರೈಲು ಸರಣಿ ಸ್ಫೋಟ ಪ್ರಕರಣದ ಎಲ್ಲಾ 12 ಆರೋಪಿಗಳನ್ನು ಬಾಂಬೆ ಹೈಕೋರ್ಟ್ ಸೋಮವಾರ ಖುಲಾಸೆಗೊಳಿಸಿದೆ.

ಆರೋಪವನ್ನು ಸಾಬೀತುಪಡಿಸಲು ಪ್ರಾಸಿಕ್ಯೂಷನ್ ಸಂಪೂರ್ಣವಾಗಿ ವಿಫಲವಾಗಿದ್ದು, ಅವರು ತಪ್ಪೆಸಗಿದ್ದಾರೆ ಎಂದು ನಂಬಲು ಕಷ್ಟವಾಗುತ್ತಿದೆ ಎಂದು ಕೋರ್ಟ್ ಹೇಳಿದೆ. ಪ್ರಕರಣದ ತನಿಖೆ ಮಾಡಿದ್ದ ಮಹಾರಾಷ್ಟ್ರದ ಭಯೋತ್ಪಾದನಾ ನಿಗ್ರಹ ದಳಕ್ಕೆ ಈ ತೀರ್ಪಿನಿಂದ ಭಾರಿ ಮುಖಭಂಗವಾಗಿದೆ. ಕೃತ್ಯ ಎಸಗಲು ಬಳಸಲಾದ ಬಾಂಬ್ ಯಾವುದು ಎನ್ನುವುದನ್ನೂ ದಾಖಲಿಸಲು ಪ್ರಾಸಿಕ್ಯೂಷನ್ ವಿಫಲವಾಗಿದೆ. ಆರೋಪಿಗಳನ್ನು ಶಿಕ್ಷಿಸಲು ಅದರ ಮೇಲೆ ಅವಲಂಬಿತವಾದ ಪುರಾವೆಗಳು ನಿರ್ಣಾಯಕವಾಗಿಲ್ಲ ಎಂದು ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಅನಿಲ್ ಕಿಲೋರ್ ಹಾಗೂ ಶ್ಯಾಮ್ ಚಂದ್ರಕ್ ಅವರಿದ್ದ ವಿಶೇಷ ನ್ಯಾಯಪೀಠ ನುಡಿಯಿತು. ಸಾಕ್ಷಿಗಳ ಹೇಳಿಕೆ ಹಾಗೂ ಆಪಾದಿತರಿಂದ ವಶಪಡಿಸಿಕೊಳ್ಳಲಾದ ವಸ್ತುಗಳಿಗೆ ಯಾವುದೇ ಸಾಕ್ಷ್ಯ ಮೌಲ್ಯವಿಲ್ಲ ಎಂದು ಪ್ರಕರಣದಲ್ಲಿ ದೋಷಿಗಳಾಗಿದ್ದವರ ಖುಲಾಸೆ ವೇಳೆ ಕೋರ್ಟ್ ಹೇಳಿದೆ. ಖುಲಾಸೆಗೊಂಡ 12 ಮಂದಿ ಪೈಕಿ ವಿಶೇಷ ನ್ಯಾಯಾಲಯವು 5 ಮಂದಿಗೆ ಗಲ್ಲು ಶಿಕ್ಷೆ ಹಾಗೂ 7 ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

280 ಪ್ರಯಾಣಿಕರಿದ್ದ ಹಡಗಿನಲ್ಲಿ ಬೆಂಕಿ ಅವಘಡ: ಮೂವರು ಸಾವು



ಜಕಾರ್ತಾ: 280 ಪ್ರಯಾಣಿಕರಿದ್ದ ಹಡಗಿನಲ್ಲಿ ಭಾರಿ ಪ್ರಮಾಣದ ಬೆಂಕಿ ಕಾಣಿಸಿಕೊಂಡ ಪರಿಣಾಮ ಮೂವರು ಸಾವನ್ನಪ್ಪಿದ ಘಟನೆ ಇಂಡೋನೇಷ್ಯಾದ ಉತ್ತರ ಸುಲವೇಸಿಯಲ್ಲಿರುವ ತಾಲಿಸ್ ದ್ವೀಪದ ಬಳಿ ನಡೆದಿದೆ. ಕೆಎಂ ಬಾರ್ಸಿಲೋನಾ ವಿಎ ಎಂಬ ಹಡಗಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿದ್ದು, ಹಲವು ಪ್ರಯಾಣಿಕರು ಜೀವ ಉಳಿಸಿಕೊಳ್ಳುವ ಸಲುವಾಗಿ ಲೈಫ್ ಜಾಕೆಟ್ ಹಾಕಿಕೊಂಡು ಸಮುದ್ರಕ್ಕೆ ಹಾರಿದ್ದಾರೆ. ರಕ್ಷಣಾ ತಂಡ ಹಾಗೂ ಸ್ಥಳೀಯ ಮೀನುಗಾರರ ದೋಣಿಯ ಸಹಾಯದಿಂದ ಸುಮಾರು 150 ಮಂದಿ ಪ್ರಯಾಣಿಕರನ್ನು ರಕ್ಷಿಸಿದೆ. ಹಡಗಿನಲ್ಲಿ ಇನ್ನೂ ಹಲವರು ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಬೆಂಕಿ ಕಾಣಿಸಿಕೊಂಡ ಹಿನ್ನೆಲೆ ಹಡಗಿನ ಡೆಕ್‌ಗಳಲ್ಲಿ ದಟ್ಟವಾದ ಕಪ್ಪು ಹೊಗೆ ಆವರಿಸಿದೆ. ಅಬ್ದುಲ್ ರಹಮದ್ ಅಗು ಎಂಬ ಪ್ರಯಾಣಿಕ ಫೇಸ್‌ಬುಕ್ ಲೈವ್‌ಸ್ಟ್ರೀಮ್ ಮೂಲಕ ಹಡಗಿನಲ್ಲಿ ಬೆಂಕಿ ಅವಘಡದ ದೃಶ್ಯಗಳನ್ನು ಸೆರೆಹಿಡಿದಿದ್ದಾರೆ. ಸಮುದ್ರಕ್ಕೆ ಹಾರಿದ ಪ್ರಯಾಣಿಕರ ಪೈಕಿ ಅಬ್ದುಲ್ ರಹಮದ್ ಕೂಡ ಒಬ್ಬರು. ಹಡಗಿನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ನಮಗೆ ಸಹಾಯ ಮಾಡಿ ಎಂದು ಅಬ್ದುಲ್ ರಹಮದ್ ವೀಡಿಯೋದಲ್ಲಿ ಕೇಳಿಕೊಂಡಿದ್ದಾರೆ. ಬೆಂಕಿ ಅವಘಡಕ್ಕೆ ನಿಖರ ಕಾರಣದ ಬಗ್ಗೆ ತನಿಖೆ ನಡೆಯುತ್ತಿದೆ.

20 ರೂ.ಗಾಗಿ ತಾಯಿಯನ್ನೇ ಕೊಂದ ಪಾಪಿ ಮಗ



ನೂಹ್: ಮಾದಕ ದ್ರವ್ಯಕ್ಕೆ ದಾಸನಾಗಿದ್ದ ವ್ಯಕ್ತಿಯೊಬ್ಬ ಹಣ ಕೊಡಲಿಲ್ಲ ಎಂದು ತನ್ನ ಹೆತ್ತ ತಾಯಿಯನ್ನೇ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಹರಿಯಾಣದಲ್ಲಿ ನಡೆದಿದೆ. ಕೇವಲ 20 ರೂಪಾಯಿಗಾಗಿ 56 ವರ್ಷದ ತಾಯಿಯನ್ನು ಮಗ ಹತ್ಯೆ ಮಾಡಿದ್ದಾನೆ. ಜೈಸಿಂಗ್ ಪುರದಲ್ಲಿ ಈ ಆಘಾತಕಾರಿ ಘಟನೆ ನಡೆದಿದೆ. ಜೆಮ್‌ಶೆಡ್ ಹೆತ್ತ ತಾಯಿಯನ್ನೇ ಕಡಿದು ಕೊಂದ ಪಾಪಿ.

ಪೊಲೀಸರ ಪ್ರಕಾರ, ಮಗ ಮಾದಕ ವ್ಯಸನಿಯಾಗಿದ್ದು, ಬಹಳ ದಿನಗಳಿಂದ ಗಾಂಜಾ ಮತ್ತು ಅಫೀಮು ಸೇವಿಸುತ್ತಿದ್ದಾನೆ. ಕೊಲೆ ಮಾಡಿದ ಬಳಿಕ ರಕ್ತ ಸಿಕ್ತ ಸ್ಥಿತಿಯಲ್ಲಿದ್ದ ತಾಯಿ ಜತೆಯೇ ಒಂದೇ ಮನೆಯಲ್ಲಿ ಆತ ಇಡೀ ರಾತ್ರಿ ಕಳೆದಿದ್ದಾನೆ. ಈತ ತನ್ನ ತಾಯಿ ರಜಿಯಾ ಬಳಿ 20 ರೂ. ಕೊಡುವಂತೆ ಕೇಳಿದ್ದ. ಆದರೆ ಅವರು ನಿರಾಕರಿಸಿದ್ದರು. ಅದಕ್ಕೆ ಕೋಪಗೊಂಡ ಮಗ ತಾಯಿಯನ್ನು ಕೊಡಲಿಯಿಂದ ಕಡಿದು ಹತ್ಯೆ ಮಾಡಿದ್ದಾನೆ. ಎಫ್‌ಐಆರ್ ದಾಖಲಿಸಲಾಗಿದೆ, ಮರಣೋತ್ತರ ಪರೀಕ್ಷೆ ನಂತರ ರಜಿಯಾ ಅವರ ಶವವನ್ನು ಕುಟುಂಬಕ್ಕೆ ಹಸ್ತಾಂತರಿಸಲಾಗಿದೆ. ರಜಿಯಾ ಅವರ ಪತಿ ಮುಬಾರಕ್ ಕೇವಲ ನಾಲ್ಕು ತಿಂಗಳ ಹಿಂದೆ ನಿಧನರಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕೇರಳ ಮಾಜಿ ಸಿಎಂ ಅಚ್ಯುತಾನಂದನ್ ನಿಧನ



ತಿರುವನಂತಪುರಂ: ಕೇರಳ ಮಾಜಿ ಮುಖ್ಯಮಂತ್ರಿ ಮತ್ತು ಕಮ್ಯುನಿಸ್ಟ್ ಪಕ್ಷದ ಖ್ಯಾತ ನಾಯಕ ವಿ.ಎಸ್. ಅಚ್ಯುತಾನಂದನ್ ಅವರು ಸೋಮವಾರ ನಿಧನರಾಗಿದ್ದಾರೆ. 101 ವರ್ಷದ ಅಚ್ಯುತಾನಂದನ್ ಅವರನ್ನು ರಾಜಧಾನಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ನಿಧನರಾಗಿದ್ದಾರೆ. ಭಾರತದ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಸ್ಥಾಪಕ ನಾಯಕ ವಿ.ಎಸ್. ಅಚ್ಯುತಾನಂದನ್ ಕಳೆದ ಅಕ್ಟೋಬರ್‌ನಲ್ಲಿ 101 ವರ್ಷ ಕಾಲಿಟ್ಟಿದ್ದರು. 1964ರಲ್ಲಿ ನಡೆದ ಐತಿಹಾಸಿಕ ಸಿಪಿಐ ರಾಷ್ಟ್ರೀಯ ಮಂಡಳಿ ಸಭೆಯಿಂದ ಹೊರನಡೆದು ಭಾರತ ಕಮ್ಯುನಿಸ್ಟ್ ಪಕ್ಷ ಸ್ಥಾಪಿಸಿದ್ದರು. ಶತಾಯುಷಿಯಾದ ಅಚ್ಯುತಾನಂದನ್ ಕೇರಳ ರಾಜಕಾರಣದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ವ್ಯಕ್ತಿಯಾಗಿದ್ದಾರೆ. ಏಳು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಅವರು, 2006ರಿಂದ 2011ರವರೆಗೆ ಕೇರಳ ರಾಜ್ಯದ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು. ತಮ್ಮ ರಾಜಕೀಯ ಜೀವನದಲ್ಲಿ ಅವರು ಒಟ್ಟು 10 ಚುನಾವಣೆಗಳನ್ನು ಎದುರಿಸಿದ್ದಾರೆ. ಕಷ್ಟಕರವಾದ ಬಾಲ್ಯವನ್ನು ಕಳೆದ ವಿಎಸ್, ಟೈಲರಿಂಗ್ ಅಂಗಡಿಯಲ್ಲಿ ತಮ್ಮ ಸಹೋದರನಿಗೆ ಸಹಾಯ ಮಾಡಿದರು ಮತ್ತು ನಂತರ ತೆಂಗಿನಕಾಯಿ ಕಾರ್ಖಾನೆ ಕೆಲಸಗಾರರಾದರು. 1938ರಲ್ಲಿ ಕುಟ್ಟನಾಡಿನಲ್ಲಿ ಕೃಷಿ ಕಾರ್ಮಿಕರನ್ನು ಸಂಘಟಿಸುವ ಮೂಲಕ ತಮ್ಮ ಆರಂಭಿಕ ರಾಜಕೀಯ ಜೀವನವನ್ನು ಆರಂಭಿಸಿದ್ದರು.

ಮೈಸೂರು ಮಿತ್ರ ಮಂಗಳವಾರ 22 ಜುಲೈ 2025

ವನ್ಯಜೀವಿಗಳ ಹಾವಳಿ ತಡೆಗೆ ಆಗ್ರಹಿಸಿ ಪ್ರತಿಭಟನೆ



ವನ್ಯಜೀವಿಗಳ ಹಾವಳಿ ನಿಯಂತ್ರಣಕ್ಕೆ ಆಗ್ರಹಿಸಿ ಪೊನ್ನಂಪೇಟೆ ವಲಯ ಅರಣ್ಯ ಅಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಮಡಿಕೇರಿ,ಜು.21– ಪೊನ್ನಂಪೇಟೆ ತಾಲೂಕಿನ ಬಿ.ಶೆಟ್ಟಿಗೇರಿ, ಬೇಗೂರು, ಈಚೂರು, ಕುಂದ ಹಾಗೂ ಹಳ್ಳಿಗಟ್ಟು ಗ್ರಾಮ ವ್ಯಾಪ್ತಿಗೆ ಒಳಪಡುವ ಕೃಷಿಕರು ಮತ್ತು ಬೆಳೆಗಾರರು ಕಾಡಾನೆ ಹಾವಳಿ ತಡೆಗಟ್ಟಬೇಕೆಂದು ಆಗ್ರಹಿಸಿ ರಾಜಕೀಯ ರಹಿತವಾಗಿ ಪೊನ್ನಂಪೇಟೆ ವಲಯ ಅರಣ್ಯ ಅಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಿದರು. ಬರಪೊಳೆ ಪ್ರದೇಶದಿಂದ ಬರುವ ಕಾಡಾನೆಗಳಿಂದ ಸಂಘರ್ಷ ಮಿತಿ ಮೀರಿದೆ. ಇದರ ಜೊತೆಯಲ್ಲೇ ಹುಲಿ ಹಾವಳಿಯಿಂದ ಜಾನುವಾರುಗಳು ಬಲಿಯಾಗುತ್ತಿವೆ. ಇದರ ಪರಿಹಾರಕ್ಕೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮಾಚ್ಚಿಮಾಡ ರವೀಂದ್ರ ಮಾತನಾಡಿ ಅರಣ್ಯದಿಂದ ಬರುವ ಆನೆಗಳ ಹಾವಳಿಯನ್ನು ನಿಯಂತ್ರಿಸುವ ಕೆಲಸ ಮಾಡಬೇಕು. ಅರಣ್ಯ ಇಲಾಖಾಧಿಕಾರಿಗಳು ವನ್ಯಜೀವಿಗಳು ನಾಡಿಗೆ ಬರದಂತೆ ತಡೆಯಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಬೇಕು ಎಂದು ಒತ್ತಾಯಿಸಿ ಪೊನ್ನಂಪೇಟೆ, ಬಿ.ಶೆಟ್ಟಿಗೇರಿ, ಬೇಗೂರು, ಚೀನಿವಾಡ ಹಾಗೂ ಕುಂದಾ ಭಾಗದಲ್ಲಿ ವನ್ಯ ಜೀವಿಗಳ ಹಾವಳಿ ಇರಬಾರದು. ಹಾವಳಿ ಮುಂದುವರೆದರೆ ತೀವ್ರ ಚಳವಳಿ ನಡೆಸುವುದಾಗಿ ಹೇಳಿದರು.

ಕಾಡಾನೆಗಳನ್ನು 3 ದಿನಗಳಲ್ಲಿ ಕಾಡಿಗಟ್ಟಲು ಕ್ರಮ ಕೈಗೊಳ್ಳಬೇಕು. ರೈತರ ಜಾನುವಾರುಗಳ ಮೇಲೆ ಮುಂದೆ ಇದೇ ರೀತಿ ಹುಲಿ ದಾಳಿದರೆ ಅರಣ್ಯ ಇಲಾಖೆ ಪರಿಹಾರ ಹಣದ ಬದಲು ಜಾನುವಾರುಗಳನ್ನೇ ನೀಡುವ ವ್ಯವಸ್ಥೆ ಆಗಬೇಕೆಂದು ಒತ್ತಾಯಿಸಿ ಎಸಿಎಫ್ ಗೋಪಾಲ್‌ರಿಗೆ ಮನವಿ ಸಲ್ಲಿಸಿದರು.

ಬೇಗೂರು, ಚೀನಿವಾಡ ಗ್ರಾಮ ಪ್ರದೇಶಗಳು ಮಡಿಕೇರಿ ವೈಲ್ಡ್‌ಲೈಫ್‌ಗೆ ಒಳಪಡುತ್ತವೆ. ಈ ಪ್ರದೇಶಗಳಿಗೆ ಕಾಡಾನೆಗಳು ಬಂದಿರುವ ಮಾಹಿತಿ ದೊರೆತ ತಕ್ಷಣ ಕಾಡಿಗಟ್ಟಲು ಕ್ರಮ ಕೈಗೊಳ್ಳಲಾಗಿದೆ ಎಂದು ಮನವಿ ಸ್ವೀಕರಿಸಿದ ಎಸಿಎಫ್ ಗೋಪಾಲ್ ಹೇಳಿದರು. ಇನ್ನು ಬ್ಯಾರಿಕೇಡ್ ಅಳವಡಿಸುವ ಕಾಮಗಾರಿ ವೈಲ್ಡ್‌ಲೈಫ್ ವಿಭಾಗದಿಂದ ಆಗಬೇಕಿದ್ದು, ಮನವಿ ಪತ್ರವನ್ನು ಅಲ್ಲಿನ ಅಧಿಕಾರಿಗಳಿಗೆ ತಲುಪಿಸಿ ಸೂಕ್ತ ಕ್ರಮಕ್ಕೆ ಶಿಫಾ ರಸು ಮಾಡುವುದಾಗಿ ಹೇಳಿದರು.

ಸರಕಾರದಿಂದ ಬಿಡುಗಡೆಯಾಗಿರುವ 21 ಕೋಟಿ ರೂ. ಅನುದಾನದಲ್ಲಿ ಮಲ್ದಾರೆ ವ್ಯಾಪ್ತಿಯ ಕಾವೇರಿ ನದಿ ಭಾಗದಿಂದ ಘಟ್ಟದಳ್ಳದವರೆಗೆ 8 ಕಿ.ಮೀ. ರೈಲ್ವೆ ಬ್ಯಾರಿಕೇಡ್, ಹಾಗೂ ನಾಗರಹೊಳೆ ಹುಲಿ ಸಂರಕ್ಷತಾ ಪ್ರದೇಶವಾದ ತಿತಿಮತಿ ಭಾಗಕ್ಕೆ 7 ಕಿ.ಮೀ ರೈಲ್ವೆ ಬ್ಯಾರಿಕೇಡ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದೆ. ಬಿ.ಶೆಟ್ಟಿಗೇರಿ ಭಾಗದಲ್ಲಿ ವನ್ಯಪ್ರಾಣಿ ಹಾವಳಿ ತಡೆಗಟ್ಟಲು ಸೋಲಾರ್ ತಂತಿ ಅಳವಡಿಸುವ ಚಿಂತನೆ ಇದೆ ಎಂದರು

ಪ್ರತಿಭಟನೆಯಲ್ಲಿ ಚೋಡುಮಾಡ ಶಾಮ್, ವಿಕ್ರಂ, ಸುಬ್ರಮಣ್ಣಿ, ಮತ್ರಂಡ ಪ್ರವೀಣ್, ಕಾರ್ಯಪ್ಪ, ಸ್ಕಂದ, ರಶೀಕ, ಮಿತ್ರ, ವಿಠಲ್, ಅಯ್ಯಪ್ಪ, ರಾಕೇಶ್, ನಾಮೇರ ವಾಸು, ಅಚ್ಚಯ್ಯ, ಮೊಣ್ಣಪ್ಪ, ತೀತಿಮಾಡ ಪವಿ, ರವಿ, ಕೇಚಟ್ಟಿರ ಅರುಣಾ, ಸಪ್ತ, ಅಕ್ಷಯ್, ಕಾರ್ಯಪ್ಪ, ತಮ್ಮಯ್ಯ ಹಾಗೂ ಚೀನಿವಾಡ, ಬಿ.ಶೆಟ್ಟಿಗೇರಿ, ಕುಂದಹಳ್ಳಿಗಟ್ಟು, ಈಚೂರು, ಬೇಗೂರುಗ್ರಾಮಸ್ಥರು ಭಾಗಿಯಾಗಿದ್ದರು.

4 ದಿನ ಬಳಿಕ ಮಾದಾರನ ಶವ ಪತ್ತೆ



ಎನ್‌ಡಿಆರ್‌ಎಫ್ ತಂಡದ ಯೋಧರು ನೀರು ಪಾಲಾದ 4 ದಿನಗಳ ಬಳಿಕ ದುರಗಪ್ಪ ಮಾದಾರ(19)ನ ಶವ ಪತ್ತೆ ಹಚ್ಚಿದರು.

ಮಡಿಕೇರಿ,ಜು.21–ನೀರು ಪಾಲಾದ 4 ದಿನಗಳ ಬಳಿಕ ಬೆಳಗಾಂನ ಸಿಂಧೋಗಿ ತಾಲೂಕಿನ ದುರಗಪ್ಪ ಮಾದಾರ(19) ಎಂಬಾತನ ಮೃತದೇಹ ಕರಿಕೆ–ಕಾಸರಗೋಡು ಗಡಿಯ ಮಂಜಾಡ್ಕ ನದಿಯಲ್ಲಿ ಪತ್ತೆಯಾಗಿದೆ.

ನದಿ ದಾಟುವ ಸಂದರ್ಭ ನಾಪತ್ತೆಯಾಗಿದ್ದ ದುರಗಪ್ಪ ಮಾದಾರನಿಗಾಗಿ ಕರಿಕೆ ಗ್ರಾಮಸ್ಥರು, ಕಾಸರಗೋಡು ಪೊಲೀಸರು, ಅಗ್ನಿ ಶಾಮಕ ದಳ, ಕಂದಾಯ ಇಲಾಖೆ ಅಧಿಕಾರಿಗಳು ನಿರಂತರ ಶೋಧ ಕಾರ್ಯ ನಡೆಸಿದ್ದು, ಕಾಸರಗೋಡು ಎನ್‌ಡಿಆರ್‌ಎಫ್ ತಂಡದ 20 ಯೋಧರು ಕೂಡ ಆಗಮಿಸಿದ್ದರು. ಸ್ಥಳೀಯ ನುರಿತ ಈಜುಗಾರರು ಮತ್ತು ಕೇರಳ ಸಿವಿಲ್ ಡಿಫೆನ್ಸ್‌ನ ಸ್ವಯಂ ಸೇವಕರು ಕೂಡ ಶೋಧ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಘಟನೆ ನಡೆದ ಮುಳುಗು ಸೇತುವೆಯಿಂದ 1.5 ಕಿ.ಮೀ ದೂರದಲ್ಲಿರುವ ಪಟ್ಟಕುಂದ್ ಎಂಬ ಸ್ಥಳದಲ್ಲಿ ದುರಗಪ್ಪ ಮಾದಾರನ ಮೃತದೇಹ ಪತ್ತೆಯಾಗಿದೆ. ಸ್ಥಳಕ್ಕೆ ಆಗಮಿಸಿದ ಕಾಸರಗೊಡು ಪೊಲೀಸರು ಸ್ಥಳ ಮಹಜರು ನಡೆಸಿ ಮರಣೋತ್ತರ ಪರೀಕ್ಷೆಗಾಗಿ ಕಾಸರಗೋಡು ಸರಕಾರಿ ಆಸ್ಪತ್ರೆಗೆ ಸಾಗಿಸಿದರು. ತದನಂತರ ಮೃತದೇಹವನ್ನು ಪೋಷಕರಿಗೆ ಹಸ್ತಾಂತರಿಸಲಾಯಿತು. ಮಗನನ್ನು ಕಳೆದುಕೊಂಡ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಬೆಳಗಾಂ ಮೂಲದ ದುರಗಪ್ಪ ಮಾದಾರ ಕಾಸರಗೋಡುವಿನ ರಾಜಪುರ ತೋಟಗಾರಿಕಾ ನಿಗಮದ ಅನಾನಸು ಕೃಷಿ ಕೇಂದ್ರದಲ್ಲಿ ಜೆಸಿಬಿ ಚಾಲಕನ ಸಹಾಯಕನಾಗಿ ಕೆಲಸ ನಿರ್ವಹಿಸುತ್ತಿದ್ದ. ಶುಕ್ರವಾರ ಮಧ್ಯಾಹ್ನ ಜೆಸಿಬಿ ಚಾಲಕನಿಗೆ ಊಟ ತರಲು ನದಿಯಲ್ಲಿ ಮುಳುಗಿದ್ದ ಸೇತುವೆಯನ್ನು ಬೈಕ್‌ನಲ್ಲಿ ದಾಟುತ್ತಿದ್ದ ಸಂದರ್ಭ ನೀರಿನ ಸೆಳೆತಕ್ಕೆ ಸಿಲುಕಿ ನೀರುಪಾಲಾಗಿದ್ದ.

ಕರಿಕೆ ಗ್ರಾ.ಪಂ ಅಧ್ಯಕ್ಷ ಬಾಲಚಂದ್ರ ನಾಯರ್, ಕಾಸರಗೋಡು ವೆಳ್ಳರಿಕುಂದ್ ತಾಲೂಕು ತಹಶೀಲ್ದಾರ್ ಮುರಳೀಧರನ್, ಕರಿಕೆ, ಕಾಸರಗೋಡುವಿನ ಚೇಂಬೇರಿ, ತೋಟಂ, ಪಾಣತ್ತೂರು ಪಂಚಾಯಿತಿಗಳ ಜನಪತ್ರಿನಿಧಿಗಳು, ಎನ್‌ಡಿಆರ್‌ಎಫ್ ತಂಡ, ಕಾಸರಗೋಡು ಸಿವಿಲ್ ಡಿಫೆನ್ಸ್ ಸ್ವಯಂ ಸೇವಕರು ಉಪಸ್ಥಿತರಿದ್ದರು.

ಮಾರಣಾಂತಿಕ ಹಲ್ಲೆ ನಡೆಸಿ ಸರ ಕದ್ದಿದ್ದ ಆರೋಪಿ ಹಿಡಿದ ಸಾರ್ವಜನಿಕರು



ಸಾರಮ್ಮ



ಮುನಾವರ್

ಮಡಿಕೇರಿ,ಜು.21– ಒಂಟಿ ಮನೆಗೆ ನೀರು ಕೇಳುವ ನೆಪದಲ್ಲಿ ತೆರಳಿ ಮನೆಯಲ್ಲಿದ್ದ ಅತ್ತೆ ಸೊಸೆ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಚಿನ್ನದ ಸರವನ್ನು ಕದ್ದೊಯ್ದ ಆರೋಪಿಯನ್ನು ಸಾರ್ವಜನಿಕರೇ ಸೆರೆ ಹಿಡಿದು ಪೊಲೀಸರಿಗೆ ಒಪ್ಪಿಸಿದ ಘಟನೆ ಸಿದ್ದಾಪುರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಂಡಂಗೇರಿ ಪರಂಬು ಗ್ರಾಮದಲ್ಲಿ ನಡೆದಿದೆ. ಪಾಲಿಬೆಟ್ಟ ನಿವಾಸಿ ಸಂತೆಯಲ್ಲಿ ತಿಂಡಿ ವ್ಯಾಪಾರ ಮಾಡುವ ಮುನಾವರ್(28) ಎಂಬಾತನೇ ಬಂಧಿತ ಆರೋಪಿಯಾಗಿದ್ದಾನೆ.

ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಕೊಂಡಂಗೇರಿಯ ಸಾರಮ್ಮ ಎಂಬವರ ಮನೆಗೆ ಆಗಮಿಸಿದ ಅಪರಿಚಿತ ವ್ಯಕ್ತಿ ತನಗೆ ಆಯಾಸವಾಗುತ್ತಿದೆ ಎಂದು ಕುಡಿಯಲು ನೀರು ಕೇಳಿ ಸ್ಥಳದಿಂದ ತೆರಳಿದ್ದ. ಬಳಿಕ ಮಧ್ಯಾಹ್ನ ಮತ್ತೆ ಇದೇ ಮನೆಗೆ ಆಗಮಿಸಿದ ವ್ಯಕ್ತಿ ಮತ್ತೊಮ್ಮೆ ನೀರು ಕೇಳಿದ್ದಾನೆ. ಈ ವೇಳೆ ಸಾರಮ್ಮ ಅವರೇ ನೀರು ತರಲು ತೆರಳಿದ್ದ ಸಂದರ್ಭ ಏಕಾಏಕಿ ಚಾಕುವಿನಿಂದ ಹಲ್ಲೆ ನಡೆಸಿದರಿಂದ ಗಾಯಗೊಂಡಿದ್ದಾರೆ. ಅತ್ತೆ ಕಿರುಚಿದ ಶಬ್ದ ಕೇಳಿ ಮನೆ ಒಳಗಿನಿಂದ ಬಂದ ಸೊಸೆ ಸಫಾನ ಮೇಲೂ ಹಲ್ಲೆ ನಡೆಸಿ ಸಾರಮ್ಮ ಅವರ ಕುತ್ತಿಗೆಯಲ್ಲಿದ್ದ ಚಿನ್ನದ ಸರವನ್ನು ಕಿತ್ತು ವ್ಯಕ್ತಿ ಪರಾರಿಯಾಗಿದ್ದಾನೆ.

ಸೆರೆ ಹಿಡಿದ ಗ್ರಾಮಸ್ಥರು : ಒಂಟಿ ಮನೆಗೆ ನುಗ್ಗಿ ಮಹಿಳೆಯರ ಮೇಲೆ ಹಲ್ಲೆ ಮಾಡಿ ಚಿನ್ನಾಭರಣ ಕಳವು ಮಾಡಿರುವ ವಿಚಾರ ಕಾಡ್ಗಿಚ್ಚಿನಂತೆ ಗ್ರಾಮದಲ್ಲಿ ಹರಡಿದ ತಕ್ಷಣವೇ ಗ್ರಾಮಸ್ಥರು ಹಲ್ಲೆ ನಡೆಸಿ ಪರಾರಿಯಾದ ವ್ಯಕ್ತಿಗಾಗಿ ತೀವ್ರ ಶೋಧ ನಡೆಸಿದ್ದಾರೆ. ಪೊಲೀಸರು ಎಲ್ಲೆಡೆ ನಾಕಾ ಬಂಧಿ ಹಾಕಿ ಆರೋಪಿ ಪತ್ತೆಗೆ ಬಲೆ ಬೀಸಿದ್ದರು. ಈ ನಡುವೆ ಹಾಲಗುಂದ ಬಳಿಯ ತೋಟದ ಬಳಿ ಮಹಿಳೆಯರ ಮೇಲೆ ಹಲ್ಲೆ ಮಾಡಿದ ವ್ಯಕ್ತಿ ಗ್ರಾಮಸ್ಥರಿಗೆ ಸೆರೆ ಸಿಕ್ಕಿದ್ದು, ರೊಚ್ಚಿ ಗೆದ್ದ ಗ್ರಾಮಸ್ಥರು ಆರೋಪಿಗೆ ಧರ್ಮದೇಟು ನೀಡಿ ಬಳಿಕ ಪೊಲೀಸರಿಗೆ ಒಪ್ಪಿಸಿದ್ದಾರೆ.

ಆಸ್ಪತ್ರೆಗೆ ದಾಖಲು : ವ್ಯಕ್ತಿಯಿಂದ ತೀವ್ರ ಹಲ್ಲೆಗೆ ಒಳಗಾದ ಸಾರಮ್ಮ ಮತ್ತು ಸಫಾನ ಅವರನ್ನು ಜಿಲ್ಲಾಸ್ಪತ್ರೆಗೆ ದಾಖಲಿ ಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದು, ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಮಹಿಳೆಯರ ಮೇಲೆ ಹಲ್ಲೆ ನಡೆಸಿದ ಆರೋಪಿ ಮುನಾವರ್ ಎಂಬಾತನನ್ನು ಕೂಡು ಪೊಲೀಸರು ಭದ್ರತೆಯಲ್ಲಿ ಜಿಲ್ಲಾಸ್ಪತ್ರೆಗೆ ಕರೆತಂದು ಚಿಕಿತ್ಸೆಗೆ ದಾಖಲಿಸಿದ್ದಾರೆ. ಜಿಲ್ಲಾಸ್ಪತ್ರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಭೇಟಿ ನೀಡಿ ಗಾಯಾಳುಗಳ ಆರೋಗ್ಯ ವಿಚಾರಿಸಿ, ಧೈರ್ಯ ತುಂಬಿ ಗಾಯಾಳುಗಳ ಸ್ಥಿತಿಗತಿಯ ಬಗ್ಗೆಯೂ ವೈದ್ಯರಿಂದ ಮಾಹಿತಿ ಪಡೆದರು. ಆರೋಪಿ ವಿರುದ್ಧ ಶಿಸ್ತು ಕಾನೂನು ಕ್ರಮ ಕೈಗೊಂಡು ಕಠಿಣ ಶಿಕ್ಷೆ ವಿಧಿಸಲು ಕೂಡ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು. ಈ ಘಟನೆ ಕುರಿತು ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಹಶೀಲ್ದಾರರಾಗಿ ಶ್ರೀಧರ

ಮಡಿಕೇರಿ: ತಾಲೂಕು ನೂತನ ತಹಶೀಲ್ದಾರರಾಗಿ ಶ್ರೀಧರ ಅಧಿಕಾರ ವಹಿಸಿಕೊಂಡಿದ್ದಾರೆ.

ಈ ಹಿಂದೆ ಎಚ್.ಡಿ.ಕೋಟೆ ತಾಲೂಕಿನಲ್ಲಿ ಗ್ರೇಡ್–2 ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಕಣಿಯರ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ



ಕಣಿಯರು ಜ್ಯೋತಿಷ್ಯ ಸಮುದಾಯ ಸ್ಮರಣ ಸಂಚಿಕೆಯನ್ನು ಮೇಲುಕೋಟೆಯ ಶ್ರೀ ಯತಿರಾಜದಾಸರ್ ಬಿಡುಗಡೆ ಮಾಡಿದರು

ವಿರಾಜಪೇಟೆ: ಭಾರತ ಖಂಡವು ವಿವಿಧತೆಯಲ್ಲಿ ಏಕತೆ ಸಾರುವ ದೇಶ. ಬಹು ಸಂಸ್ಕೃತಿಗಳನ್ನು ಆಚರಿಸುತ್ತಾ ಪರೋಪಕಾರಿ ಕಾರ್ಯಗಳನ್ನು ನಿರ್ವಹಿಸುತ್ತಾ ಸರ್ವರ ಕಷ್ಟಗಳಿಗೆ ಸ್ಪಂದಿಸುವ ಗುಣಗಳಿಂದ ನಾವು ಪ್ರಖ್ಯಾತರಾಗಿದ್ದೇವೆ. ನಮಗೆ ಬಳುವಳಿಯಾಗಿ ಬಂದಿರುವ ಕಲೆಯನ್ನು ಉಳಿಸಬೇಕು ಎಂದು ಮೇಲುಕೋಟೆಯ ಶ್ರೀ ಯತಿರಾಜದಾಸರು ಗುರುಪೀಠ ಗೃಹಸ್ಥ ಪೀಠಾಧಿಪತಿಗಳಾದ ಶ್ರೀನಿವಾಸ ನರಸಿಂಹ ಗುರೂಜಿ ಅಭಿಪ್ರಾಯ ವ್ಯಕ್ತಪಡಿಸಿದರು.

ಬಿ.ಸಿ.ರಂಗಪ್ಪ ವಿದ್ಯಾನಿಧಿ ಟ್ರಸ್ಟ್ ಬೆಂಗಳೂರು, ಶ್ರೀ ಯತಿರಾಜದಾಸರ್ ಗುರುಪೀಠ ಮೇಲುಕೋಟೆ ಮತ್ತು ಕೊಡಗು ಕಣಿಯರ ವಿದ್ಯಾಭಿವೃದ್ಧಿ ಸಂಘ ಸಂಯುಕ್ತ ಆಶ್ರಯದಲ್ಲಿ ವಿರಾಜಪೇಟೆ ಬಿಟ್ಟಂಗಾಲ ಹೆಗ್ಗಡೆ ಸಮಾಜದ ಸಭಾಂಗಣದಲ್ಲಿ ರಾಜ್ಯ ಕಣಿಯರ ಜನಾಂಗದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಪ್ರತಿಭಾ ಪುರಸ್ಕಾರ ಮತ್ತು ಸಾಧಕರನ್ನು ಸನ್ಮಾನಿಸಿ ಕೊಡಗಿನ ಆರಾಧ್ಯ ಇಗ್ಗುತಪ್ಪ ದೇಗುಲದಲ್ಲಿ ಹುತ್ತರಿ ಮತ್ತು ಕೈಲ್ ಮುಹೂರ್ತ ನಿಗದಿಪಡಿಸುವ ಕಣಿಯರು ದೈವಸಂಭೂತರು ಎನಿಸಿಕೊಂಡಿರುವುದು ಜನಾಂಗಕ್ಕೆ ದೊರೆತಿರುವ ಮನ್ನಣೆಯಾಗಿದೆ. ರಾಜ್ಯ ಸರ್ಕಾರವು ಇತರ ಜನಾಂಗಕ್ಕೆ ನೀಡುವ ಸೌಲಭ್ಯಗಳನ್ನು ಕಣಿಯರ ಜನಾಂಗಕ್ಕೂ ನೀಡುವಂತೆ ಒತ್ತಾಯ ಮಾಡುತ್ತೇನೆ ಎಂದು ಹೇಳಿದರು.

ಕಣಿಯರ ವಿದ್ಯಾಭಿವೃದ್ಧಿ ಸಂಘದ ಕಾರ್ಯದರ್ಶಿ ಕಣಿಯರ ಜೆ.ಪ್ರಕಾಶ್ ಪ್ರಾಸ್ತಾವಿಕ ಭಾಷಣ ಮಾಡಿದರು. ವೇದಿಕೆಯಲ್ಲಿ ಕಣಿಯರ್ ಜನಾಂಗದ ಗ್ರಾಮೀಣಾ ಭಾಗದ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಹೊಂದಿದ ವಿದ್ಯಾರ್ಥಿಗಳಿಗೆ, ನಗದು, ಪಾರಿತೋಷಕ ನೀಡಿ ಸನ್ಮಾನಿಸಲಾಯಿತು. ಕಣಿಯರು ಜ್ಯೋತಿಷ್ಯ ಸಮುದಾಯ ಸ್ಮರಣ ಸಂಚಿಕೆ ಬಿಡುಗಡೆಗೊಳಿಸಲಾಯಿತು. ನಂತರ ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ಸಮಾಜ ಸೇವೆಯಲ್ಲಿ ಸಿ.ಸಂಜಯ್ ಕುಮಾರ್, ಸಂಗೀತ ಕ್ಷೇತ್ರದಲ್ಲಿ ವಿದ್ವಾನ್ ಆರ್.ಪುರುಷೋತ್ತಮ, ನೃತ್ಯ ಕ್ಷೇತ್ರದಲ್ಲಿ ವಿದ್ವಾನ್ ಯೋಗೇಶ್ ಕುಮಾರ್ ಎಸ್, ವೈದ್ಯಕೀಯ ಕ್ಷೇತ್ರದಲ್ಲಿ ಡಾ.ಗಿರೀಶ್ ಚಂದ್ರ, ಕಿರುತೆರೆಯ ಕಲಾವಿದರಾದ ಕಡುವಚೇರಿರ ಉಮೇಶ್, ನಿವೃತ್ತ ಸೈನಿಕ ಚೋಂಡೆಪಂಡ ಶಂಬು ಪೂಣಚ್ಚ, ಜ್ಯೋತಿಷ್ಯ ಕ್ಷೇತ್ರದಲ್ಲಿ ನಾಗರತ್ನ ಆರ್, ಡಾ. ರವಿಕುಮಾರ್ ಶಶಿಕುಮಾರ್ ಪಂಡಿತ್ ಪಂಡಿತ್ ಶಿಜು ಗುರುಕಳ್ ಪ್ರಭಾಕರ್ ಪಂಡಿತ್ ಅವರನ್ನು ಸನ್ಮಾನಿಸಲಾಯಿತು.

ಜು.26, ಕಾರ್ಗಿಲ್ ವಿಜಯ್ ದಿವಸ್ ವಿನೂತನ ಕಾರ್ಯಕ್ರಮ

ಮಡಿಕೇರಿ: ಕೊಡಗು ಪತ್ರಕರ್ತರ ಸಂಘ ಮತ್ತು ರೋಟರಿ ಮಿಸ್ಟಿಹಿಲ್ಸ್ ಸಂಯುಕ್ತಾಶ್ರಯದಲ್ಲಿ ಜು.26ರಂದು 'ಕಾರ್ಗಿಲ್ ವಿಜಯ್ ದಿವಸ್' ಅಂಗವಾಗಿ ಹುತಾತ್ಮ ಯೋಧರಿಗೆ ದೀಪ ನಮನ, ಪುಷ್ಪ ನಮನ ಮತ್ತು ಗಾನ ನಮನ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಿದ್ದು, ಜಿಲ್ಲೆಯಾದ್ಯಂತ 85 ಸಂಘ ಸಂಸ್ಥೆಗಳು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿವೆ ಎಂದು ಪತ್ರಕರ್ತರ ಸಂಘದ ಅಧ್ಯಕ್ಷ ಅನಿಲ್ ಹೆಚ್.ಟಿ. ಹಾಗೂ ರೋಟರಿ ಮಿಸ್ಟಿಹಿಲ್ಸ್‌ನ ಅಧ್ಯಕ್ಷ ರತ್ನಾಕರ್ ರೈ ತಿಳಿಸಿದ್ದಾರೆ.

ನಗರದ ಗೌಡ ಸಮಾಜದಲ್ಲಿ ಜು.26ರಂದು ಸಂಜೆ 5 ರಿಂದ ರಾತ್ರಿ 8.30 ಗಂಟೆಯವರೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ 26 ವರ್ಷಗಳ ಹಿಂದೆ ಕಾರ್ಗಿಲ್‌ನಲ್ಲಿ ಪಾಕಿಸ್ತಾನದ ಸಂಚಿನ ವಿರುದ್ಧ ವೀರಾವೇಷದಲ್ಲಿ ಹೋರಾಡಿದ ಮತ್ತು ಭಾರತದ ಭೂಭಾಗಗಳನ್ನು ಮರಳಿ ತಾಯ್ನಾಡಿಗೆ ಒಪ್ಪಿಸಿ ಹುತಾತ್ಮರಾದ ಎಲ್ಲಾ ಭಾರತೀಯ ಯೋಧರನ್ನು ಸ್ಮರಿಸಲಾಗುತ್ತದೆ. ಕಾರ್ಗಿಲ್‌ನಲ್ಲಿ ಹುತಾತ್ಮರಾದ 527 ಸೈನಿಕರಿಗೆ ದೀಪ ನಮನ ಸಲ್ಲಿಸಲಾಗುತ್ತದೆ. ಯೋಧರಿಗೆ ಬೆಂಬಲ ಸೂಚಿಸುವ ನಿಟ್ಟಿನಲ್ಲಿ ಗೌರವಾರ್ಪಣೆ ನಡೆಯಲಿದೆ.

ಸುಸಜ್ಜಿತ ಲ್ಯಾಬ್ ನಿರ್ಮಾಣದಿಂದ ರೋಗಿಗಳಿಗೆ ಅನುಕೂಲ: ಎಆರ್‌ಕೆ



ಪಟ್ಟಣದ ತಾಲೂಕು ಆಸ್ಪತ್ರೆಯಲ್ಲಿ ನೂತನ ಲ್ಯಾಬ್ ಕಟ್ಟಡಕ್ಕೆ ಸೋಮವಾರ ಶಾಸಕ ಎ.ಆರ್. ಕೃಷ್ಣಮೂರ್ತಿ ಭೂಮಿಪೂಜೆ ನೆರವೇರಿಸಿದರು.

ಯಳಂದೂರುಜು. 21 (ವಿ.ನಾಗರಾಜು)– ಪಟ್ಟಣದಲ್ಲಿ ಸುಸಜ್ಜಿತ ಲ್ಯಾಬ್ ನಿರ್ಮಾಣದಿಂದ ಬಡ ರೋಗಿಗಳಿಗೆ ಅನುಕೂಲವಾಗಲಿದ್ದು ಇದಕ್ಕಾಗಿ ದುಬಾರಿ ವೆಚ್ಚದಲ್ಲಿ ಖಾಸಗಿ ಲ್ಯಾಬ್‌ಗಳಿಗೆ ಹಣ ನೀಡುವ ಪರಿಸ್ಥಿತಿ ತಪ್ಪಲಿದೆ ಎಂದು ಶಾಸಕ ಎ.ಆರ್. ಕೃಷ್ಣಮೂರ್ತಿ ತಿಳಿಸಿದರು.

ಪಟ್ಟಣದ ತಾಲೂಕು ಆಸ್ಪತ್ರೆಯ ನೂತನ ಲ್ಯಾಬ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿ, ಸರ್ಕಾರಿ ನಿಯಮದಂತೆ ಮೆಡಿಕಲ್ ಕಾಲೇಜು ಇರುವೆಡೆ ಎರಡು ಆಸ್ಪತ್ರೆಗಳು ನಿರ್ಮಾಣ ಮಾಡಲಾಗುತ್ತಿದೆ. ಈಗಾಗಲೇ ಎಡಬೆಟ್ಟದಲ್ಲಿ ಆಸ್ಪತ್ರೆ ಕಟ್ಟಡವಿದೆ. ಜಿಲ್ಲೆಯ ಕೊಳ್ಳೇಗಾಲದಲ್ಲಿ 250 ಹಾಸಿಗೆ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಅನುದಾನ ದೊರಕಿದ್ದು ಈಗಾಗಲೇ 5 ಎಕರೆ ಭೂಮಿಯನ್ನು ಇದಕ್ಕೆ ಮೀಸಲಿಟ್ಟಿದೆ ಎಂದರು.

ಈಗ ನಿರ್ಮಾಣವಾಗಲಿರುವ ಲ್ಯಾಬ್‌ನಲ್ಲಿ ಸಾಂಕ್ರಾಮಿಕ ರೋಗಗಳನ್ನು ಪತ್ತೆ ಮಾಡುವ ರಕ್ತ, ಕಫ, ಮಲ, ಮೂತ್ರ ಸೇರಿದಂತೆ ಇತರೆ ಪರೀಕ್ಷೆಗಳು ನಡೆಯಲಿದೆ. ಹೃದಯ ಸಂಬಂಧಿ ಕಾಯಿಲೆಗಳನ್ನು ಪತ್ತೆ ಮಾಡುವ ರಕ್ತ ಪರೀಕ್ಷೆಗಳು, ಬ್ಲಡ್ ಕಲ್ಚರ್, ಡೆಂಗ್ಯೂ, ಸೇರಿದಂತೆ ಇತರೆ ಜ್ವರ ಪರೀಕ್ಷೆಗಳ ರಕ್ತ ಪರೀಕ್ಷೆಗಳು ಇರಲಿದ್ದು ಇಲ್ಲಿಗೆ ಒಬ್ಬ ಪೆಥಾಲಜಿಸ್ಟ್ ಹಾಗೂ ಅಗತ್ಯವಿದ್ದಲ್ಲಿ ಮೈಕ್ರೋಬಯಾಲಜಿಸ್ಟ್‌ಗಳು ಇರಲಿದ್ದು ತ್ವರಿತವಾಗಿ ರೋಗ ಪತ್ತೆ ಮಾಡಲು ಹಾಗೂ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡಲು ಸಹಕಾರವಾಗಲಿದೆ. ಇದರೊಂದಿಗೆ ಬಡ ರೋಗಿಗಳ ಜೇಬಿಗೂ ಇದು ಹೊರೆಯಾಗುವುದಿಲ್ಲ, 41 ಲಕ್ಷ ರೂ. ವೆಚ್ಚದಲ್ಲಿ ಈ ಲ್ಯಾಬ್ ತಲೆಎತ್ತಲಿದೆ. ಗುಣಮಟ್ಟದ ಕಾಮಗಾರಿಯನ್ನು ಸಂಬಂಧಪಟ್ಟ ಅಭಿಯಂತರರು ಹಾಗೂ ಗುತ್ತಿಗೆದಾರರು ಮಾಡಬೇಕು ಎಂದು ಕಿವಿಮಾತು ಹೇಳಿದರು.

ಗ್ಯಾರಂಟಿ ಯೋಜನೆ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಜಿ.ಪಂ. ಮಾಜಿ ಉಪಾಧ್ಯಕ್ಷ ಜೆ.ಯೋಗೇಶ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರಂ, ತಾಲೂಕು ವೈದ್ಯಾಧಿಕಾರಿ ಡಾ. ಶ್ರೀಧರ್ ಮಾತನಾಡಿದರು. ಪಪಂ ಅಧ್ಯಕ್ಷೆ ಲಕ್ಷ್ಮಿ ಮಲ್ಲು ಸದಸ್ಯರಾದ ಮಹೇಶ್, ವೈಜಿ. ರಂಗನಾಥ, ನಾಮ ನಿರ್ದೇಶಿತ ಸದಸ್ಯ ಲಿಂಗರಾಜು ಮೂರ್ತಿ, ಮುನವ್ವರ್‌ಬೇಗ್ ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ವೈಜಿ. ಶಿಲ್ಪ, ರೂಪೇಶ್, ರೇವಣ್ಣ ಜೆಇ ಕಲ್ಯಾಣ ಸ್ವಾಮಿ, ಗುತ್ತಿಗೆದಾರ ವಿಕಾಸ್, ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ದುಗ್ಗಹಟ್ಟಿ ಮಹೇಶ್. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಕಾಶ್, ಜಿಲ್ಲಾ ಕಾರ್ಯದರ್ಶಿ ನುಜುಂಡಶೆಟ್ಟಿ ಇದ್ದರು.

ಬಾಲ್ಯವಿವಾಹ ಮುಕ್ತ ಜಿಲ್ಲೆ ಅಭಿಯಾನ: ಪ್ರತಿಜ್ಞಾವಿಧಿ ಸ್ವೀಕಾರ



ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ನಡೆದ ಬಾಲ್ಯವಿವಾಹ ಮುಕ್ತ ಜಿಲ್ಲೆ ಅಭಿಯಾನ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ ಬಾಲ್ಯವಿವಾಹ ಪದ್ದತಿ ತಡೆ ಕುರಿತ ಪ್ರತಿಜ್ಞಾವಿಧಿ ಬೋಧಿಸಿದರು.

ಚಾಮರಾಜನಗರ, ಜು.21–ಸಾಮಾಜಿಕ ಪಿಡುಗಾಗಿ ಪರಿಣಮಿಸಿರುವ ಬಾಲ್ಯ ವಿವಾಹ ಪದ್ಧತಿಯನ್ನು ಪರಿಣಾಮಕಾರಿ ಚಟುವಟಿಕೆಗಳ ಮೂಲಕ ತಡೆಯುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಬಾಲ್ಯವಿವಾಹ ಮುಕ್ತ ಜಿಲ್ಲೆ ಅಭಿಯಾನದ 'ಪ್ರತಿಜ್ಞಾವಿಧಿ ಸ್ವೀಕಾರ' ಕಾರ್ಯಕ್ರಮ ಜಿಲ್ಲೆಯಾದ್ಯಂತ ಇಂದು ಯಶಸ್ವಿಯಾಗಿ ನಡೆಯಿತು.

ಮಕ್ಕಳ ರಕ್ಷಣಾ ನಿರ್ದೇಶನಾಲಯ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ವಿವಿಧ ಇಲಾಖೆಗಳ ಸಹಯೋಗದಲ್ಲಿ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ನಡೆದ ಬಾಲ್ಯವಿವಾಹ ಮುಕ್ತ ಜಿಲ್ಲೆ ಅಭಿಯಾನ ಕಾರ್ಯಕ್ರಮದಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶ ಈಶ್ವರ ಬಾಲ್ಯವಿವಾಹ ಪದ್ದತಿ ತಡೆ ಕುರಿತ ಪ್ರತಿಜ್ಞಾವಿಧಿ ಬೋಧಿಸಿದರು.

ಜಿಲ್ಲೆಯ ಯಾವುದೇ ಭಾಗದಲ್ಲಿ ಒಂದೂ ಬಾಲ್ಯವಿವಾಹವು ಜರುಗದೇ ನವೆಂಬರ್ 14ರೊಳಗೆ ಶೂನ್ಯಕ್ಕೆ ತರುವುದನ್ನು ಗಂಭೀರವಾಗಿ ಪರಿಗಣಿಸುವಂತೆ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಪ್ರತಿ ಗ್ರಾ. ಪಂ. ಗಳಲ್ಲಿ ಏನಾಗುತ್ತಿದೆ ಎಂಬುದು ಅಲ್ಲಿನ ಅಧಿ ಕಾರಿಗಳಿಗೆ, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗೆ ತಿಳಿಯುತ್ತದೆ ಸ್ಥಳೀಯವಾಗಿ ತಡೆಯಲು ಸಾಧ್ಯವಾಗದಿದ್ದರೆ ಜಿಲ್ಲಾಡಳಿತ, ಮಕ್ಕಳ ಸಹಾಯವಾಣಿ, ಕಂಟ್ರೋಲ್ ರೂಂಗೆ ಮಾಹಿತಿ ನೀಡಬೇಕು. ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಎಲ್ಲರೂ ಸೇರಿ ದೃಢ ಸಂಕಲ್ಪ ಮಾಡೋಣ ಎಂದು ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ವೆಂಕಟೇಶ್ ಮಾತನಾಡಿ ಬಾಲ್ಯವಿವಾಹ ತಡೆಗೆ ಇಡೀ ರಾಜ್ಯದಲ್ಲಿಯೇ ಮಾದರಿಯಾಗಿ ಜಿಲ್ಲಾಡಳಿತ ದಿಟ್ಟ ಹೆಜ್ಜೆಯನ್ನಿಟ್ಟಿದೆ. ಇದಕ್ಕೆ ಪೂರಕವಾಗಿ ಜಿಲ್ಲೆಯ ಎಲ್ಲಾ 130 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವ್ಯಾಪಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಜಿಲ್ಲಾ ಪಂಚಾಯತ್ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ. ಈ ಅನಿಷ್ಟ ಪದ್ದತಿ ತಡೆಗೆ ಎಲ್ಲಾ ಅಧಿಕಾರಿಗಳು, ಸಾರ್ವಜನಿಕರು, ಸ್ವಯಂಸೇವಾ ಸಂಸ್ಥೆಗಳು ಒಟ್ಟಾಗಿ ಸೇರಿ ಜಿಲ್ಲಾಡಳಿತಕ್ಕೆ ಶಕ್ತಿ ತುಂಬೋಣ ಎಂದು ವೆಂಕಟೇಶ್ ಅವರು ತಿಳಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಮೋನಾ ರೋತ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಹೆಚ್.ಆರ್. ಸುರೇಶ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಬಿ.ಮಂಜುಳಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಎ. ರಮೇಶ, ಜಿಲ್ಲಾ ಬಾಲನ್ಯಾಯ ಮಂಡಳಿ ಸದಸ್ಯರಾದ ಗಂಗಾಧರ್, ಜಿಲ್ಲಾಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಇದ್ದರು.

ವಾಹನಗಳ ಸುಗಮ ಸಂಚಾರಕ್ಕೆ ರಸ್ತೆಗಳ ಅಭಿವೃದ್ಧಿ



ಪಟ್ಟಣದ ಕನಕದಾಸ ವೃತ್ತದ ಮಡಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಹೆಚ್.ಎಂ.ಗಣೇಶ್‌ಪ್ರಸಾದ್ ಭೂಮಿಪೂಜೆ ನೆರವೇರಿಸಿದರು.

ಗುಂಡ್ಲುಪೇಟೆ, ಜು–21 (ಸೋಮ್.ಜಿ)– ಜನ ಹಾಗೂ ವಾಹನ ಸಂಚಾರಕ್ಕಾಗಿ ರಸ್ತೆಗಳನ್ನು ಉತ್ತಮಗೊಳಿಸಲು 11 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಹೇಳಿದರು.

ಪಟ್ಟಣದ ಕನಕದಾಸ ವೃತ್ತದ ಮಡಹಳ್ಳಿ ರಸ್ತೆಯಲ್ಲಿ 2 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಚರಂಡಿ ನಿರ್ಮಾಣ ಮತ್ತು ರಸ್ತೆ ಅಭಿವೃದ್ಧಿ ಕಾಮ ಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಪಟ್ಟಣದಿಂದ ಬರಗಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಈ ಮುಖ್ಯ ರಸ್ತೆಯು ಹಲವು ವರ್ಷಗಳಿಂದ ಜನ ಹಾಗೂ ವಾಹನ ಸಂಚಾರಕ್ಕೆ ಮಳೆ ನೀರು ನಿಂತು ಅನಾನುಕೂಲವಾಗುತ್ತಿತ್ತು. ಈ ಭಾಗದಲ್ಲಿ ಶಾಲಾ–ಕಾಲೇಜು, ಸರ್ಕಾರಿ ಕಚೇರಿಗಳು ಮತ್ತು ನ್ಯಾಯಾ ಲಯ ಸಂಕೀರ್ಣ ಇನ್ನಿತರೆ ವಾಣಿಜ್ಯ ಸಂಸ್ಥೆಗಳು ಹೆಚ್ಚಾಗಿರುವ ಕಾರಣ ಎರಡು ಕೋಟಿ ರೂಪಾಯಿಗಳ ಅನುದಾನದಲ್ಲಿ ಉತ್ತಮವಾದ ಡಾಂಬರು ರಸ್ತೆ ಯನ್ನು ನಿರ್ಮಿಸಲು ಉದ್ದೇಶಿಸಲಾಗಿದೆ ಎಂದರು.

ಚಿಕ್ಕಾಟಿ ಸೋಮಹಳ್ಳಿ ರಸ್ತೆಯನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ, ತೆರಕಣಾಂಬಿ ರಾಜ್ಯ ಹೆದ್ದಾರಿ ರಸ್ತೆಯನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಹಾಗೂ ಬಂಡೀಪುರದಿಂದ ಮಂಗಲ ಗ್ರಾಮದ ರಸ್ತೆಯನ್ನು ಮೂರು ಕೋಟಿ ರೂ.ಗಳ ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಇದಲ್ಲದೇ ಮುಂದಿನ ದಿನ ಗಳಲ್ಲಿ ಹಂತ ಹಂತವಾಗಿ ಕ್ಷೇತ್ರದ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗುವುದು ಎಂದರು.

ಪುರಸಭೆ ಅಧ್ಯಕ್ಷ ಮಧುಸೂಧನ್, ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡ ಪ್ರಸಾದ್, ಮುಖಂಡರಾದ ಬಿ.ಕುಮಾರ ಸ್ವಾಮಿ, ಕಾರ್ಗಳ್ಳಿ ಸುರೇಶ್, ಕಣ್ಣಪ್ಪ, ಕಿರಣ್ ಸೇರಿದಂತೆ ವಿವಿಧ ಘಟಕಗಳ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಹಾಜರಿದ್ದರು.

'ಶಕ್ತಿ' ಕಳೆದುಕೊಂಡು ಅರ್ಧ ದಾರಿಯಲ್ಲೇ ನಿಂತ ಕೆಎಸ್‌ಆರ್‌ಟಿಸಿ ಬಸ್



ಕಿಲಗೆರೆ ಗ್ರಾಮದಿಂದ ತೆರಕಣಾಂಬಿಗೆ ಹೋಗುವ ಎತ್ತರ ಪ್ರದೇಶದಲ್ಲಿ ಚಲಿಸಲಾಗದೆ ಅರ್ಧಕ್ಕೆ ನಿಂತಿರುವ ಬಸ್.

ಚಾಮರಾಜನಗರ, ಜು.21–ತಾಲೂಕಿನ ಕಿಲಗೆರೆ ಗ್ರಾಮದಿಂದ ಗುಂಡ್ಲುಪೇಟೆಗೆ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಎತ್ತರ ಪ್ರದೇಶದಲ್ಲಿ ಮುಂದೆ ಹೋಗಲಾಗದೇ ಅರ್ಧ ದಾರಿಯಲ್ಲೇ ನಿಂತ ಘಟನೆ ಸೋಮವಾರ ಬೆಳಗ್ಗೆ ನಡೆಯಿತು.

ತಾಲೂಕಿನ ಚಿರಕನಹಳ್ಳಿ ಗ್ರಾಮಕ್ಕೆ ಬರುವ ಬಸ್ ಅಲ್ಲಿಂದ ಕಿಲಗೆರೆ ಗ್ರಾಮಕ್ಕೆ ಬಂದು ತೆರಕಣಾಂಬಿ ಮಾರ್ಗವಾಗಿ ಗುಂಡ್ಲುಪೇಟೆಗೆ ಹೋಗುತ್ತದೆ. ಈ ಮಾರ್ಗಕ್ಕೆ ಬರುವ ತುಂಬಾ ಹಳೆಯದಾದ ಬಸ್ಸಾಗಿದ್ದು, ಪಿಕಪ್ ಇಲ್ಲದ ಕಾರಣ ಕಿಲಗೆರೆ ಗ್ರಾಮದಿಂದ ತೆರಕಣಾಂಬಿಗೆ ಹೋಗುವ ಎತ್ತರ ಪ್ರದೇಶದಲ್ಲಿ ಅರ್ಧಕ್ಕೆ ನಿಂತಿತು. ಇದರಿಂದಾಗಿ ಪ್ರಯಾಣಿಕರು ಬಸ್ ಇಳಿದು ಕಿ.ಮೀ. ದೂರ ನಡೆದು ನಂತರ ಬಸ್‌ನಲ್ಲಿ ಪ್ರಯಾಣಿಸಿದರು.

ವಿದ್ಯಾರ್ಥಿಗಳಿಗೆ ತೊಂದರೆ: ತುಂಬಾ ಹಳೆಯದಾದ ಹಾಗೂ ರಿಪೇರಿ ಇರುವ ಬಸ್ಸನ್ನು ಈ ಮಾರ್ಗಕ್ಕೆ ಬಿಡುತ್ತಿರುವುದರಿಂದ ಸರಿಯಾದ ಸಮಯಕ್ಕೆ ಬಸ್ ಬರುತ್ತಿಲ್ಲ ಇದರಿಂದಾಗಿ ಶಾಲೆ ಕಾಲೇಜಿಗೆ ಹೋಗಲು ನಮ್ಮ ಮಕ್ಕಳಿಗೆ ತುಂಬಾ ತೊಂದರೆಯಾಗುತ್ತಿದೆ. ಆದ್ದರಿಂದ ಈ ಮಾರ್ಗಕ್ಕೆ ಬದಲಿ ಬಸ್ ಅನ್ನು ನೀಡಬೇಕು. ಇಲ್ಲದಿದ್ದಲ್ಲಿ ಗ್ರಾಮದಲ್ಲಿ ಬಸ್ ಅನ್ನು ತಡೆದು ಪ್ರತಿಭಟನೆಯನ್ನು ನಡೆಸಬೇಕಾಗುತ್ತದೆ ಎಂದು ಪೋಷಕರು ಎಚ್ಚರಿಕೆ ನೀಡಿದರು.

ಶಾರದ ಅಕಾಡೆಮಿ ವತಿಯಿಂದಲೇ ಶಿಕ್ಷಣ ಕೊಡಿಸುವಂತೆ ಆಗ್ರಹಿಸಿ ಪ್ರತಿಭಟನೆ



ಶಾರದಾ ಅಕಾಡೆಮಿ ವತಿಯಿಂದಲೇ ಪಾಠ ಮಾಡಿಸುವಂತೆ ಒತ್ತಾಯಿಸಿ ಪೋಷಕರು ಕೆಲಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದರು.

ಚಾಮರಾಜನಗರ: ಸೇವಾ ಭಾರತಿ ಶಿಕ್ಷಣ ಸಂಸ್ಥೆಯು ಶಾರದಾ ಅಕಾಡೆಮಿ ವತಿಯಿಂದಲೇ ಪಾಠ ಮಾಡಿಸುವಂತೆ ಒತ್ತಾಯಿಸಿ ಪೋಷಕರು ವಿದ್ಯಾರ್ಥಿಗಳೊಂದಿಗೆ ಪ್ರತಿಭಟನೆ ನಡೆಸಿದರು. ಬೆಳಿಗ್ಗೆ ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ಮುಂಭಾಗದಲ್ಲಿ ಪೋಷಕರು, ವಿದ್ಯಾರ್ಥಿಗಳು ಸೇರಿದ್ದರೂ ಕಾಲೇಜು ಒಳಗಡೆ ಬಿಡದೆ ಮಧ್ಯಾಹ್ನ ಪೋಷಕರ ಸಭೆ ಕರೆಯಲಾಗಿದೆ ಎಂದು ಗೇಟ್‌ಗೆ ನೋಟೀಸ್ ಅಂಟಿಸಿದರು. ಇದನ್ನು ನೋಡಿದ ಪೋಷಕರು ಆಕ್ರೋಶಗೊಂಡು ನೀವು ಬೆಳಿಗ್ಗೆ ಪೋಷಕರ ಸಭೆ ಎಂದು ಹೇಳಿದ್ದೀರಿ. ಮಧ್ಯಾಹ್ನ 3:30ರ ವರೆಗೂ ಕಾಯೋಕೆ ಆಗಲ್ಲ ಮಳೆ ಬರುತ್ತದೆ. ದೂರ ಗ್ರಾಮಗಳಿಂದ ಬಂದಿದ್ದೇವೆ ಎಂದು ಗೇಟ್ ಮುಂಭಾಗದಲ್ಲಿ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕಾಗಮಿಸಿದ ಪೊಲೀಸರು ಕಾಲೇಜು ಮುಂಭಾಗದಲ್ಲಿ ಕೂಗಾಟ ಮಾಡುವುದರಿಂದ ಮಕ್ಕಳ ಪಾಠಪ್ರವಚನಕ್ಕೆ ತೊಂದರೆ ಆಗುತ್ತಿದೆ. ಇಲ್ಲಿ ಯಾರು ಗಲಾಟೆ ಮಾಡಬೇಡಿ ಎಂದು ಹೇಳಿದಾಗ ಪ್ರತಿಭಟನಾನಿರತರು ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲ ಕಾಲ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಶಿಲ್ಪಾನಾಗ್ ಅವರಿಗೆ ಮನವಿ ಸಲ್ಲಿಸಿದರು.

ಸಂಬಂಧಪಟ್ಟ ಇಲಾಖೆಗೆ ದೂರು ನೀಡಿದ್ದು ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಶಾರದಾ ಅಕಾಡೆಮಿಯ ಅಧ್ಯಕ್ಷ ಸತೀಶ್ ಅವರ ನೇತೃತ್ವದಲ್ಲಿ ಶಿಕ್ಷಣ ಕೊಡಿಸಲು ಕ್ರಮವಹಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಯಲ್ಲಿ ವಿದ್ಯಾರ್ಥಿಗಳು, ಪೋಷಕರು ಭಾಗವಹಿಸಿದ್ದರು.

ಕೆಂಪನಪಾಳ್ಯ ಸಿದ್ದರಾಜು ನಿಧನ



ಕೊಳ್ಳೇಗಾಲ: ರಾಷ್ಟ್ರೀಯ ದಲಿತ ಮಾನವ ಹಕ್ಕುಗಳ ಆಯೋಗ ರಾಜ್ಯ ಸಂಚಾಲಕರೂ, ತಾಲೂಕಿನ ಕೆಂಪನಪಾಳ್ಯ ಗ್ರಾಮದ ವಾಸಿ ಸಿದ್ದರಾಜು(53) ಅನಾರೋಗ್ಯದಿಂದ ಬೆಳಿಗ್ಗೆ ನಿಧನರಾದರು.


ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮಂಗಳವಾರ ಕೆಂಪನಪಾಳ್ಯ ಗ್ರಾಮದ ಸ್ಮಶಾನದಲ್ಲಿ ಅಂತ್ಯಕ್ರಿಯೆ ಜರುಗಲಿದೆ. ಮಾಜಿ ಸಚಿವ ಎನ್.ಮಹೇಶ್, ಬಿಎಸ್ಪಿ ರಾಜ್ಯಾಧ್ಯಕ್ಷ ಮಾರಸಂದ್ರ ಮುನಿಯಪ್ಪ, ಸಂಸದ ಜಗದೀಶ್ ಶೆಟ್ಟರ್ ಆಪ್ತ ಕಾರ್ಯದರ್ಶಿ ಗಿರೀಶ್ ಬಾಬು ಅಂತಿಮ ದರ್ಶನ ಪಡೆದರು.

ವಾಹನ ಸವಾರರೇ ಎಚ್ಚರ... ಮೈಸೂರಿನ ರಸ್ತೆಗಳಲ್ಲಿ ಭಾರೀ ಗುಂಡಿಗಳಿವೆ!


ಮೈಸೂರಿನ ಬಲ್ಲಾಳ್ ವೃತ್ತದಲ್ಲಿ ಅಪಾಯಕಾರಿ ಹಳ್ಳಕೊಳ್ಳಗಳು


ಕೆಜಿ ಕೊಪ್ಪಲಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿರುವ ಗುಂಡಿ


ಇನ್ನೂ ದುಸ್ಥಿತಿಯಲ್ಲಿರುವ ಅನಿಕೇತನ ರಸ್ತೆ


ದೇವರಾಜ ಮೊಹಲ್ಲಾದ ಕೃಷ್ಣವಿಲಾಸ ರಸ್ತೆಯಲ್ಲಿ ಹೊಂಡ


ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿರುವ ಹಳ್ಳ


ಹುಣಸೂರು–ವಾಲ್ಮೀಕಿ ರಸ್ತೆ ಜಂಕ್ಷನ್‌ನಲ್ಲಿ ಹಳ್ಳಕೊಳ್ಳ


ಇರ್ವಿನ್ ರಸ್ತೆಯ ಗುಂಡಿಗಳು


ಹುಣಸೂರು ರಸ್ತೆ ಕಲಾಮಂದಿರದ ವಸತಿಗೃಹದ ಬಳಿ ಭಾರಿ ಗುಂಡಿ


ಬೋಗಾದಿ ರಸ್ತೆಯಲ್ಲಿ ಮೈಸೂರು ವಿವಿ ಮುಖ್ಯ ದ್ವಾರದ ಸಮೀಪ ಹಳ್ಳ

ಮೈಸೂರು,ಜು.21(ಪಿಎಂ)– ವಾಹನ ಸವಾರರೇ ಎಚ್ಚರ... ವಾಹನ ಚಾಲನೆ ವೇಳೆ ಮೈಯೆಲ್ಲಾ ಕಣ್ಣಾಗಿರಿ... ಇಲ್ಲವಾದಲ್ಲಿ ರಸ್ತೆ ಗುಂಡಿಗಳು ನಿಮಗೆ ಗಂಡಾಂತರ ತಂದೊಡ್ಡ್ಯಾವು!!

ಹೌದು, ಮೈಸೂರು ನಗರದ ಅನೇಕಾನೇಕ ರಸ್ತೆಗಳಲ್ಲಿನ ಗುಂಡಿಗಳು ಸುಗಮ ಸಂಚಾರಕ್ಕೆ ಸವಾಲಾಗಿ ಪರಿಣಮಿಸಿವೆ. ಹೀಗಾಗಿ ವಾಹನ ಸವಾರರು ಜಾಗರೂಕರಾಗಿ ಸಾಗದಿದ್ದರೆ, ಕಂಟಕ ತಪ್ಪಿದ್ದಲ್ಲ. ಮೈಸೂರಿನ ಹೃದಯಭಾಗವೂ ಸೇರಿದಂತೆ ವಿವಿಧೆಡೆ ಬಹುತೇಕ ರಸ್ತೆಗಳಲ್ಲಿ ಗುಂಡಿಗಳು ನಿರ್ಮಾಣವಾಗಿದ್ದು, ವಾಹನ ಸವಾರರು ಎಚ್ಚರ ತಪ್ಪಿದರೆ ಅನಾಹುತಕ್ಕೆ ಸಿಲುಕಬೇಕಾದೀತು.

ಮೈಸೂರಿನ ಅನೇಕಾನೇಕ ರಸ್ತೆಗಳಲ್ಲಿ ಈಗ ಗುಂಡಿಗಳು ಸರ್ವೇ ಸಾಮಾನ್ಯವಾಗಿವೆ. ಹಾಗಾಗಿ ವಾಹನ ಸವಾರರು ಕಿರಿಕಿರಿ ಅನುಭವಿಸುವಂತಾಗಿದೆ. ರಸ್ತೆಯಲ್ಲಿ ಗುಂಡಿಗಳು ನಿರ್ಮಾಣವಾಗುವುದು ಸಾಮಾನ್ಯ ಸಂಗತಿಯೇ. ಆದರೆ ಕಾಲಕಾಲಕ್ಕೆ ಅವುಗಳ ದುರಸ್ತಿಗೊಳಿಸುವುದು ಸ್ಥಳೀಯ ಸಂಸ್ಥೆಗಳ ಜವಾಬ್ದಾರಿ. ಹಾಗಾಗಿ ಮೈಸೂರಿನಲ್ಲಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇರುವಂತೆ ಸೂಕ್ತ ನಿರ್ವಹಣೆ ಮಾಡುವಲ್ಲಿ ಮೈಸೂರು ಮಹಾನಗರ ಪಾಲಿಕೆ ವಿಫಲವಾಗಿದೆ.

ಕಳೆದ ವರ್ಷ ಸಬ್‌ಅರ್ಬನ್ ಬಸ್ ನಿಲ್ದಾಣದ ಎದುರಿನ ಬೆಂಗಳೂರು–ನೀಲಗಿರಿ ರಸ್ತೆ ಗುಂಡಿಗಳಿಂದ ಅಧ್ವಾನವಾಗಿತ್ತು. ಆಗ 'ಮೈಸೂರು ಮಿತ್ರ' ಈ ಸಂಬಂಧ ವರದಿ ಪ್ರಕಟಿಸಿದ ಪರಿಣಾಮ ಒಂದು ಭಾಗದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗಿದೆ. ಮತ್ತೊಂದು ಭಾಗದಲ್ಲಿ ಡಾಂಬರೀಕರಣ ಮಾಡಲಾಗಿದೆ. ಹಾಗಾಗಿ ಈ ಭಾಗದಲ್ಲಿ ಸದ್ಯ ಭಾರಿ ಗುಂಡಿಗಳು ಇಲ್ಲವಾಗಿವೆ. ಆದರೆ ಇಲ್ಲಿಗೆ ಸಮೀಪದ ಇರ್ವಿನ್ ರಸ್ತೆಯಲ್ಲಿ ಅನೇಕ ಗುಂಡಿಗಳು ಹಾಗೆಯೇ ಇದ್ದು, ಸವಾರರು ಅತ್ಯಂತ ಎಚ್ಚರದಿಂದ ವಾಹನ ಚಾಲನೆ ಮಾಡದಿದ್ದರೆ ಇಲ್ಲಿ ಅಪಾಯಕ್ಕೆ ತುತ್ತಾಗುವುದು ಗ್ಯಾರಂಟಿ.

ಇಲ್ಲಿನ ಕಮಾನ್ ಗೇಟ್ ಕಡೆಯಿಂದ ನೆಹರು ವೃತ್ತದತ್ತ ಸಾಗಲು ಹೊರಟರೆ ಮೂರು ಭಯಾನಕ ಹೊಂಡಗಳು ಒಂದಾದ ಮೇಲೆ ಒಂದರಂತೆ ಸವಾರರಿಗೆ ಅಗ್ನಿಪರೀಕ್ಷೆ ಒಡ್ಡಲಿವೆ. ಇದಾದ ಬಳಿಕ ಆಯುರ್ವೇದ ಕಾಲೇಜು ವೃತ್ತದವರೆಗೆ ಈ ಹಿಂದೆ ಇದ್ದ ಅನೇಕ ಗುಂಡಿಗಳಿಗೆ ಡಾಂಬರೀಕರಣ ಮಾಡಿ ದುರಸ್ತಿಗೊಳಿಸಲಾಗಿದೆ. ಇದೇ ರೀತಿಯ ದುರಸ್ತಿ ಕ್ರಮವನ್ನು ಇಲ್ಲಿನ ಉಳಿದ ಹೊಂಡಗಳಿಗೂ ವಹಿಸದೇ ಇರುವುದು ಏಕೆಂದು ಮಾತ್ರ ಅರ್ಥವಾಗದು.

ವೃತ್ತದಲ್ಲಿ ಗುಂಡಿ ತೆಗೆದು ಅಧ್ವಾನ: ಬಲ್ಲಾಳ್ ವೃತ್ತದಲ್ಲಿ (ಅಶೋಕ ವೃತ್ತ) ಯಾವುದೋ ಕಾಮಗಾರಿಗಾಗಿ ಗುಂಡಿ ತೆಗೆದು ಬಳಿಕ ಸೂಕ್ತ ರೀತಿಯಲ್ಲಿ ಮುಚ್ಚದ ಪರಿಣಾಮ ಹೊಂಡಗಳು ನಿರ್ಮಾಣವಾಗಿವೆ. ಗುಂಡಿ ತೆಗೆದಿದ್ದ ಜಾಗದಲ್ಲಿ ಡಾಂಬರೀಕರಣ ಮಾಡುವುದಿರಲಿ, ಸಮತಟ್ಟಾಗಿ ಮಣ್ಣು ಸಹ ಮುಚ್ಚಿಲ್ಲ. ಇದರ ಪರಿಣಾಮ ಉಂಟಾಗಿರುವ ಗುಂಡಿಗಳಲ್ಲಿ ಮಳೆ ನೀರು ನಿಂತು ಕೆಸರು ಗದ್ದೆಯಂತಾಗಿದ್ದು, ಸವಾರರು ಜಾಗರೂಕರಾಗಿ ಸಾಗದಿದ್ದರೆ, ಜಾರಿ ಬೀಳಬೇಕಾದ ಸನ್ನಿವೇಶ ನಿರ್ಮಾಣವಾಗಿದೆ.

ಕೆಜಿ ಕೊಪ್ಪಲಿನ ನ್ಯೂ ಕಾಂತರಾಜ ಅರಸ್ ರಸ್ತೆಯಲ್ಲಿ (ಬಸ್ ನಿಲುಗಡೆ ಸ್ಥಳದ ಬಳಿ) ಭಾರಿ ಪ್ರಮಾಣದಲ್ಲಿ ಡಾಂಬರು ಕಿತ್ತು ಬಂದು ಹೊಂಡ ನಿರ್ಮಾಣವಾಗಿದೆ. ಇದಕ್ಕೆ ಒಂದಿಷ್ಟು ಮಣ್ಣಾದರೂ ಹಾಕಿ ಸಮತಟ್ಟು ಮಾಡಿಲ್ಲ. ಇನ್ನು ಕುವೆಂಪುನಗರದ ಚಿತ್ರಭಾನು ರಸ್ತೆಯಲ್ಲಿಯೂ ಇದೇ ರೀತಿಯ ಗುಂಡಿ ಉಂಟಾಗಿದ್ದು, ಸವಾರರು ಸಾಗಲು ಪರದಾಡಬೇಕಾಗಿದೆ.

ಕೆಸರು ಗದ್ದೆಯಾದ ವೃತ್ತ: ಸರಸ್ವತಿಪುರಂನ ಬೇಕ್ ಪಾಯಿಂಟ್ ಸಿಗ್ನಲ್ ಒಳಗೊಂಡಂತೆ (ವೃತ್ತ) ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿ ಯಾವುದೋ ಕಾಮಗಾರಿಗಾಗಿ ರಸ್ತೆ ಅಗೆದು ಅಧ್ವಾನ ಮಾಡಿದ್ದು, ಆ ನಂತರ ರಸ್ತೆ ದುರಸ್ತಿಗೆ ಕ್ರಮ ವಹಿಸಿಲ್ಲ. ಇದರ ಪರಿಣಾಮ ಸಿಗ್ನಲ್ ಒಳಗೊಂಡಂತೆ ಸಾಹುಕಾರ್ ಚನ್ನಯ್ಯ ರಸ್ತೆಯಲ್ಲಿ ಕೆಸರು ಗದ್ದೆ ಸ್ಥಿತಿ ನಿರ್ಮಾಣವಾಗಿದೆ. ಈ ಹಿನ್ನೆಲೆಯಲ್ಲಿ ಇಲ್ಲಿ ಸಾಗಲು ವಾಹನ ಸವಾರರು ಕಿರಿಕಿರಿ ಅನುಭವಿಸುವಂತಾಗಿದೆ.

ಇಂದಿಗೂ ಅದೇ ದುಸ್ಥಿತಿ: ಕುವೆಂಪುನಗರದ ಅನಿಕೇತನ ರಸ್ತೆಯಲ್ಲಿ ಪೂರ್ಣಚಂದ್ರ ತೇಜಸ್ವಿ ವೃತ್ತದಿಂದ ಗಗನಚುಂಬಿ ಜೋಡಿ ರಸ್ತೆ ಜಂಕ್ಷನ್‌ವರೆಗೆ ಯುಜಿಡಿ ಪೈಪ್‌ಲೈನ್ ಕಾಮಗಾರಿ ಹಿನ್ನೆಲೆಯಲ್ಲಿ ಗುಂಡಿಮಯ ಮಾಡಲಾಗಿದೆ. ಈ ಸಂಬಂಧ ಇದೇ ಜು.3ರಂದು 'ಆಯ ತಪ್ಪಿದರೆ ಗುಂಡಿ ಪಾಲು! ; ಇದು ಪಾಲಿಕೆ ತಂದಿಟ್ಟ ಪಜೀತಿ' ಶೀರ್ಷಿಕೆಯಡಿ 'ಮೈಸೂರು ಮಿತ್ರ' ವಿಶೇಷ ವರದಿ ಪ್ರಕಟಿಸಿ ಪಾಲಿಕೆ ಗಮನ ಸೆಳೆದಿತ್ತು. ಆದಾಗ್ಯೂ ಈವರೆಗೆ ಪಾಲಿಕೆ ಕ್ರಮ ವಹಿಸಿಲ್ಲ. ಸೋಮವಾರ ಸುರಿದ ಮಳೆಗೆ ಇಲ್ಲಿ ಕೆಸರು ಗದ್ದೆಯಂತಹ ಪರಿಸ್ಥಿತಿ ಉಂಟಾಗಿತ್ತು. ಇಂತಹ ದುಸ್ಥಿತಿ ನಡುವೆ ವಾಹನ ಸವಾರರು ಪರದಾಡುತ್ತಿದ್ದ ಸನ್ನಿವೇಶ ಕಂಡುಬಂದಿತು.

ಮೈಸೂರು ವಿವಿ ಮುಖ್ಯದ್ವಾರದ ಸಮೀಪ ಬೋಗಾದಿ ರಸ್ತೆಯಲ್ಲಿ ಡಾಂಬರು ಕಿತ್ತು ಬಂದಿದ್ದು, ಜಲ್ಲಿಕಲ್ಲುಗಳು ಚೆಲ್ಲಾಪಿಲ್ಲಿಯಾಗಿ ಹರಡಿಕೊಂಡಿರುವುದಲ್ಲದೇ, ಹಳ್ಳಗಳು ನಿರ್ಮಾಣವಾಗಿವೆ. ಅಲ್ಲದೆ, ಈ ಜಾಗ ತಗ್ಗು ಇರುವ ಕಾರಣ ಭಾರಿ ಮಳೆ ಬಂದರೆ ಕೆರೆಯಂತೆ ನೀರು ನಿಲ್ಲಲಿದೆ. ಇಂತಹ ಪರಿಸ್ಥಿತಿಯಲ್ಲಿ ಸವಾರರು ಸಾಗುವುದು ಸಾಹಸವೇ ಸರಿ ಎನ್ನುವಂತಾಗಿದೆ.

ದುರಸ್ತಿಗೆ ಮುಂದಾಗದ ಪಾಲಿಕೆ: ವಾಲ್ಮೀಕಿ ರಸ್ತೆಯಿಂದ ಹುಣಸೂರು ರಸ್ತೆಗೆ ಸಂಪರ್ಕ ಕಲ್ಪಿಸುವ ಪರ್ಯಾಯ ರಸ್ತೆ ಹಾಗೂ ಕಲಾಮಂದಿರದ ವಸತಿಗೃಹದ ಬಳಿಯ ಹುಣಸೂರು ರಸ್ತೆಯಲ್ಲಿ ಇರುವ ಅತ್ಯಂತ ಅಪಾಯಕಾರಿಯಾದ ಭಾರಿ ಗುಂಡಿವೊಂದರ ಬಗ್ಗೆ ಜು.8ರಂದು 'ಮೈಸೂರು ಮಿತ್ರ' ಸುದ್ದಿ ಪ್ರಕಟಿಸಿ ಗಮನ ಸೆಳೆದಿತ್ತು. ಆದರೆ ಈಗಲೂ ಅದೇ ದುಸ್ಥಿತಿ ಇದ್ದು, ಸವಾರರು ಇಲ್ಲಿ ಆತಂಕದಲ್ಲಿ ಚಲಿಸುವ ಸನ್ನಿವೇಶ ಮುಂದುವರೆದಿದೆ. ಅದೃಷ್ಟವಶಾತ್ ಯಾವುದೇ ಸಾವು–ನೋವು ಸಂಭವಿಸಿಲ್ಲ. ಇನ್ನಾದರೂ ಪಾಲಿಕೆ ಇತ್ತ ಗಮನಹರಿಸುವುದು ತುರ್ತು ಅಗತ್ಯವಾಗಿದೆ.

ಮೈಸೂರು ನಗರದಲ್ಲಿ ಹುಡುಕುತ್ತಾ ಹೊರಟರೆ ಇನ್ನು ಅನೇಕ ರಸ್ತೆಗಳಲ್ಲಿ ಹಳ್ಳಕೊಳ್ಳಗಳು ಕಂಡು ಬರುವುದರಲ್ಲಿ ಅನುಮಾನವಿಲ್ಲ. ಪಾಲಿಕೆ ಆಗಾಗ್ಗೆ ರಸ್ತೆಗಳನ್ನು ಪರಿಶೀಲಿಸಿ ಗುಂಡಿಗಳನ್ನು ಮುಚ್ಚುವ ಜವಾಬ್ದಾರಿ ನಿರ್ವಹಿಸಲು ಗಂಭೀರ ಕ್ರಮ ಕೈಗೊಳ್ಳುವುದು ಅತ್ಯಗತ್ಯವಾಗಿದೆ.


ಸರಸ್ವತಿಪುರಂ ಬೇಕ್ ಪಾಯಿಂಟ್ ಸಿಗ್ನಲ್‌ನಲ್ಲಿ ಕೆಸರು ಗದ್ದೆಯ ಸ್ಥಿತಿ

ಸರ್ಕಾರದ ಸಾಧನಾ ಸಮಾವೇಶಕ್ಕೆ ಬಂದಿದ್ದ ವ್ಯಕ್ತಿ ದುರಂತ ಸಾವು

ವೈನ್‌ಶಾಪ್‌ನಲ್ಲಿ ಕುಡಿದು ಹೊರಬರುವಾಗ ಬಿದ್ದು ಅನಾಹುತ

ಕ್ರೈಂ ಬಾಕ್ಸ್

ಮೈಸೂರು, ಜು.21– ಮೈಸೂರಿನಲ್ಲಿ ಶನಿವಾರ ನಡೆದ ಕಾಂಗ್ರೆಸ್ ಸರ್ಕಾರದ ಸಾಧನಾ ಸಮಾವೇಶಕ್ಕೆ ಬಂದಿದ್ದ ವ್ಯಕ್ತಿಯೊಬ್ಬ, ವೈನ್‌ಶಾಪ್ ಬಳಿ ಎಡವಿಬಿದ್ದು ಸಾವನ್ನಪ್ಪಿರುವುದು ತಡವಾಗಿ ಬೆಳಕಿಗೆ ಬಂದಿದೆ. ತಿ.ನರಸೀಪುರ ತಾಲೂಕಿನ ತುರುಗನೂರು ಗ್ರಾಮದ ಕುಮಾರ್(39) ಮೃತಪಟ್ಟವರು. ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಶನಿವಾರ ನಡೆದ ಸಾಧನಾ ಸಮಾವೇಶಕ್ಕೆ ಆಗಮಿಸಿದ್ದರು. ಈ ವೇಳೆ ರಾಮಸ್ವಾಮಿ ವೃತ್ತದ ಬಳಿ ಇರುವ ವೈನ್‌ಶಾಪ್‌ನಲ್ಲಿ ಮದ್ಯ ಸೇವಿಸಿ, ಹೊರಗೆ ಬರುವಾಗ ಎಡವಿಬಿದ್ದು ಸಾವನ್ನಪ್ಪಿದರು. ರಾತ್ರಿಯಾದರೂ ಮನೆಗೆ ಬರದಿದ್ದಾಗ ಕುಟುಂಬಸ್ಥರು ಹುಡುಕಾಡುತ್ತಿದ್ದಾಗ ವಿಷಯ ಗೊತ್ತಾಗಿದೆ. ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ವೈದ್ಯಕೀಯ ಪರೀಕ್ಷೆ ಬಳಿಕ ಕುಮಾರ್ ದೇಹವನ್ನು ವಾರಸುದಾರರಿಗೆ ಒಪ್ಪಿಸಿದ ಲಕ್ಷ್ಮೀಪುರಂ ಠಾಣೆ ಪೊಲೀಸರು, ಈ ಸಂಬಂಧ ಯುಡಿಆರ್ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಸ್ ಡಿಕ್ಕಿ; ಆಟೋ ಪಲ್ಟಿಯಾಗಿ ಚಾಲಕನಿಗೆ ಗಂಭೀರ ಗಾಯ

ಮೈಸೂರು, ಜು.21– ಬಸ್ ಡಿಕ್ಕಿಯಾದ ಪರಿಣಾಮ ಆಟೋ ಪಲ್ಟಿಯಾಗಿ ಚಾಲಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರು–ಹುಣಸೂರು ರಸ್ತೆಯಲ್ಲಿ ನಡೆದಿದೆ. ಹಿನಕಲ್ ನಿವಾಸಿ ಎ.ಶರತ್(40) ಅಪಘಾತದಲ್ಲಿ ಗಾಯಗೊಂಡಿರುವ ಆಟೋ ಚಾಲಕ. ಇವರು ಜು.18ರಂದು ಮಧ್ಯಾಹ್ನ ತಮ್ಮ ಆಟೋ(ಕೆಎ–09, ಎಎ–8263)ದಲ್ಲಿ ಹುಣಸೂರು ರಸ್ತೆ ಪ್ರೀಮಿಯರ್ ಸ್ಟುಡಿಯೋ ಬಳಿ ಹೋಗುವಾಗ ಮುಂದೆ ಸಾಗುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಚಾಲಕ ಏಕಾಏಕಿ ಎಡಕ್ಕೆ ತಿರುಗಿಸಿದ್ದಾರೆ. ಈ ವೇಳೆ ಡಿಕ್ಕಿಯಾಗಿ ಆಟೋ ಪಲ್ಟಿಯಾಗಿದೆ. ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿರುವ ಚಾಲಕ ಶರತ್‌ಗೆ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಸಂಬಂಧ ವಿವಿ ಪುರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ಆಸ್ಪತ್ರೆಗೆ ದಾಖಲು



ಚೆನ್ನೈ: ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರು ಸೋಮವಾರ (ಜು.21) ಆಸ್ಪತ್ರೆಗೆ ದಾಖಲಾಗಿದ್ದಾರೆ.

ಎಂದಿನಂತೆ ಬೆಳಿಗ್ಗೆ ವಾಕಿಂಗ್ ಹೋಗುವ ವೇಳೆ ತಲೆಸುತ್ತು ಬಂದಿದ್ದು ಬಳಿಕ ಅವರನ್ನು ಚೆನ್ನೈನ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದು ಆಸ್ಪತ್ರೆ ವೈದ್ಯರು ವೈದ್ಯಕೀಯ ತಪಾಸಣೆ ನಡೆಸುತ್ತಿದ್ದಾರೆ.

ಸ್ಟಾಲಿನ್ ದಿನನಿತ್ಯ ಬೆಳಗ್ಗೆ ವಾಕಿಂಗ್ ಮಾಡುತ್ತಿದ್ದು ಅದರಂತೆ ಸೋಮವಾರ ವಾಕಿಂಗ್ ಹೋಗುತ್ತಿದ್ದ ಸಂದರ್ಭ ಅವರಿಗೆ ತಲೆಸುತ್ತು ಬಂದಿದೆ ಕೂಡಲೇ ಅಧಿಕಾರಿಗಳು ಅವರನ್ನು ಚೆನ್ನೈನಲ್ಲಿರುವ ಅಪೋಲೋ ಆಸ್ಪತ್ರೆಗೆ ದಾಖಲಿಸಲಾಗಿದೆ ವೈದ್ಯರು ಮುಖ್ಯಮಂತ್ರಿಗಳ ಆರೋಗ್ಯ ತಪಾಸಣೆ ನಡೆಸುತ್ತಿದ್ದು ಈ ಕುರಿತು ಆಸ್ಪತ್ರೆಗೆ ಪತ್ರಿಕಾ ಪ್ರಕಟಣೆಯನ್ನೂ ಹೊರಡಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಜು.21– ಜುಲೈ 22 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿಜಯನಗರ 4ನೇ ಹಂತ ವಿದ್ಯುತ್ ಮಾರ್ಗದ ನಿರ್ವಹಣಾ ಕೆಲಸದ ನಿಮಿತ್ತ ವಿಜಯನಗರ 4ನೇ ಹಂತ, ಎನ್‌ಪಿಎಸ್ ಶಾಲೆಯ ಹಿಂಭಾಗ ಮತ್ತು ಮುಂಭಾಗ, ಕೆ.ಎಸ್.ಆರ್.ಟಿ.ಸಿ ಬಸ್ ಡಿಪೋ ಸುತ್ತಮುತ್ತ, 80 ಅಡಿ ರಸ್ತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಏರ್ ಇಂಡಿಯಾ ವಿಮಾನ ಪತನ ಬೆನ್ನಲ್ಲೇ ಮತ್ತೊಂದು ಘೋರ ದುರ್ಘಟನೆ

ಢಾಕಾದ ಕಾಲೇಜು ಮೇಲೆ ಬಿತ್ತು ಚೀನಾ ಯುದ್ಧ ವಿಮಾನ; 19 ಮಂದಿ ಸಜೀವ ದಹನ



ಢಾಕಾ, ಜು.21– ಬಾಂಗ್ಲಾದೇಶ ವಾಯುಪಡೆಯ ತರಬೇತಿ ಜೆಟ್, ಕಾಲೇಜಿಗೆ ಅಪ್ಪಳಿಸಿದ ಪರಿಣಾಮ 19 ಮಂದಿ ಸಾವನ್ನಪ್ಪಿದ್ದಾರೆ. ರಾಜಧಾನಿ ಢಾಕಾದಲ್ಲಿ ಚೀನಾ ನಿರ್ಮಿತ F-7 BGI ವಿಮಾನ ಇಂದು ಮಧ್ಯಾಹ್ನ 1.06ಕ್ಕೆ ಟೇಕ್ ಆಫ್ ಆದ ಸ್ವಲ್ಪ ಸಮಯದಲ್ಲೇ ಅಪಘಾತಕ್ಕೀಡಾಗಿದೆ ಎಂದು ವರದಿಯಾಗಿದೆ.

ವಿಮಾನವು ಮೈಲ್‌ಸ್ಟೋನ್ ಕಾಲೇಜಿನ ಕ್ಯಾಂಟೀನ್‌ನ ಚಾವಣಿಯ ಮೇಲೆ ಬಿದ್ದಿದೆ. ಈ ಕಟ್ಟಡವನ್ನು ಪ್ಲೇಗ್ರೂಪ್ ತರಗತಿಗಳಿಗೆ ಬಳಸಲಾಗುತ್ತಿತ್ತು. ವಿಮಾನ ಪತನದಲ್ಲಿ 19 ಮಂದಿ ಸಾವನ್ನಪ್ಪಿದ್ದು, 100ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಈ ಪೈಕಿ ಹಲವರ ಪರಿಸ್ಥಿತಿ ಗಂಭೀರವಾಗಿದ್ದು ಸಾವು ನೋವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಢಾಕಾ ಮೆಟ್ರೋಪಾಲಿಟನ್ ಉತ್ತರ ವಿಭಾಗದ ಉಪ ಆಯುಕ್ತ ಮೊಹಿದುಲ್ ಇಸ್ಲಾಂ, ಅಪಘಾತದ ಬಗ್ಗೆ ಮಾಹಿತಿ ನೀಡಿದ್ದು ವಾಯುಪಡೆಯ ತರಬೇತಿ ವಿಮಾನ ಅಪಘಾತಕ್ಕೀಡಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಎಂದಿದ್ದಾರೆ.

ಬಾಂಗ್ಲಾದೇಶ ರಾಜಧಾನಿಯಲ್ಲಿ ಅಪಘಾತಕ್ಕೀಡಾದ F-7 BGI ಚೀನಾದಲ್ಲಿ ತಯಾರಾದ ಬಹು–ಪಾತ್ರದ ಯುದ್ಧ ವಿಮಾನವಾಗಿದೆ. ಇದು ಬಾಂಗ್ಲಾದೇಶ ವಾಯುಪಡೆಗಾಗಿ ವಿಶೇಷವಾಗಿ ವಿನ್ಯಾಸಗೊಳಿಸಲಾದ F-7 (MiG-21 ರ ರೂಪಾಂತರ)ನ ಸುಧಾರಿತ ಆವೃತ್ತಿಯಾಗಿದೆ. ಇದನ್ನು F-7 ಸರಣಿಯ ಅತ್ಯಂತ ಮುಂದುವರಿದ ಆವೃತ್ತಿ ಎಂದು ಪರಿಗಣಿಸಲಾಗಿದೆ. ಬಾಂಗ್ಲಾದೇಶದಲ್ಲಿನ ಈ ಅಪಘಾತವು ಈ ಚೀನೀ ಮೂಲದ ವಿಮಾನದ ವಿಶ್ವಾಸಾರ್ಹತೆಗೆ ದೊಡ್ಡ ಹೊಡೆತವಾಗಿದೆ.

ತಿರುಪತಿ–ಹೈದರಾಬಾದ್ ಇಂಡಿಗೋ ವಿಮಾನದಲ್ಲಿ ತಾಂತ್ರಿಕ ದೋಷ: 40 ನಿಮಿಷ ಆಗಸದಲ್ಲೇ ಗಿರಕಿ ಹೊಡೆದ ನಂತರ ಸುರಕ್ಷಿತ ಲ್ಯಾಂಡಿಂಗ್

ಹೈದರಾಬಾದ್, ಜು.21– ತಿರುಪತಿಯಿಂದ ಹೈದರಾಬಾದ್‌ಗೆ ಹೋಗುತ್ತಿದ್ದ ಇಂಡಿಗೋ ವಿಮಾನದಲ್ಲಿ ದಿಢೀರ್ ತಾಂತ್ರಿಕ ದೋಷ ಕಾರಣ ಸುಮಾರು 40 ನಿಮಿಷಗಳ ಕಾಲ ಆಕಾಶದಲ್ಲೇ ಗಿರಕಿ ಹೊಡೆದಿದ್ದು, ಈ ಬೆಳವಣಿಗೆ ಜನರಲ್ಲಿ ಆತಂಕ ಮೂಡಿಸಿತ್ತು.

ಏರ್‌ಬಸ್ A321neo ವಿಮಾನ ಭಾನುವಾರ ಸಂಜೆ 7.42ರ ಸುಮಾರಿಗೆ ತಿರುಪತಿ ವಿಮಾನ ನಿಲ್ದಾಣದಿಂದ ಹೊರಟಿತ್ತು. ಈ ವೇಳೆ, ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಬಳಿಕ 40 ನಿಮಿಷಗಳ ಕಾಲ ವಿಮಾನ ಆಕಾಶದಲ್ಲೇ ಸುತ್ತಾಡಿ, ರಾತ್ರಿ 8.34ರ ಸುಮಾರಿಗೆ ತಿರುಪತಿ ವಿಮಾನ ನಿಲ್ದಾಣದಲ್ಲಿ ಸುರಕ್ಷಿತವಾಗಿ ಲ್ಯಾಂಡ್ ಆಗಿದೆ ಎಂದು ಏರ್ ಟ್ರಾಫಿಕ್ ಟ್ರ್ಯಾಕಿಂಗ್ ವೆಬ್‌ಸೈಟ್ Flightradar24 ತಿಳಿಸಿದೆ.

ಇದರ ಪರಿಣಾಮ ಹೈದರಾಬಾದ್‌ಗೆ ನಿಗದಿಪಡಿಸಲಾದ ಕೊನೆಯ ವಿಮಾನವನ್ನು ರದ್ದುಗೊಳಿಸಲಾಗಿದೆ. ಇದರಿಂದ ಆಕ್ರೋಶಗೊಂಡ ಪ್ರಯಾಣಿಕರು ಸಿಬ್ಬಂದಿಗಳೊಂದಿಗೆ ವಾಗ್ವಾದ ನಡೆಸಿದ್ದಾರೆ. ಈ ಕುರಿತು ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಘಟನೆಯ ಕುರಿತು ವಿಮಾನಯಾನ ಸಂಸ್ಥೆ ಇದೂವರೆಗೆ ಯಾವುದೇ ಅಧಿಕೃತ ಹೇಳಿಕೆ ಬಿಡುಗಡೆ ಮಾಡಿಲ್ಲ.

ಮುಂಬೈನ ರನ್‌ವೇಯಿಂದ ಜಾರಿದ ಏರ್ ಇಂಡಿಯಾ ವಿಮಾನ

ಮುಂಬೈ, ಜು.21– ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೊಚ್ಚಿಯಿಂದ ಮುಂಬೈಗೆ ಬಂದ ಏರ್ ಇಂಡಿಯಾ ವಿಮಾನ AI 2744 A320(VT-TYA) ಸೋಮವಾರ ಬೆಳಗ್ಗೆ ಭಾರಿ ಮಳೆಯಿಂದಾಗಿ ಲ್ಯಾಂಡಿಂಗ್ ಸಮಯದಲ್ಲಿ ರನ್‌ವೇಯಿಂದ ಹೊರಗೆ ಜಾರಿದ ಘಟನೆ ನಡೆದಿದೆ. ಅದೃಷ್ಟವಶಾತ್ ಯಾರಿಗೂ ಯಾವುದೇ ಹಾನಿಯಾಗಿಲ್ಲ.

ವಿಮಾನವು ಗೇಟ್‌ಗೆ ಸುರಕ್ಷಿತವಾಗಿ ತಲುಪಿದೆ. ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಯಾವುದೇ ಗಾಯಗಳಿಲ್ಲದೆ ಇಳಿದರು. ವಿಮಾನವನ್ನು ತಾಂತ್ರಿಕ ಮೌಲ್ಯಮಾಪನಕ್ಕಾಗಿ ಒಳಪಡಿಸಲಾಗಿದೆ. ಡಿಜಿಸಿಎ ತಂಡ ಘಟನೆಯ ಬಗ್ಗೆ ತನಿಖೆ ನಡೆಸುತ್ತಿದೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಜುಲೈ 21ರಂದು ಕೊಚ್ಚಿಯಿಂದ ಮುಂಬೈಗೆ ಬಂದ ವಿಮಾನ AI2744 ಲ್ಯಾಂಡಿಂಗ್ ಸಮಯದಲ್ಲಿ ಭಾರಿ ಮಳೆಯಿಂದ ಲ್ಯಾಂಡಿಂಗ್ ನಂತರ ರನ್‌ವೇ ಜಾರಿತು. ಆದರೂ ವಿಮಾನವು ಸುರಕ್ಷಿತವಾಗಿ ಗೇಟ್‌ಗೆ ತಲುಪಿತು ಮತ್ತು ಎಲ್ಲಾ ಪ್ರಯಾಣಿಕರು ಮತ್ತು ಸಿಬ್ಬಂದಿ ಸುರಕ್ಷಿತವಾಗಿ ಇಳಿದಿದ್ದಾರೆ ಎಂದು ಏರ್ ಇಂಡಿಯಾ ವಕ್ತಾರರು ತಿಳಿಸಿದ್ದಾರೆ. ತೊಂದರೆಗೊಳಗಾದ ಪ್ರಯಾಣಿಕರಿಗೆ ಪರ್ಯಾಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ ಎಂದು ಏರ್ ಇಂಡಿಯಾ ತಿಳಿಸಿದೆ. ವಿಮಾನವನ್ನು ತಪಾಸಣೆಗಾಗಿ ಸ್ಥಗಿತಗೊಳಿಸಲಾಗಿದೆ. ಪ್ರಯಾಣಿಕರು ಮತ್ತು ಸಿಬ್ಬಂದಿಯ ಸುರಕ್ಷತೆ ನಮ್ಮ ಪ್ರಮುಖ ಆದ್ಯತೆಯಾಗಿ ಉಳಿದಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಜಿಲ್ಲಾ ಕಸಾಪ, ಕನ್ನಡ ಚಳುವಳಿ ಕೇಂದ್ರ ಸಮಿತಿಯಿಂದ ಕೆಬಿಜಿಯವರಿಗೆ ಶ್ರದ್ಧಾಂಜಲಿ

ಮೈಸೂರು, ಜು.21(ಜಿಎ)–ಇತ್ತೀಚೆಗೆ ನಿಧನರಾದ 'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕನ್ನಡ ಚಳವಳಿ ಕೇಂದ್ರ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ಸಮಾಜ ಸೇವಕಿ ಪುಷ್ಪಾ ಅಯ್ಯಂಗಾರ್, ವಕೀಲ ಶಿವಪ್ರಕಾಶ್, 'ಮೈಸೂರು ಮಿತ್ರ' ಅಂಕಣಕಾರ ತ್ರಿಪುರಾಂತಕ ಅವರು ಕೆಬಿಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ನಮಿಸಿದರು.

ನಂತರ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ನಾನು 2008ರಲ್ಲಿ ಮೊದಲ ಬಾರಿಗೆ ಪರಿಷತ್ತಿನ ಅಧ್ಯಕ್ಷನಾಗಿ ಆಯ್ಕೆಗೊಂಡಾಗ ಕೆಬಿಜಿ ಅವರು ಕಚೇರಿಗೆ ಕರೆಸಿಕೊಂಡು ಸಾಕಷ್ಟು ಸಲಹೆ ನೀಡಿದರು. ಕಾರ್ಯಕ್ರಮಗಳಲ್ಲಿ ಅತಿಥಿಗಳಿಗೆ ಪುಸ್ತಕಗಳನ್ನು ನೀಡುವಂತೆ ಸಂದೇಶ ನೀಡಿದರು. ಇಂದಿಗೂ ನಾನು ಯಾವುದೇ ಕಾರ್ಯಕ್ರಮ ನಡೆಸಿದರೂ ಪುಸ್ತಕಗಳನ್ನು ನೀಡುವುದನ್ನು ರೂಢಿಸಿಕೊಂಡಿದ್ದೇನೆ ಎಂದರು.

ಸಮಾಜ ಸೇವಕಿ ಪುಷ್ಪಾ ಅಯ್ಯಂಗಾರ್ ಮಾತನಾಡಿ, ಕೆಬಿಜಿ ಅವರು ಸರಸ್ವತಿಪುರಂನಲ್ಲಿ ಕಚೇರಿ ಆರಂಭಿಸಿದ್ದಾಗ ಮೊದಲ ಬಾರಿ ಭೇಟಿ ಮಾಡಿ


ಇತ್ತೀಚೆಗೆ ನಿಧನರಾದ 'ಮೈಸೂರು ಮಿತ್ರ' ಹಾಗೂ ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮತ್ತು ಕನ್ನಡ ಚಳುವಳಿ ಕೇಂದ್ರ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

'ಸ್ಟಾರ್ ಆಫ್ ಮೈಸೂರ್' ಮನೆಗೆ ಕಳುಹಿಸುವಂತೆ ಕೇಳಿಕೊಂಡಿದ್ದೆ. ಅನೇಕ ಕಾರ್ಯಕ್ರಮದಲ್ಲಿ ಅವರನ್ನು ಭೇಟಿಯಾಗಿದ್ದೆ. ಒಮ್ಮೆ ನೀವು ನಮ್ಮ ಪತ್ರಿಕೆಗೆ ಅಂಕಣ ಬರೆಯಿರಿ ಎಂದು ತಿಳಿಸಿದ್ದರು. ನಾನು ಆಗ 'ನೀವು ಬರೆದಿರುವ ಅಂಕಣಗಳನ್ನು ಓದುತ್ತೇನೆ ಅಷ್ಟು ಸಾಕು' ಎಂದು ತಿಳಿಸಿದ್ದೆ ಎಂದು ಸ್ಮರಿಸಿದರು.

'ಮೈಸೂರು ಮಿತ್ರ' ಅಂಕಣಕಾರ ತ್ರಿಪುರಾಂತಕ ಮಾತನಾಡಿ, ಬಾಲ್ಯದಿಂದಲೂ ಅಂಕಣಗಳನ್ನು ಬರೆಯಬೇಕು ಎಂಬ ನನ್ನ ಆ ಕನಸನ್ನು ಕೆಬಿಜಿ ಅವರು ನನಸು ಮಾಡಿದ್ದು, ಕಳೆದ 12 ವರ್ಷಗಳಿಂದ ಅಂಕಣಗಳನ್ನು ಬರೆಯುತ್ತಿದ್ದೇನೆ. ನನಗೆ ಅವರೇ ಸ್ಫೂರ್ತಿ. ಮೊದಲು ನಾನು ಬರೆದ ಅಂಕಣ 'ಮೈತ್ರಿ'. ಅದು ನಮ್ಮ ಬಾಂಧವ್ಯವನ್ನು ಗಟ್ಟಿಗೊಳಿಸಿತ್ತು ಎಂದರು.

> ಮೈಸೂರು ಮಹಾನಗರ ಪಾಲಿಕೆಯು ಬನ್ನಿಮಂಟಪದ ಯಾವುದಾದರೂ ಪ್ರಮುಖ ವೃತ್ತಕ್ಕೆ ಡಾ.ಕೆ.ಬಿ.ಗಣಪತಿ ವೃತ್ತ ಎಂದು ನಾಮಕರಣ ಮಾಡಬೇಕು. ಇದರ ಬಗ್ಗೆ ಕೂಡಲೇ ಗಮನಹರಿಸಬೇಕು. ಇಲ್ಲವಾದರೆ, ನಾನೇ ಒಂದು ಪ್ರಮುಖ ವೃತ್ತಕ್ಕೆ ನಾಮಫಲಕ ಅಳವಡಿಸುತ್ತೇನೆ. ಹಾಗೆಯೇ ಅನಧಿಕೃತ ವೃತ್ತಗಳಿಗೆ ಮಸಿ ಬಳಿಯುತ್ತೇನೆ.
> - ಮೂಗೂರು ನಂಜುಂಡಸ್ವಾಮಿ,
> ಅಧ್ಯಕ್ಷ, ಕನ್ನಡ ಚಳುವಳಿ ಕೇಂದ್ರ ಸಮಿತಿ

ವಕೀಲ ಶಿವಪ್ರಕಾಶ್ ಮಾತನಾಡಿ, ವಕೀಲರನ್ನು ಕಂಡರೆ ಕೆಬಿಜಿ ಅವರಿಗೆ ಸಾಕಷ್ಟು ಒಲವು. ಎಲ್ಲಿ ಸಿಕ್ಕರೂ ಮಾತನಾಡಿಸಿ, ಆತ್ಮಸ್ಥೈರ್ಯವನ್ನು ತುಂಬುತ್ತಿದ್ದರು. 2018ರ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ವರುಣ ಕ್ಷೇತ್ರಕ್ಕೆ ಭೇಟಿ ನೀಡಿ ವರದಿ ಮಾಡಿದರು. ಅವರಲ್ಲಿ ಕೊಡಗು ವೀರನ ಗಟ್ಟಿತನವಿತ್ತು ಎಂದು ಸ್ಮರಿಸಿದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಮಾತನಾಡಿ, 'ಸ್ಟಾರ್ ಆಫ್ ಮೈಸೂರ್' ಮತ್ತು ಆಂದೋಲನ ಪತ್ರಿಕೆಗಳು ನಾನು ಪತ್ರಕರ್ತನಾಗಲು ಪ್ರೇರಣೆ ನೀಡಿತ್ತು. 'ಸ್ಟಾರ್ ಆಫ್ ಮೈಸೂರ್' ಇಂಗ್ಲಿಷ್ ಜ್ಞಾನವನ್ನು ನೀಡಿತ್ತು. ಕೆಬಿಜಿ ಅವರು ಮೈಸೂರಿನ ಪಾರಂಪರಿಕ ಪತ್ರಿಕೋದ್ಯಮಕ್ಕೆ ಜನಪ್ರಿಯತೆ ತಂದು ಕೊಟ್ಟು, ಪತ್ರಿಕೋದ್ಯಮದಿಂದ ಜೀವನ ರೂಪಿಸಿಕೊಳ್ಳಬಹುದು ಎಂದು ತೋರಿಸಿಕೊಟ್ಟಿದ್ದಾರೆ ಎಂದರು.

ತಿ.ನರಸೀಪುರ ಪುರಸಭಾ ಸದಸ್ಯನಿಂದಲೇ ನಕಲಿ ಸೀಲ್ ಮೂಲಕ ಲಕ್ಷಾಂತರ ರೂ. ತೆರಿಗೆ ವಂಚನೆ ಆರೋಪ

● ಪುರಸಭಾ ಮುಖ್ಯಾಧಿಕಾರಿಯಿಂದ ಪೊಲೀಸರಲ್ಲಿ ದೂರು ದಾಖಲು ● ಆಸ್ತಿ ಮಾಲೀಕರೊಂದಿಗೆ ಶಾಮೀಲಾಗಿ ನಂಜುಂಡಸ್ವಾಮಿ ವಂಚನೆ

ತಿ.ನರಸೀಪುರ, ಜು.21– ಬ್ಯಾಂಕ್ ಸೀಲ್ ಅನ್ನು ನಕಲು ಮಾಡಿ ತಿ.ನರಸೀಪುರ ಪುರಸಭೆಗೆ 3,43,626 ರೂ. ವಂಚಿಸಿರುವ ಆರೋಪದ ಮೇರೆಗೆ ಹಾಲಿ ಪುರಸಭಾ ಸದಸ್ಯರೂ ಆಗಿರುವ ಮಾಜಿ ಅಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ತಾಲೂಕು ಕುರುಬರ ಸಂಘದ ಅಧ್ಯಕ್ಷರು ಸೇರಿದಂತೆ 10 ಮಂದಿ ವಿರುದ್ಧ ಪುರಸಭಾ ಮುಖ್ಯಾಧಿಕಾರಿಗಳು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.


ಪುರಸಭಾ ಕಾರ್ಯಾಲಯ

ಪುರಸಭಾ ಸದಸ್ಯ ಟಿ.ಎಂ. ನಂಜುಂಡಸ್ವಾಮಿ, ಆಸ್ತಿ ಮಾಲೀಕರಾದ ಲತಾ ಸುರೇಶ್, ಸುಮನ್ ಚೌಧರಿ, ನಟರಾಜು, ಮಹದೇವಮ್ಮ ನೀಲಮ್ಮ ಜಯಮ್ಮ ಎಂ. ನಾಗೇಂದ್ರ, ಲಕ್ಷ್ಮಮ್ಮ, ತಾಲೂಕು ಕುರುಬರ ಸಂಘದ ಅಧ್ಯಕ್ಷರು ಆರೋಪಿಗಳಾಗಿದ್ದು, ಇವರ ವಿರುದ್ಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವರ: ಪುರಸಭೆ ವ್ಯಾಪ್ತಿಯ ಆಸ್ತಿ ಮಾಲೀಕರು ಸ್ವಯಂ ಘೋಷಿತ ಆಸ್ತಿ ತೆರಿಗೆಯಡಿ ಇಲ್ಲಿನ ಕೆನರಾ ಬ್ಯಾಂಕ್ ಶಾಖೆಯಲ್ಲಿ ತೆರಿಗೆ ಪಾವತಿಸಿ, ಅದರ ಚಲನ್ ಅನ್ನು ಪುರಸಭೆಗೆ ನೀಡುತ್ತಾರೆ. ಅದೇ ರೀತಿ ಆಸ್ತಿ ಮಾಲೀಕರು ಇ–ಆಸ್ತಿಗಾಗಿ ಬ್ಯಾಂಕ್‌ನಲ್ಲಿ ಹಣ ಪಾವತಿಸಿ, ಚಲನ್‌ಗಳನ್ನು ಪುರಸಭೆಗೆ ಸಲ್ಲಿಸಿದ್ದರು.

ಆದರೆ, ಕೆನರಾ ಬ್ಯಾಂಕ್ ತಿ.ನರಸೀಪುರ ಶಾಖೆಯಲ್ಲಿರುವ ಪುರಸಭೆಯ ಖಾತೆಗೆ 9 ಆಸ್ತಿದಾರರ ಒಟ್ಟು 3,43,626 ರೂ. ಜಮೆ ಆಗದೇ ಇರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಪುರಸಭೆಯಿಂದ ಬ್ಯಾಂಕ್‌ಗೆ ಪತ್ರ ಬರೆದು, ಪುರಸಭೆ ಖಾತೆಗೆ ಜಮೆ ಆಗಿರುವ ಆಸ್ತಿ ತೆರಿಗೆ ವಿವರಗಳನ್ನು ಕೋರಲಾಗಿತ್ತು. ಅಲ್ಲದೇ, ಪುರಸಭೆಗೆ ಸಲ್ಲಿಕೆಯಾಗಿ ಬ್ಯಾಂಕ್ ಖಾತೆಗೆ ಜಮೆ ಆಗದೇ ಇರುವ 9 ಪಾವತಿಗಳ ಕುರಿತು ಪ್ರತ್ಯೇಕ ವರದಿ ಕೇಳಲಾಗಿತ್ತು.

ಪುರಸಭೆ ಖಾತೆಗೆ ಜಮೆ ಆಗದೇ ಇರುವ ಆಸ್ತಿ ತೆರಿಗೆಗೆ ಸಂಬಂಧಿಸಿದಂತೆ ಪುರಸಭೆಗೆ ಸಲ್ಲಿಸಿದ್ದ ಚಲನ್‌ಗಳಲ್ಲಿ ಮುದ್ರಿಸಲಾಗಿರುವ ಬ್ಯಾಂಕ್‌ನ ಮುದ್ರೆ (ಸೀಲ್) ನಕಲು ಮಾಡಿರುವಂತೆ ಕಂಡುಬರುತ್ತಿದೆ ಎಂದು ಬ್ಯಾಂಕ್‌ನಿಂದ ಪುರಸಭೆಗೆ ಪತ್ರ ಬರೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಪುರಸಭಾ ಮುಖ್ಯಾಧಿಕಾರಿ ಬಿ.ಕೆ. ವಸಂತ ಕುಮಾರಿಯವರು ತಿ.ನರಸೀಪುರ ಠಾಣೆಗೆ ದೂರು ಸಲ್ಲಿಸಿದ್ದು, ಪುರಸಭೆ ಸದಸ್ಯರಾದ ಟಿ.ಎಂ. ನಂಜುಂಡಸ್ವಾಮಿ ಜೊತೆಗೂಡಿ ಆಸ್ತಿ ಮಾಲೀಕರು ಕೆನರಾಬ್ಯಾಂಕ್‌ನ ನಕಲಿ ಮೊಹರ್ ಅನ್ನು ಸೃಷ್ಟಿಸಿಕೊಳ್ಳುವ ಮೂಲಕ ಪುರಸಭೆಗೆ ಒಟ್ಟು 3,43,626 ರೂ.ಗಳನ್ನು ವಂಚಿಸಿದ್ದಾರೆ ಎಂದು ತಿಳಿಸಿದ್ದು, ಕಡತಗಳನ್ನು ಪರಿಶೀಲಿಸಲಾಗುತ್ತಿದ್ದು, ಇಂತಹ ವಂಚನೆ ಪ್ರಕರಣಗಳು ಮತ್ತಷ್ಟು ಪತ್ತೆಯಾದಲ್ಲಿ ಕಾನೂನು ಕ್ರಮಕ್ಕಾಗಿ ದಾಖಲೆಗಳನ್ನು ಸಲ್ಲಿಸಲಾಗುವುದು ಎಂದು ತಿಳಿಸಿದ್ದಾರೆ.

ಪುರಸಭೆಗೆ ಕೆನರಾ ಬ್ಯಾಂಕ್‌ನ ನಕಲಿ ಸೀಲ್ ಬಳಸಿರುವ ಚಲನ್‌ಗಳನ್ನು ಸಲ್ಲಿಸಿ ಸಿಕ್ಕಿಬಿದ್ದಿರುವುದು ತಾಲೂಕು ಕುರುಬರ ಸಂಘದ ಅಧ್ಯಕ್ಷರೂ ಸೇರಿದಂತೆ 9 ಮಂದಿ ಎಂದು ದೂರಿನಲ್ಲಿ ತಿಳಿಸಲಾಗಿದ್ದು, ಇವರೆಲ್ಲರೂ ಪುರಸಭಾ ಸದಸ್ಯ ಟಿ.ಎಂ. ನಂಜುಂಡಸ್ವಾಮಿ ಜೊತೆಗೂಡಿ ವಂಚಿಸಿದ್ದಾರೆ ಎಂದು ಉಲ್ಲೇಖಿಸಲಾಗಿದೆ. ಹೀಗಾಗಿ ನಂಜುಂಡಸ್ವಾಮಿ ಹೆಸರಿನಲ್ಲಿ ಚಲನ್ ಸಲ್ಲಿಕೆಯಾಗದಿದ್ದರೂ ಆಸ್ತಿ ಮಾಲೀಕರು ಇವರ ಜೊತೆಗೂಡಿಯೇ ವಂಚಿಸಿದ್ದಾರೆ ಎಂದು ದೂರಿನಲ್ಲಿ ಪುರ ಸಭಾ ಮುಖ್ಯಾಧಿಕಾರಿಗಳು ತಿಳಿಸಿರುವುದರಿಂದ ಪ್ರಕರಣದಲ್ಲಿ ನಂಜುಂಡಸ್ವಾಮಿಯವರನ್ನು ಮೊದಲನೇ ಆರೋಪಿಯಾಗಿ ಉಲ್ಲೇಖಿಸಲಾಗಿದೆ.

ಎಸ್‌ಡಿಎಂಸಿ ಅಧ್ಯಕ್ಷರ ಆಯ್ಕೆ



ಕಂಪಲಾಪುರ ಸರ್ಕಾರಿ ಪ್ರೌಢಶಾಲೆ ಎಸ್‌ಡಿಎಂಸಿ ನೂತನ ಅಧ್ಯಕ್ಷರಾಗಿ ಕೃಷ್ಣ ಆಯ್ಕೆಯಾಗಿದ್ದಾರೆ. ಈ ವೇಳೆ ಮುಖ್ಯ ಶಿಕ್ಷಕ ಮಹದೇವಯ್ಯ, ಶಿಕ್ಷಕರಾದ ಜಯಪ್ರಕಾಶ್, ಪ್ರಸನ್ನ, ಮಹೇಶ್, ಚಂದ್ರು, ಭಾಗ್ಯಮ್ಮ, ಶಾಲಿನಿ, ಸದಸ್ಯರಾದ ಮಂಜು, ವೀರಭದ್ರ, ಆರ್.ಮಂಜುನಾಥ್, ತಿರುಮಲೇಶ, ಪತ್ರಕರ್ತ ಸದಾಶಿವ ಹಾಜರಿದ್ದರು.

ಕುರುಬರ ಸಂಘದಿಂದಲೂ ನಂಜುಂಡಸ್ವಾಮಿ ವಜಾ


ಸುದ್ದಿಗೋಷ್ಠಿಯಲ್ಲಿ ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಹೇಶ್ ಮಾತನಾಡಿದರು.

ತಿ.ನರಸೀಪುರ, ಜು. 21– ತಾಲೂಕು ಕುರುಬರ ಸಂಘದ ಆಸ್ತಿ ತೆರಿಗೆಯನ್ನು ಪುರಸಭೆಗೆ ಪಾವತಿಸಿದ ವೇಳೆ ಬ್ಯಾಂಕ್‌ನ ನಕಲಿ ಸೀಲ್ ಬಳಸಿ ಹಣ ದುರುಪಯೋಗಪಡಿಸಿಕೊಂಡಿದ್ದಲ್ಲದೇ, ಸಂಘದ ಅಧ್ಯಕ್ಷರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಲು ಕಾರಣರಾಗಿರುವ ಹಿನ್ನೆಲೆಯಲ್ಲಿ ಸಂಘದ ನಿರ್ದೇಶಕರೂ ಆಗಿರುವ ಟಿ.ಎಂ.ನಂಜುಂಡಸ್ವಾಮಿಯವರನ್ನು ಅಜೀವ ಸದಸ್ಯತ್ವ ಹಾಗೂ ನಿರ್ದೇಶಕ ಸ್ಥಾನದಿಂದ ವಜಾ ಮಾಡಲು ತಾಲೂಕು ಕುರುಬರ ಸಂಘದ ತುರ್ತು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಮನ್ನೇಹುಂಡಿ ಮಹೇಶ್, ಸಂಘದ ಆಸ್ತಿಗೆ ತೆರಿಗೆ ಪಾವತಿ ಹಾಗೂ ಇ–ಖಾತೆಗಾಗಿ ಸಂಘದ ನಿರ್ದೇಶಕರಾದ ನಂಜುಂಡಸ್ವಾಮಿಯವರಿಗೆ 2023–24ನೇ ಸಾಲಿಗೆ 1,37,077 ರೂ. ಹಾಗೂ 2024–25ನೇ ಸಾಲಿಗೆ 1,69,539 ರೂ. ನೀಡಲಾಗಿತ್ತು. ಪುರಸಭೆಗೆ ಈ ಹಣ ಪಾವತಿಸಿದ್ದಕ್ಕೆ ಸಂಬಂಧಿಸಿದಂತೆ ಅವರು ಸಂಘಕ್ಕೆ ರಸೀದಿಗಳನ್ನು ನೀಡಿದ್ದರು. ಆದರೆ 2023–24ನೇ ಸಾಲಿನ ತೆರಿಗೆ 1,37,077 ರೂ. ಪುರಸಭೆ ಖಾತೆಗೆ ಜಮೆಯಾಗಿಲ್ಲ. ಪುರಸಭೆಗೆ ಸಲ್ಲಿಸಿದ್ದ ಬ್ಯಾಂಕ್ ಚಲನ್‌ಗೆ ನಕಲಿ ಸೀಲ್ ಬಳಸಲಾಗಿತ್ತು ಎಂದು ಪುರಸಭೆ ಮುಖ್ಯಾಧಿಕಾರಿಗಳು ಸಂಘದ ಅಧ್ಯಕ್ಷರ ವಿರುದ್ಧ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಪುರಸಭೆಗೆ ವಂಚನೆ ಮಾಡಿರುವುದು ಮಾತ್ರವಲ್ಲದೆ ಸಂಘದ ಗೌರವಕ್ಕೆ ಧಕ್ಕೆ ತಂದ ಹಿನ್ನೆಲೆಯಲ್ಲಿ ನಂಜುಂಡಸ್ವಾಮಿಯವರನ್ನು ನಿರ್ದೇಶಕ ಸ್ಥಾನ ಹಾಗೂ ಆಜೀವ ಸದಸ್ಯತ್ವದಿಂದ ವಜಾ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯ ಕೈಗೊಂಡಿದ್ದೇವೆ ಅಲ್ಲದೇ ಅವರ ವಿರುದ್ಧ ಪೊಲೀಸ್ ಠಾಣೆಗೆ ಸಂಘದ ವತಿಯಿಂದ ದೂರು ಸಲ್ಲಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷ ಎಂ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಕೊತ್ತೆಗಾಲ ಬಸವರಾಜ್, ಖಜಾಂಚಿ ಮಲ್ಲೇಶ್, ನಿರ್ದೇ ಶಕರಾದ ತುಂಬಲ ಭಾಗ್ಯ, ಮುಸುವಿನ ಕೊಪ್ಪಲು ಎಂ.ಶಿವರಾಮು, ಕೆ.ಅಶ್ವಿನ್‌ಕುಮಾರ್, ಎಸ್.ಸಿ. ಅರುಣ್ ಕುಮಾರ್, ತುಂಬಲ ಬಾಬು, ಗೋಪಾಲ್, ವಕೀಲ ಲಿಂಗಣ್ಣ ಇದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ

ಸರಗೂರು, ಜು.21– ಕಾಡಂಚಿನ ಪ್ರದೇಶದಲ್ಲಿ ಮಾನವ, ವನ್ಯಜೀವಿಗಳ ಸಂಘರ್ಷ ತಡೆಯುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪಟ್ಟಣದ ವಲಯ ಅರಣ್ಯ ಇಲಾಖೆ ಕಚೇರಿ ಎದುರು ರೈತರು ಪ್ರತಿಭಟನೆ ನಡೆಸಿದರು.

ಪಟ್ಟಣದ ವಲಯ ಅರಣ್ಯ ಇಲಾಖೆ ಕಚೇರಿ ಎದುರು ಜಮಾಯಿಸಿದ ಚಿಕ್ಕದೇವಮ್ಮನವರ ಬೆಟ್ಟದ ಸುತ್ತಮುತ್ತಲಿನ ಗ್ರಾಮಗಳ ರೈತರು ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.


ವಿವಿಧ ಬೇಡಿಕೆ ಈಡೇರಿಕೆ ಒತ್ತಾಯಿಸಿ ರೈತರು ಪ್ರತಿಭಟನೆ ನಡೆಸಿದರು.

ರೈತ ಮುಖಂಡ, ಮನುಗನಹಳ್ಳಿ ಗ್ರಾಪಂ ಉಪಾಧ್ಯಕ್ಷ ರಮೇಶ್ ಮಾತನಾಡಿ, ಕಾಡಾನೆ ಹಾವಳಿಯಿಂದ ಬೆಳೆ ಕಳೆದುಕೊಂಡ ರೈತರಿಗೆ ಸರ್ಕಾರ ಸೂಕ್ತ ಪರಿಹಾರ ನೀಡುತ್ತಿಲ್ಲ. ಬದಲಿಗೆ ರೈತರ ಬೆಳೆಗೆ ಕಡಿಮೆ ಬೆಲೆ ನಿಗದಿಪಡಿಸಿ ಕೆಲವು ತಿಂಗಳು ಕಳೆದ ಬಳಿಕ ಪರಿಹಾರ ನೀಡುತ್ತಿದೆ. ಅರಣ್ಯ ಇಲಾಖೆ ರೈತರಿಗೆ ನೋಟೀಸ್ ನೀಡುತ್ತಿದೆ. ಕಾಡು ಪ್ರಾಣಿಗಳು ರೈತರ ಜಮೀನಿಗೆ ನುಗ್ಗಿ ಅವರು ಬೆಳೆದ ಬೆಳೆಗಳನ್ನು ತಿಂದು ನಾಶ ಪಡಿಸುತ್ತಿವೆ. ಕಾಡು ಪ್ರಾಣಿಗಳ ಹಾವಳಿಯನ್ನು ತಡೆಗಟ್ಟುವಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ ಮಾತನಾಡಿ, ಮಾನವ–ವನ್ಯಜೀವಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ದೊರೆಯಬೇಕು. ಸಮಸ್ಯೆ ಪರಿಹಾರಕ್ಕೆ ಸ್ಥಳೀಯರನ್ನು ಒಳಗೊಂಡಂತೆ ಉನ್ನತ ಮಟ್ಟದ ಸಮಿತಿ ರಚನೆ ಮಾಡಬೇಕು. ಕಾಡು ಪ್ರಾಣಿಗಳ ಬೆಳೆ ಹಾನಿ ಪರಿಹಾರವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಆದಷ್ಟು ಬೇಗ ಕೊಡಿಸಲು ಕಾರ್ಯನಿರ್ವಹಿಸಬೇಕು ಎಂದರು.

ಇದೇ ವೇಳೆ ಸ್ಥಳಕ್ಕಾಗಮಿಸಿದ ಎಸಿಎಫ್ ಸುಮಿತ್ರ ಪ್ರತಿಭಟನಾಕಾರರ ಸಮಸ್ಯೆ ಆಲಿಸಲು ಮುಂದಾದಾಗ ಪ್ರತಿಭಟನಾಕಾರರು ಡಿಸಿಎಫ್ ಬರುವವರೆಗೂ ಪ್ರತಿಭಟನೆ ನಿಲ್ಲಿಸುವುದಿಲ್ಲ ಎಂದು ಪಟ್ಟು ಹಿಡಿದು ರಸ್ತೆ ತಡೆ ನಡೆಸಿ ಪ್ರತಿಭಟನೆ ಮುಂದುವರೆಸಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಡಿಸಿಎಫ್ ಎಲ್.ನಂದೀಶ್ ಮಾತನಾಡಿ, ಕಾಡಾನೆ ಹಾವಳಿ ತಡೆಗೆ ಕೂಡಲೇ ಕ್ರಮವಹಿಸಲಾಗುವುದು. ಸಿಬ್ಬಂದಿ ಕೊರತೆ ಇರುವ ಕಡೆ ಗಮನಹರಿಸಿ ಸಿಬ್ಬಂದಿ ನೇಮಕ ಮಾಡಿ ರೈಲ್ವೆ ಕಂಬಿ ಅಳವಡಿಸಲಾಗುವುದು. ಹೂಳು ತೆಗೆಸಿ, ಸೋಲಾರ್ ಫೇನ್ಸ್ ಅಳವಡಿಸಲಾಗುವುದು. ಕಾಡು ಪ್ರಾಣಿಗಳಿಂದ ಬೆಳೆ ನಾಶವಾಗಿರುವ ಸಂಬಂಧ ಬಂದ ಅರ್ಜಿಗಳನ್ನು ಪರಿಶೀಲಿಸಿ ಪರಿಹಾರ ಕೊಡಿಸುವ ಭರವಸೆ ನೀಡಿದರು.

ಇದೇ ವೇಳೆ ತಹಸೀಲ್ದಾರ್ ಮೋಹನಕುಮಾರಿ ಮಾತನಾಡಿದರು. ಡಿವೈಎಸ್ಪಿ ಗೋಪಾಲಕೃಷ್ಣ, ಸಿಪಿಐ ಪ್ರಸನ್ನ ಕುಮಾರ್, ಗಂಗಾಧರ್, ಎಸ್‌ಐ ಕಿರಣ್, ಚಂದ್ರಹಾಸ್, ಗೋಪಾಲ, ಎಸಿಎಫ್ ಪರಮೇಶ್, ಆರ್‌ಎಫ್‌ಓ ಮಹಾಲಕ್ಷ್ಮಿ, ವಿವೇಕ್, ನಿತೀನ್, ಡಿಆರ್‌ಎಫ್ ಅಕ್ಷಯ ಕುಮಾರ್, ವಿನೋದ್‌ಕುಮಾರ್, ಪ್ರದೀಪ್ ಕುಮಾರ್, ಅರ್ಪಿತಾ, ಆನಂದ್, ಜಗದೀಶ್, ತಾಲೂಕು ಆದಿ ಕರ್ನಾಟಕ ಸಮಾಜದ ಅಧ್ಯಕ್ಷ ಶಿವಣ್ಣ, ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ಸಣ್ಣಸ್ವಾಮಿ, ಗೌಡಿಕೆ ನಾಗರಾಜಪ್ಪ, ಎಲ್.ಎಸ್.ಸೋಮಣ್ಣ, ಯಜಮಾನರಾದ ಮುಂಜುನಾಥ್, ಬಸವರಾಜು, ಮಹದೇವ, ಮಂಜು, ದೇವರಾಜು, ನಿಂಗರಾಜು, ಬಲ್ಲಯ್ಯ, ಜಗದೀಶ್, ಗ್ರಾಮ ಪಂಚಾಯಿತಿಯ ಸದಸ್ಯರಾದ ಕರಿಸ್ವಾಮಿ, ರಮೇಶ್, ಮುಖಂಡರಾದ ಮರಿಲಿಂಗಯ್ಯ, ಚನ್ನಸ್ವಾಮಿ, ಶ್ರೀನಿವಾಸ್, ಸೋಮು, ಕೃಷ್ಣಪ್ಪ, ರಂಗಸ್ವಾಮಿ, ದಯಾನಂದ, ಮಹೇಶ್, ನಾಗೇಗೌಡ, ಚಂದ್ರು, ಮಹೇಶ್, ನಾಗರಾಜು ಸೇರಿದಂತೆ ವಿವಿಧ ಗ್ರಾಮಸ್ಥರು ಹಾಜರಿದ್ದರು. ಡಿವೈಎಸ್ಪಿ ಗೋಪಾಲಕೃಷ್ಣ ನೇತೃತ್ವದಲ್ಲಿ ಸರಗೂರು ಪೊಲೀಸರು ಸೂಕ್ತ ಬಂದೋಬಸ್ತ್ ಏರ್ಪಡಿಸಿದ್ದರು.

ಅಂತಿಮ ಬಿಕಾಂ ಪರೀಕ್ಷೆ: ಆದಿಚುಂಚನಗಿರಿ ಕಾಲೇಜಿಗೆ ಶೇ.100 ರಷ್ಟು ಫಲಿತಾಂಶ


ವಿದ್ಯಾರ್ಥಿಗಳೊಂದಿಗೆ ಕಾಲೇಜಿನ ಅಧ್ಯಾಪಕ ವರ್ಗ

ಹೆಚ್.ಡಿ.ಕೋಟೆ, ಜು.21– ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿಗೆ ಅಂತಿಮ ಬಿಕಾಂ ಪದವಿ ಪರೀಕ್ಷೆಯಲ್ಲಿ ಶೇ.100 ರಷ್ಟು ಫಲಿತಾಂಶ ಬಂದಿದೆ.

ಪಟ್ಟಣದ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ 67 ವಿದ್ಯಾರ್ಥಿಗಳು ಮೈಸೂರು ವಿವಿ ಮೇ–ಜೂನ್‌ನಲ್ಲಿ ನಡೆಸಿದ ಬಿಕಾಂ 6ನೇ ಸೆಮಿಸ್ಟರ್ ಪರೀಕ್ಷೆ ಬರೆದಿದ್ದರು. ಈ ಪೈಕಿ 44 ಮಂದಿ ಅತ್ಯುನ್ನತ, 17 ಮಂದಿ ಉನ್ನತ, 6 ಮಂದಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದು, ಶೇ.100 ರಷ್ಟು ಫಲಿತಾಂಶ ಬಂದಿದೆ ಎಂದು ಪ್ರಾಂಶುಪಾಲ ಡಾ.ಜೆ.ಎನ್.ವೆಂಕಟೇಶ್ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಸಾಧನೆಗೆ ಶ್ರೀಆದಿಚುಂಚನಗಿರಿ ಮೈಸೂರು ಶಾಖಾ ಮಠದ ಕಾರ್ಯದರ್ಶಿ ಶ್ರೀಸೋಮೇಶ್ವರನಾಥ ಸ್ವಾಮೀಜಿ, ಸಂಸ್ಥೆ ಆಡಳಿತ ಅಧಿಕಾರಿ ಪ್ರೊ.ಕೆ.ಪಿ.ಬಸವೇಗೌಡರು ಹರ್ಷ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಬಿಕಾಂ ವಿಭಾಗದ ಮುಖ್ಯಸ್ಥ ಸಿದ್ದೇಗೌಡ, ಅಧ್ಯಾಪಕ ಚಿಕ್ಕದೇವಿ, ರವಿ, ಸಿದ್ದೇಗೌಡ, ಸಂಗೀತ, ದಿಲೀಪ್, ಚನ್ನಕೇಶವನಾಯಕ, ಚಂದನ, ಮಂಜು, ಚಿತ್ರ ಅಧ್ಯಾಪಕ ವರ್ಗ ಹಾಗೂ ಸಿಬ್ಬಂದಿ ವಿದ್ಯಾರ್ಥಿಗಳ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರೈತರ ಸಮಸ್ಯೆ ಬಗೆಹರಿಸಲು ಕಂದಾಯ ಅದಾಲತ್ ಸಹಕಾರಿ

ದೊಡ್ಡಕವಲಂದೆಯಲ್ಲಿ ಶಾಸಕ ದರ್ಶನ್

ನಂಜನಗೂಡು, ಜು.21– ಜಮೀನಿಗೆ ಸಂಬಂಧಿಸಿದ ದಾಖಲೆ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದ ಇನ್ನಿತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರೈತರಿಗೆ ಕಂದಾಯ ಅದಾಲತ್ ಸಹಕಾರಿಯಾಗಿದ್ದು, ಇದನ್ನು ಸದುಪಯೋಗಪಡಿಸಿಕೊಳ್ಳುವಂತೆ ಶಾಸಕ ದರ್ಶನ್ ಕರೆನೀಡಿದೆ.

ತಾಲೂಕಿನ ದೊಡ್ಡ ಕವಲಂದೆ ಗ್ರಾಮದಲ್ಲಿ ಕಂದಾಯ ಇಲಾಖೆ ವತಿಯಿಂದ ಏರ್ಪಡಿಸಿದ್ದ ಕಂದಾಯ ಅದಾಲತ್, ಪಿಂಚಣಿ, ಇ–ಪೌತಿ ಖಾತೆ ಅದಾಲತ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಮಾತನಾಡಿದರು.


ಆರ್‌ಟಿಸಿ ಒಗ್ಗೂಡಿಸುವುದು, ಎಂಆರ್ ನಂತೆ ಪಹಣಿ ತಿದ್ದುಪಡಿ, ಆರ್‌ಟಿಸಿಯಲ್ಲಿ ಹೆಸರು ತಿದ್ದುಪಡಿ, ಇಂಡೀಕರಣ, ಆಕಾರ್ ಬಂದ್‌ನಂತೆ ಆರ್‌ಟಿಸಿ ತಿದ್ದುಪಡಿ, ಆರ್‌ಟಿಸಿ ಸೇರಿದಂತೆ ರೈತರ ಜಮೀನಿನ ದಾಖಲೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರೈತರು ಕಚೇರಿಗಳಿಗೆ ಅಲೆಯುವುದನ್ನು ತಪ್ಪಿಸಲು ಸರ್ಕಾರ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿ ಒಂದೇ ಸೂರಿನಡಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ರೈತರಿಗೆ ನೆರವಾಗಿದೆ. ಅಲ್ಲದೆ ಕಂದಾಯ ಅದಾಲತ್ ಕಾರ್ಯಕ್ರಮದಲ್ಲಿ ಅಧಿಕಾರಿಗಳೇ ನಿಮ್ಮ ಮನೆ ಬಾಗಿಲಿಗೆ ಬಂದು ಅರ್ಜಿ ಸ್ವೀಕರಿಸಿ ನಿಮ್ಮ ಸಮಸ್ಯೆ ಬಗೆಹರಿಸಿಕೊಡಲಿದ್ದಾರೆ. ನಿಮ್ಮ ಸಮಸ್ಯೆಗಳ ಬಗ್ಗೆ ಅಧಿಕಾರಿಗಳೇ ದೂರವಾಣಿ ಮೂಲಕ ನಿಮ್ಮ ಅರ್ಜಿಯ ಸ್ಥಿತಿಗಳನ್ನು ತಿಳಿಸಲಿದ್ದಾರೆ. ರೈತರು ನಿಮ್ಮ ಅರ್ಜಿಗಳ ಸ್ಥಿತಿಗತಿ ತಿಳಿಯಲು ಕಚೇರಿಗೆ ಅಲೆಯಬೇಕಾಗಿಲ್ಲ. ಆದ್ದರಿಂದ ರೈತರು ಇದರ ಸದುಪಯೋಗವನ್ನು ಪಡೆದುಕೊಂಡು ನಿಮ್ಮ ಜಮೀನಿನ ದಾಖಲೆಗಳನ್ನು ಸರಿಪಡಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ 20 ಅರ್ಜಿಗಳು ಆರ್‌ಟಿಸಿ ತಿದ್ದುಪಡಿ, 8 ಅರ್ಜಿಗಳು ಪಿಂಚಣಿ ಸೌಲಭ್ಯ ಹಾಗೂ 26 ಪೌತಿ ಖಾತೆ ಸಂಬಂಧ ಅರ್ಜಿ ಸಲ್ಲಿಕೆಯಾದವು. ಅಲ್ಲದೆ 12 ಅರ್ಹ ಫಲಾನುಭವಿಗಳಿಗೆ ಸ್ಥಳದಲ್ಲೇ ಪಿಂಚಣಿ ಮಂಜೂರಾತಿ ಪತ್ರ ವಿತರಿಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಗ್ರಾಪಂ ಅಧ್ಯಕ್ಷೆ ಪರ್ವೀನ್ ಬೇಗಂ, ಉಪಾಧ್ಯಕ್ಷ ಮಂಜುನಾಥ್, ತಾಪಂ ಮಾಜಿ ಸದಸ್ಯ ಮಹೇಂದ್ರ, ಮುಖಂಡರಾದ ಶಿವಪ್ಪದೇವರು, ಎನ್.ಎಸ್. ನಂಜನಳ್ಳಿ ಮಾದಪ್ಪ, ನವೀನ್, ನಜೀಮ್, ರಾಜೇಶ್, ರಾಹುಲ್, ತಾಪಂ ಇಓ ಜೆರಾಲ್ಡ್ ರಾಜೇಶ್, ಆರ್.ಐ. ಡಿಸೋಜಾ ಸೇರಿದಂತೆ ಕಂದಾಯ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಗರ್ಗೇಶ್ವರಿ ನೂತನ ವೈದ್ಯಾಧಿಕಾರಿಗೆ ಸನ್ಮಾನ

ತಿ.ನರಸೀಪುರ, ಜು.21– ತಾಲೂಕಿನ ಗರ್ಗೇಶ್ವರಿ ಪ್ರಾಥಮಿಕ ಆರೋಗ್ಯ ಕೇಂದ್ರದ ನೂತನ ವೈದ್ಯಾಧಿಕಾರಿ ಡಾ. ಬಿ.ವೈ.ಶ್ರೀನಿವಾಸ್ ಅವರನ್ನು ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಸನ್ಮಾನಿಸಲಾಯಿತು.


ಡಾ.ಬಿ.ವೈ.ಶ್ರೀನಿವಾಸ್ ಅವರನ್ನು ಸನ್ಮಾನಿಸಲಾಯಿತು.

ತಾಲೂಕಿನ ಗರ್ಗೇಶ್ವರಿ ಆಸ್ಪತ್ರೆಯಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ವೈದ್ಯಾಧಿಕಾರಿ ಶ್ರೀನಿವಾಸ್, ಗ್ರಾಮೀಣ ಭಾಗದಲ್ಲಿ ಕಾರ್ಯನಿರ್ವಹಿಸುವುದು ಅತ್ಯಂತ ತೃಪ್ತಿದಾಯಕ. ಗ್ರಾಮೀಣ ಜನರ ಭಾಂದವ್ಯ ಮತ್ತು ವಿಶ್ವಾಸ ಅವಿಸ್ಮರಣೀಯ. ಗ್ರಾಮೀಣ ಜನರಿಗೆ ಉತ್ತಮ ಸೇವೆ ನೀಡುವುದು ನಮ್ಮ ಧ್ಯೇಯವಾಗಿದೆ. ಜನರು ಕೂಡ ನಮ್ಮ ಸೇವೆಯನ್ನು ಉತ್ತಮ ರೀತಿಯಲ್ಲಿ ಪಡೆದುಕೊಳ್ಳುವಂತೆ ಮನವಿ ಮಾಡಿದರು.

ಜೆಡಿಎಸ್ ರಾಜ್ಯ ಮಾಧ್ಯಮ ವಕ್ತಾರ, ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಮೈಸೂರು ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್ ಮಾತನಾಡಿ, 'ವೈದ್ಯೋ ನಾರಾಯಣ ಹರಿ' ಎಂಬಂತೆ ವೈದ್ಯರು ರೋಗಿಗಳಿಗೆ ದೈವ ಸ್ವರೂಪ. ವೈದ್ಯರು ತಮ್ಮ ವೃತ್ತಿಯನ್ನು ಸೇವೆ ಎಂದು ಪರಿಗಣಿಸಿ ರೋಗಿಗಳ ಸಮಸ್ಯೆಗಳನ್ನು ಅರಿತು ಸಂಯಮದಿಂದ ಚಿಕಿತ್ಸೆ ನೀಡಿದರೆ ರೋಗಿಗಳ ಮನಸಲ್ಲಿ ಸದಾ ಉಳಿಯುತ್ತಾರೆ ಎಂದರು.

ಈ ಸಂದರ್ಭ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ್, ಯಜಮಾನರಾದ ಯಡದೊರೆ ದೇವರಾಜು, ಶಿವಣ್ಣ, ಆಸ್ಪತ್ರೆ ಆರೋಗ್ಯ ನಿರೀಕ್ಷಣಾಧಿಕಾರಿ ಪಿ.ದಿನೇಶ್ ಕುಮಾರ್, ಎಸ್‌ಡಿಸಿ ಎಂ.ಪಿ.ವಿನೋದ್, ಪ್ರಯೋಗಾಲಯದ ತಾಂತ್ರಿಕಾಧಿಕಾರಿ ನಸೀಮಾ ಅಕ್ತರ್, ಹಿರಿಯ ಫಾರ್ಮಸಿ ಅಧಿಕಾರಿ ಇಫತ್ ಬೇಗಮ್, ಸುರಕ್ಷಾಧಿಕಾರಿ ಸರಸ್ವತಿ, ಸಮುದಾಯ ಆರೋಗ್ಯಾಧಿಕಾರಿ ಎಸ್.ಎಸ್.ಶಾಹಿನ, ಸಿಬ್ಬಂದಿ ದೇವರಾಜ್ ಮಂಜುನಾಥ್, ಅನಿಲ್ ಇತರರಿದ್ದರು.

ರೈತ ಸಂಘದಿಂದ ಹುತಾತ್ಮ ರೈತರ ಹೋರಾಟ ಸ್ಮರಣೆ

ಸಾಮೂಹಿಕ ನಾಯಕತ್ವದ ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್

ನಂಜನಗೂಡು, ಜು.21– ರೈತರ ಸಮಸ್ಯೆಗಳನ್ನು ಪರಿಹರಿಸಲು ಹಾಗೂ ರೈತರ ಆರ್ಥಿಕ ಮತ್ತು ಸಾಮಾಜಿಕ ಜೀವನ ಸರಿಪಡಿಸುವ ಸಲುವಾಗಿ ಪೊಲೀಸರ ಗುಂಡೇಟಿಗೆ ಹೆದರದೆ ಹೋರಾಟ ನಡೆಸಿ ಹುತಾತ್ಮರಾದ ರೈತರ ಹೋರಾಟವನ್ನು ರೈತ ಸಂಘಟನೆ ಸ್ಮರಿಸುತ್ತದೆ ಎಂದು ಸಾಮೂಹಿಕ ನಾಯಕತ್ವದ ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್ ತಿಳಿಸಿದರು.


ರೈತ ಹುತಾತ್ಮ ದಿನಾಚರಣೆ ಅಂಗವಾಗಿ ಗಿಡ ನೆಡಲಾಯಿತು.

ನಗರದ ಪರಶುರಾಮ ದೇವಾಲಯದ ಬಳಿ 45ನೇ ವರ್ಷದ ರೈತ ಹುತಾತ್ಮ ದಿನಾಚರಣೆ ಅಂಗವಾಗಿ ಗಿಡ ನೆಟ್ಟು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, ನವಲಗುಂದ, ನರಗುಂದ ರೈತರು ಮಲಪ್ರಭಾ ಬೆಟರ್‌ಮೆಂಟ್ ಕರ ನಿರಾಕರಣೆ ವಿಚಾರವಾಗಿ 1980 ಜು.21 ರಂದು ಪ್ರತಿಭಟನೆ ಮಾಡುತ್ತಿದ್ದ ಸಂದರ್ಭ ಅಲ್ಲಿನ ಪೊಲೀಸರು ರೈತರಾದ ಈರಪ್ಪ ಕಡ್ಲಿಕೊಪ್ಪ ಮತ್ತು ಬಸಪ್ಪ ಲಕ್ಕುಂಡಿ ಅವರ ಮೇಲೆ ಗುಂಡಿನ ಸುರಿಮಳೆಗೈದು ಕೊಲೆ ಮಾಡಿದರು. ಈ ಹಿನ್ನೆಲೆಯಲ್ಲಿ ಕರ್ನಾಟಕದಾದ್ಯಂತ ರೈತ ಹುತಾತ್ಮ ದಿನಾಚರಣೆ ಮಾಡಲಾಗುತ್ತಿದೆ. ಅಲ್ಲದೇ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೂಡ ಹಾವೇರಿ, ಗೆಜ್ಜಲಗೆರೆ, ದುದ್ದ, ಕೊಪ್ಪ ಮುಂತಾದ ಕಡೆ ಸರ್ಕಾರದ ವಿರುದ್ಧ ಹೋರಾಟ ನಡೆಸಿದ ರೈತರನ್ನು ಗೋಲಿಬಾರ್ ನಡೆಸಿ ಕೊಲ್ಲಲಾಗಿದೆ. ರೈತರ ಸಮಸ್ಯೆಗಳ ವಿರುದ್ಧ ಮತ್ತು ರೈತರ ಆರ್ಥಿಕ ಮತ್ತು ಸಾಮಾಜಿಕ ಜೀವನ ಬದಲಾವಣೆ ಮಾಡಲು ಹೋರಾಟ ನಡೆಸಿ ಹುತಾತ್ಮರಾದ 140ಕ್ಕೂ ಹೆಚ್ಚಿನ ರೈತರ ಹೋರಾಟವನ್ನು ರೈತ ಸಂಘ ಎಂದಿಗೂ ಸ್ಮರಿಸುತ್ತದೆ ಎಂದರು.

ರೈತ ಸಂಘಟನೆ ಬರಿ ಶೋಕಿಗಾಗಿ ಹುಟ್ಟಿಕೊಂಡ ಸಂಘಟನೆಯಲ್ಲ. ನಿಜವಾದ ರೈತರ ಸಮಸ್ಯೆಗಳನ್ನು ಬಗೆಹರಿಸಲು ವೈಚಾರಿಕವಾಗಿ ಹುಟ್ಟಿಕೊಂಡ ಸಂಘಟನೆಯಾಗಿದ್ದು, ಪೊಲೀಸರ ಮತ್ತು ಸರ್ಕಾರಗಳ ಗುಂಡೇಟಿಗೆ ರೈತರು ಹೆದರುವುದಿಲ್ಲ. ರೈತರ ಮೇಲೆ ಸರ್ಕಾರಗಳು ನಡೆಸುವ ಕ್ರೌರ್ಯದ ವಿರುದ್ಧ ರೈತರ ಹೋರಾಟ ನಿರಂತರವಾಗಲಿದೆ ಎಂದರು.

ಇದೇ ವೇಳೆ ರೈತ ಹುತಾತ್ಮ ದಿನಾಚರಣೆ ಅಂಗವಾಗಿ ನಗರದ ಪರಶುರಾಮ ದೇವಾಲಯದ ಆವರಣದಲ್ಲಿ ಗಿಡಗಳನ್ನು ನೆಡಲಾಯಿತು. ಅಲ್ಲದೇ ರಾಜ್ಯದ ರೈತರ ಸಂಕಷ್ಟ ಪರಿಹಾರಕ್ಕಾಗಿ ವರುಣ ಕ್ಷೇತ್ರದ ಅಹಲ್ಯ ಗ್ರಾಮದ 200ಕ್ಕೂ ಹೆಚ್ಚು ರೈತರು ಮಲೆ ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಹೊರಟರು. ರೈತ ಸಂಘಟನೆಯ ಸದಸ್ಯರು ಶುಭ ಹಾರೈಸಿ ಬೀಳ್ಕೊಡಲಾಯಿತು.

ರೈತ ಸಂಘದ ತಾಲೂಕು ಅಧ್ಯಕ್ಷ ಸತೀಶ್ ರಾವ್, ಜಿಲ್ಲಾ ಕಾರ್ಯದರ್ಶಿ ಇಮ್ಮಾವು ರಘು, ಶಿವಣ್ಣ ತಿಮ್ಮನಾಯ್ಕ, ರಂಗಸ್ವಾಮಿನಾಯಕ, ರಾಮಚಂದ್ರ ನಾಯ್ಕ, ಮಹದೇವನಾಯ್ಕ, ಆನಂದ್, ಸಿದ್ದರಾಜು, ಶ್ವೇತ, ಶೈಲಜಾ, ಅಹಲ್ಯ, ನಂಜುಂಡ, ಕೃಷ್ಣ, ಯೋಗಿ, ಸವಿತಾ, ಸಿದ್ದಪ್ಪಾಜಿ, ಜವರಪ್ಪ ವಿನಯ್, ಮಂಜು, ಮಾದೇಗೌಡ, ಸೇರಿದಂತೆ ಸಂಘದ ಪದಾಧಿಕಾರಿಗಳು ಮತ್ತು ರೈತರು ಉಪಸ್ಥಿತರಿದ್ದರು.

ಮಹಿಳೆ ನಾಪತ್ತೆ



ಕೆ.ಆರ್.ನಗರ, ಜು.21– ತಾಲೂಕಿನ ಕಸಬಾ ಹೋಬಳಿ ಸಾತಿ ಗ್ರಾಮದ ಗೋಪಾಲ ಎಂಬುವರ ಪತ್ನಿ ಕಮಲಾಕ್ಷಿ(46) ನಾಪತ್ತೆಯಾಗಿದ್ದಾರೆ ಎಂದು ಪುತ್ರ ಪಟ್ಟಣದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ನನ್ನ ತಾಯಿ ಕಮಲಾಕ್ಷಿಯವರು ಜು.20ರಂದು ಬೆಳಗ್ಗೆ 11 ಗಂಟೆಗೆ ಮನೆಯಿಂದ ಹೊರಹೋದವರು ಇನ್ನೂ ಪತ್ತೆಯಾಗಿಲ್ಲ. ಇವರ ಸುಳಿವು ಸಿಕ್ಕಲ್ಲಿ ಕೆ.ಆರ್.ನಗರ ಪೊಲೀಸ್ ಠಾಣೆ ಅಥವಾ ದೂ: 08223–263666 ಅಥವಾ ಮೊ.9480805036, 9845830285 ಸಂಪರ್ಕಿಸಲು ಕೋರಿದ್ದಾರೆ.

ಡಾ.ಕೆ.ಬಿ.ಗಣಪತಿಯವರಿಗೆ ಶ್ರದ್ಧಾಂಜಲಿ



ಹುಣಸೂರಿನ ಕೊಡಗು ಜಬ್ಬುಮಿ ಒಕ್ಕೂಟದಿಂದ ಡಾ.ಕೆ.ಬಿ.ಗಣಪತಿ ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಒಕ್ಕೂಟದ ಎಂ.ಟಿ.ದೇವಕಿ, ಕೆ.ಸಿ.ಉತ್ತಪ್ಪ, ಎಂ.ಆರ್.ಹರೀಶ್, ಶಯನ ಪೂವಯ್ಯ, ಸಿ.ಕೆ.ಬೋಪಣ್ಣ, ಪಿ.ನಂದ, ಕೆ.ಮಂದಣ್ಣ ಇನ್ನಿತರರಿದ್ದಾರೆ.

ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಆಗ್ರಹ

ಸದ್ಯದಲ್ಲೇ ನಿಯೋಗದಿಂದ ಸಿಎಂಗೆ ಮನವಿ ಸಲ್ಲಿಸುವ ನಿರ್ಧಾರ: ಮಾಜಿ ಮೇಯರ್ ಶಿವಕುಮಾರ್

ಮೈಸೂರು,ಜು.21(ಎಂಟಿವೈ)– ಮೈಸೂರಿಗೆ ಮುಕುಟಪ್ರಾಯವಾಗಿ ಬಹುತೇಕ ಪಾರಂಪರಿಕ ಕಟ್ಟಡಗಳು ಶಿಥಿಲಾವಸ್ಥೆ ತಲುಪಿದ್ದು, ಅವುಗಳ ಸಂರಕ್ಷಣೆಗೆ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಲ್ಲಿ ಮಾಜಿ ಮೇಯರ್ ಶಿವಕುಮಾರ್ ಮನವಿ ಮಾಡಿದ್ದಾರೆ.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಾಜಿ ಮೇಯರ್ ಶಿವಕುಮಾರ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿಗೆ ಸಾಂಸ್ಕೃತಿಕ ನಗರಿ, ಯೋಗ ನಗರಿ, ಅರಮನೆಗಳ ನಗರಿ ಜೊತೆಗೆ ಪಾರಂಪರಿಕ ನಗರಿ ಹೆಗ್ಗಳಿಕೆಯೂ ಇದೆ. ಮೈಸೂರು ಪ್ರವೇಶದ ಹೆಬ್ಬಾಗಿಲುಗಳಲ್ಲಿ 'ಪಾರಂಪರಿಕ ನಗರಕ್ಕೆ ಸ್ವಾಗತ' ಕೋರುವ ಮೂಲಕ ಮೈಸೂರಿನ ಪಾರಂಪರಿಕತೆ ಮಹತ್ವ ಸಾರುವ ಪ್ರಯತ್ನ ಮಾಡಲಾಗಿದೆ. ಆದರೆ, ಮೈಸೂರಲ್ಲಿರುವ ಪಾರಂಪರಿಕ ಕಟ್ಟಡಗಳು ಎಷ್ಟರ ಮಟ್ಟಿಗೆ ಸುಸ್ಥಿತಿಯಲ್ಲಿವೆ? ಪಾರಂಪರಿಕ ಇಲಾಖೆಯ ಪ್ರಕಾರವೇ ಮೈಸೂರಲ್ಲಿ 234 ಪಾರಂಪರಿಕ ಕಟ್ಟಡಗಳಿದ್ದು, ಅವುಗಳಲ್ಲಿ 129 ಸರ್ಕಾರದ ಸುಪರ್ದಿಯಲ್ಲಿವೆ. ಅವುಗಳ ಸ್ಥಿತಿ ಶೋಚನೀಯವಾಗಿದ್ದು, ಕುಸಿಯುವ ಹಂತ ತಲುಪಿವೆ ಎಂದು ವಿಷಾದಿಸಿದರು.

170 ವರ್ಷ ಇತಿಹಾಸವುಳ್ಳ ಮಹಾರಾಜ ಕಾಲೇಜು ಕಟ್ಟಡವೂ ಪ್ರಮುಖ ಪಾರಂಪರಿಕ ಕಟ್ಟಡವಾಗಿದೆ. ರಾಷ್ಟ್ರಕವಿ ಕುವೆಂಪು, ಮಹಾರಾಜ ಜಯಚಾಮರಾಜ ಒಡೆಯರ್, ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್, ಆರ್.ಕೆ.ನಾರಾಯಣ, ಎಸ್.ಎಂ.ಕೃಷ್ಣ ಸೇರಿದಂತೆ ಇನ್ನಿತರ ಮಹನೀಯರು ಈ ಮಹಾರಾಜ ಕಾಲೇಜಿನಲ್ಲಿ ಓದಿದ್ದರು. ಪ್ರಥಮ ಉಪರಾಷ್ಟ್ರಪತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಡಾ.ಯು.ಆರ್. ಅನಂತಮೂರ್ತಿ ಸೇರಿದಂತೆ ಹೆಸರಾಂತ ಉಪನ್ಯಾಸಕರು ಬೋಧನೆ ಮಾಡಿರುವ ಇಂತಹ ಜ್ಞಾನದೇಗುಲ ಶಿಥಿಲಾವಸ್ಥೆ ತಲುಪಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಓದಿದಂತಹ ಯುವರಾಜ ಕಾಲೇಜಿನ ಕಟ್ಟಡ, ಸ್ವಾತಂತ್ರ್ಯ ಹೋರಾಟಗಾರರಿಗೆ ಆಶ್ರಯವಾಗಿದ್ದ ಮಹಾರಾಜ ಕಾಲೇಜು ವಿದ್ಯಾರ್ಥಿನಿಲಯ, ಸಂಸ್ಕೃತ ಪಾಠಶಾಲೆ ಕಟ್ಟಡ, ಪ್ರಾಚ್ಯ ವಸ್ತುಸಂಗ್ರಹಾಲಯದ ಕಟ್ಟಡ, ಲಲಿತಮಹಲ್ ರಸ್ತೆಯಲ್ಲಿರುವ ವಾಣಿವಿಲಾಸ ಅರಮನೆ ಕಟ್ಟಡಗಳು ಕುಸಿಯುವ ಹಂತ ತಲುಪಿವೆ.

ದ್ವಾರಗಳು: ಮೈಸೂರಲ್ಲಿ ಮಹಾದ್ವಾರಗಳಿವೆ. ಲಲಿತಮಹಲ್ ರಸ್ತೆ ಸರ್ಕಾರಿ ಅತಿಥಿಗೃಹದ ಹಿಂಭಾಗ, ಮಹಾರಾಣಿ ವಿಜ್ಞಾನ ಕಾಲೇಜು ಆವರಣ, ಗ್ರಾಮಾಂತರ ಬಸ್ ನಿಲ್ದಾಣದ ಬಳಿ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ ಹಾಗೂ ವೀರನಗೆರೆ ಕೋಟೆಗಳ ಮೇಲೆ ಗಿಡಗಳು ಬೆಳೆದು ಗೋಡೆಗಳು ಶಿಥಿಲಗೊಂಡಿವೆ. ಈ ಹಿಂದೆ ನಾನು ಮೇಯರ್ ಆಗಿದ್ದ ವೇಳೆ ಪಾರಂಪರಿಕ ತಜ್ಞ ಪ್ರೊ.ರಂಗರಾಜು ಸಲಹೆ ಪಡೆದು ದ್ವಾರಗಳ ಸಂರಕ್ಷಣೆಗಾಗಿ 2.80 ಕೋಟಿ ವೆಚ್ಚದಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿತ್ತು. ಅದಕ್ಕಾಗಿ ಕೌನ್ಸಿಲ್ ಸಭೆಯಲ್ಲೂ ಅನುಮೋದನೆ ಪಡೆಯಲಾಗಿತ್ತು. ನಮ್ಮ ಅಧಿಕಾರಾವಧಿ ಮುಗಿದ ಬಳಿಕ ಅಧಿಕಾರಿಗಳು ಕಾಮಗಾರಿಯನ್ನು ಕೈಬಿಟ್ಟಿದ್ದಾರೆ ಎಂದು ದೂರಿದರು.

ಮೈಸೂರಿನ ಹೃದಯ ಭಾಗದ ಕೆ.ಆರ್. ಸರ್ಕಲ್‌ನ ಸೆಲ್ಲರ್‌ನಲ್ಲಿ ಪಿಲ್ಲರ್‌ಗಳು ಬಿರುಕು ಬಿಟ್ಟಿವೆ. ಪಿಲ್ಲರ್‌ಗಳಲ್ಲಿ ಕಬ್ಬಿಣದ ಸರಳು ಕಾಣುತ್ತಿವೆ. ಕೂಡಲೇ ಅದಕ್ಕೆ ಕಾಯಕಲ್ಪ ನೀಡದೇ ಹೋದರೆ ಕೆ.ಆರ್.ವೃತ್ತಕ್ಕೆ ಅಪಾಯ ಎದುರಾಗುತ್ತದೆ. ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾವಾ ಹಳೆಯ ಕಟ್ಟಡ, ಕಾವೇರಿ ಎಂಪೋರಿಯಂ, ಇಲವಾಲದ ಬಳಿ ಇರುವ ಪ್ಯಾಲೇಸ್ ಕಟ್ಟಡಗಳ ಸ್ಥಿತಿಯೂ ಶೋಚನೀಯವಾಗಿದೆ.

ಕಳಪೆ ಕಾಮಗಾರಿ ಶಂಕೆ: ಮೈಸೂರಿನ ದೊಡ್ಡ ಗಡಿಯಾರ ಸಂರಕ್ಷಣೆಗೆ ನಾನು ಮೇಯರ್ ಆಗಿದ್ದಾಗ 36 ಲಕ್ಷ ರೂ. ಅನುದಾನ ನೀಡಲಾಗಿತ್ತು. ದುರಸ್ತಿ ಕಾಮಗಾರಿ ನಡೆಯುತ್ತಿದೆ. ಆದರೆ, ಗುಣಮಟ್ಟದ ಕಾಮಗಾರಿ ನಡೆಯುತ್ತಿಲ್ಲ ಎಂಬ ಅನುಮಾನವಿದೆ. ದೊಡ್ಡಗಡಿಯಾರದ ನೈಜ ಸ್ವರೂಪಕ್ಕೆ ತಕ್ಕಂತೆ ಕಾಮಗಾರಿ ನಡೆಯುತ್ತಿಲ್ಲ. ಕಳಪೆ ಕಾಮಗಾರಿಯಿಂದ ದೊಡ್ಡಗಡಿಯಾರ ಮೂಲಸ್ವರೂಪ ಕಳೆದುಕೊಳ್ಳುವ ಆತಂಕವಿದೆ ಎಂದು ವಿಷಾದಿಸಿದರು.

ಮೈಸೂರಿನ ಹಳೇ ಜಿಲ್ಲಾಧಿಕಾರಿ ಕಚೇರಿಯನ್ನು ವಸ್ತುಸಂಗ್ರಹಾಲಯವಾಗಿ ಘೋಷಿಸಲಾಗಿದೆ. ಅದಕ್ಕಾಗಿ 78 ಕೋಟಿ ರೂ. ಅನುದಾನ ಬೇಕೆಂದು ಅಭಿಪ್ರಾಯಪಡಲಾಗಿದೆ. ಆದರೆ, ಆ ಯೋಜನೆ ಜಾರಿಗೊಳಿಸುವ ಬಗ್ಗೆ ಯಾವುದೇ ಪ್ರಸ್ತಾಪವಾಗುತ್ತಿಲ್ಲ. ಹಾಗಾಗಿ ಈ ಕಟ್ಟಡವೂ ಪಾಳುಬಿದ್ದಂತಾಗಿದೆ ಎಂದರು.

96 ಕೋಟಿ ರೂ. ಯೋಜನೆ: ಮೈಸೂರಲ್ಲಿ ಪ್ರಮುಖ 10 ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗಾಗಿ ಈ ಹಿಂದೆ ಜಿಲ್ಲಾಧಿಕಾರಿಯಾಗಿದ್ದ ಡಾ.ರಾಜೇಂದ್ರ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅದಕ್ಕೆ ತುರ್ತಾಗಿ ಅನುಮೋದನೆ ನೀಡಿದರೆ 10 ಪಾರಂಪರಿಕ ಕಟ್ಟಡಗಳ ನವೀಕರಣ ಮಾಡಬಹುದು. ಮೈಸೂರಿನವರೇ ಆಗಿರುವ ಮುಖ್ಯಮಂತ್ರಿಗಳು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಒತ್ತು ನೀಡಬೇಕು. ಶೀಘ್ರದಲ್ಲಿಯೇ ರಾಜಕೀಯ ಹೊರತುಪಡಿಸಿ ಪಾರಂಪರಿಕ ತಜ್ಞರು ಒಳಗೊಂಡಂತೆ ನಿಯೋಗವೊಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಉಪ ಮೇಯರ್ ಡಾ.ರೂಪ ಯೋಗೇಶ್, ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ್, ಎಂ.ಯು.ಸುಬ್ಬಯ್ಯ, ರಂಗಸ್ವಾಮಿ ಇದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾರ್ಗನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಮಾಲಿಕ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಜೂನಿಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
3 ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಎಕ್ಕ (ಕ)	4 ಪ್ರದರ್ಶನಗಳು
ಲಿಡೋ	
ತಮ್ಮುಡು (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾದೇವ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ.10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮುಡಾ ಪ್ರಕರಣ: ಸಿಎಂ ಪತ್ನಿ ವಿಷಯದಲ್ಲಿ ಇಡಿಗೆ ತಕ್ಕಶಾಸ್ತಿ

ಪರಿಷತ್ ಸದಸ್ಯ ಡಾ. ತಿಮ್ಮಯ್ಯ ಪ್ರತಿಕ್ರಿಯೆ

ಮೈಸೂರು,ಜು.21(ಎಂಟಿವೈ)– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಅಮಾಯಕರಾದ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಯವರನ್ನು ಸಿಲುಕಿಸಲು ಕೇಂದ್ರ ಬಿಜೆಪಿ ಸರ್ಕಾರ ನಡೆಸಿದ ಕುತಂತ್ರಕ್ಕೆ ಸುಪ್ರೀಂಕೋರ್ಟ್ ಛೀಮಾರಿ ಹಾಕಿ ಬಿಜೆಪಿ ಬಣ್ಣ ಬಯಲು ಮಾಡಿದೆ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಪ್ರತಿಕ್ರಿಯಿಸಿದ್ದಾರೆ.



ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಸುಪ್ರೀಂಕೋರ್ಟ್ ಆದೇಶದಿಂದ ಕೊನೆಗೂ ಸತ್ಯಕ್ಕೆ ಜಯ ಸಿಕ್ಕಿದಂತಾಗಿದೆ. ಮುಡಾದಲ್ಲಿ ಸಿಎಂ ಪತ್ನಿ ಪಾರ್ವತಿ ಅವರು ಕಾನೂನು ಪ್ರಕಾರವಾಗಿಯೇ ನಿವೇಶನಗಳನ್ನು ನೋಂದಣಿ ಮಾಡಿಸಿಕೊಂಡಿದ್ದರು. ಎಲ್ಲ ವ್ಯವಹಾರ ಪಾರದರ್ಶಕವಾಗಿ ನಡೆದಿತ್ತು. ಹೀಗಿದ್ದರೂ, ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮೊಕದ್ದಮೆ ದಾಖಲಿಸಿ ತನಿಖೆ ಕೈಗೊಂಡಿದ್ದರು. ಎಫ್‌ಐಆರ್ ರದ್ದುಪಡಿಸಿ ಹೈಕೋರ್ಟ್ ಆದೇಶ ನೀಡಿದ್ದನ್ನು ಪ್ರಶ್ನಿಸಿದ್ದ ಇಡಿಗೆ ಸುಪ್ರೀಂಕೋರ್ಟ್ ಚಾಟಿ ಬೀಸಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಸಿಬಿಐ, ಐಟಿ, ಇಡಿ ಸೇರಿದಂತೆ ಪ್ರಮುಖ ಸ್ವಾಯತ್ತ ತನಿಖಾ ಸಂಸ್ಥೆಗಳನ್ನು ತಮ್ಮ ರಾಜಕೀಯ ಎದುರಾಳಿಗಳನ್ನು ಮಣಿಸಲು ಬಳಸುತ್ತಿರುವ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಾಧೀಶರು ಕಳವಳವ್ಯಕ್ತಪಡಿಸಿದ್ದಾರೆ. ಇದರಿಂದಾಗಿ, ಬಿಜೆಪಿ ನಾಯಕರ ನಿಜ ಬಣ್ಣ ಬಯಲಾಗಿದೆ ಎಂದು ಕಿಡಿಕಾರಿದ್ದಾರೆ.

ಕಳೆದ ಐದು ದಶಕಗಳಿಂದ ಪ್ರಾಮಾಣಿಕವಾಗಿ ರಾಜಕಾರಣ ಮಾಡಿಕೊಂಡು ಬಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಡಾ ಹಗರಣದಲ್ಲಿ ತಪ್ಪು ಮಾಡಿಲ್ಲ ಜತೆಗೆ, ಸಿಎಂ ಪತ್ನಿ ಪಾರ್ವತಿ ಅವರಿಗೆ ಇಡಿ ಅಧಿಕಾರಿಗಳು ಮಾನಸಿಕ ಹಿಂಸೆ ನೀಡಿದ್ದರು. ಆದರೆ, ಸತ್ಯಕ್ಕೆ ಕೊನೆಗೂ ಜಯ ಸಿಗಲಿದೆ ಎಂಬುದಕ್ಕೆ ಸುಪ್ರೀಂ ಕೋರ್ಟ್ ತೀರ್ಪು ಸಾಕ್ಷಿಯಾಗಿದೆ ಎಂದು ತಿಳಿಸಿದ್ದಾರೆ.

ಇಡಿ ಎಫ್‌ಐಆರ್ ಹಾಕಿದ್ದನ್ನು ರಾಜಕೀಯವಾಗಿ ಬಳಸಿಕೊಂಡು ಅಪಪ್ರಚಾರ ಮಾಡುತ್ತಿದ್ದ ಬಿಜೆಪಿ ನಾಯಕರು, ಇನ್ನಾದರೂ ಬಾಯಿಗೆ ಬೀಗ ಹಾಕಿಕೊಂಡು ಸುಮ್ಮನಿರಬೇಕು. ರಾಜಕೀಯ ದಾಳಕ್ಕೆ ಸುಳ್ಳು ಆರೋಪ ಮಾಡುವುದನ್ನು ಬಿಟ್ಟು ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಆಶಯದಡಿ ಕೆಲಸ ಮಾಡುವಂತೆ ಸಲಹೆ ನೀಡಿದರು.

ಸನ್ಮಾನ



ಬೆಂಗಳೂರು ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕಿಗೆ ಭೇಟಿ ನೀಡಿದ್ದ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಜೆ.ಯೋಗೇಶ್, ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ ಅವರನ್ನು ಮಲ್ಲೇಶ್ವರಂ ಕೋ–ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಸುರೇಶ್ ಎಂ.ಎನ್ ಹಾಗೂ ಕಾರ್ಯದರ್ಶಿ ಗುರುಪ್ರಸಾದ್ ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಬ್ಯಾಂಕಿನ ಕಾರ್ಯದರ್ಶಿ ಕೆ.ಹರ್ಷಿತ್ ಗೌಡ ಉಪಸ್ಥಿತರಿದ್ದರು.

ಸಂಶೋಧನಾ ವಿಧಾನ ಕೋರ್ಸ್ ತರಬೇತಿ ಕಾರ್ಯಾಗಾರಕ್ಕೆ ಚಾಲನೆ

ಮೈಸೂರು, ಜು.21(ಎಂಕೆ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ತಂತ್ರಜ್ಞಾನ ವಿಭಾಗದ ವತಿಯಿಂದ ಇಂಡಿಯನ್ ಕೌನ್ಸಿಲ್ ಆಫ್ ಸೋಶಿಯಲ್ ಸೈನ್ಸ್ ರಿಸರ್ಚ್(ಐಸಿಎಸ್‌ಎಸ್‌ಆರ್) ಸಹಯೋಗದೊಂದಿಗೆ ಸಾಮಾಜಿಕ ವಿಜ್ಞಾನಗಳ ವಿಷಯದಲ್ಲಿ ಎಂಫಿಲ್, ಪಿಹೆಚ್‌ಡಿ, ಪಿಡಿಎಫ್ ಮಾಡುತ್ತಿರುವ ಮಹಿಳಾ ಸಂಶೋಧನಾ ವಿದ್ಯಾರ್ಥಿಗಳಿಗೆ 10 ದಿನಗಳ ಸಂಶೋಧನಾ ವಿಧಾನ ಕೋರ್ಸ್ ತರಬೇತಿ ಕಾರ್ಯಾಗಾರಕ್ಕೆ ಸೋಮವಾರ ಚಾಲನೆ ನೀಡಲಾಯಿತು.



10 ದಿನಗಳ ಸಂಶೋಧನಾ ವಿಧಾನ ಕೋರ್ಸ್ ತರಬೇತಿ ಕಾರ್ಯಾಗಾರಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಮುಕ್ತ ವಿವಿ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಾಗಾರಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ಅಧ್ಯಯನ ವಿಭಾಗದ ಮುಖ್ಯಸ್ಥ ಪ್ರೊ.ಚಂದ್ರಮೌಳಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಸಂಶೋಧನೆಯು ಪದವಿಗಷ್ಟೇ ಸೀಮಿತವಾಗದೇ ಸಮಾಜಕ್ಕೆ ಉಪಯುಕ್ತವಾಗಿರಬೇಕು. ಮಾನವನಿಗೆ ವಿಶಿಷ್ಟ ಶಕ್ತಿ ಇದೆ ಎಂದು ನಂಬಲಾಗಿದೆ. ಆತ ಸೃಷ್ಟಿಯಿಂದ ಆರಂಭಿಸಿ, ಸೃಷ್ಟಿ ನಾಶವಾಗುವವರೆಗೂ ಮುಂದುವರೆಯಬಲ್ಲ ಎಂದರು.

ಮಹಾಕಾವ್ಯ, ಮಾನವ ನಿರ್ಮಿತ ವಸ್ತು, ಬಾಹ್ಯಾಕಾಶಯಾನದಂತಹ ಹೊಸ ವಿಚಾರಗಳ ಸೃಷ್ಟಿಯ ಜೊತೆಗೆ ಯುದ್ಧದ ಮೂಲಕ ನಾಶವನ್ನೂ ಮಾಡುವ ಸಾಮರ್ಥ್ಯ ಮನುಷ್ಯನಿಗಿದೆ. ಇವೆಲ್ಲವೂ ಸಾಧ್ಯವಾಗಿರುವುದು ಸಂಶೋಧನೆಯಿಂದ. ಸಂಶೋಧನೆ ಎಂದರೆ ಹೊಸ ಜ್ಞಾನವನ್ನು ಪಡೆಯಲು ಅಥವಾ ಅಸ್ತಿತ್ವದಲ್ಲಿರುವ ಜ್ಞಾನವನ್ನು ಸುಧಾರಿಸಲು ನಡೆಸುವ ವೈಜ್ಞಾನಿಕ ವಿಮರ್ಶೆಯಾಗಿದೆ. ಅಲ್ಲದೆ, ಜೀವನದ ಗುಣಮಟ್ಟವನ್ನು ಹೆಚ್ಚಿಸುವ ಉದ್ದೇಶವನ್ನೂ ಹೊಂದಿರುತ್ತದೆ. ಆದರೆ, ಇತ್ತೀಚೆಗೆ ಡಾಕ್ಟರೇಟ್ ಪಡೆಯುವ ಉದ್ದೇಶಕ್ಕಷ್ಟೇ ಸಂಶೋಧನೆ ನಡೆಯುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸಂಶೋಧನೆಗೆ ಅಪ್ರಸ್ತುತ ವಿಷಯಗಳ ಆಯ್ಕೆಯಿಂದ ಸಮಯ ವ್ಯರ್ಥವಾಗುತ್ತದೆ. ಅದರ ಬದಲಾಗಿ ಪ್ರಸ್ತುತ ಸಮಾಜ ಎದುರಿಸುತ್ತಿರುವ ವಿಚಾರಗಳನ್ನು ಆಯ್ದುಕೊಂಡು ಸಂಶೋಧನೆ ನಡೆಸಿದರೆ, ಸಂಶೋಧನೆಯ ಮೌಲ್ಯ ಹೆಚ್ಚುತ್ತದೆ. ಹಾಗಾಗಿ ಜನ ಜೀವನಕ್ಕೆ ಪರಿಣಾಮಕಾರಿಯಾಗಬಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎಂದು ಸಲಹೆ ನೀಡಿದರು.

ಬೆಂಗಳೂರು ವಿವಿ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ.ಲಲಿತಾ ಅಶ್ವಥ್ ಸಂಶೋಧನೆಯ ವಿಧಾನಗಳನ್ನು ತಿಳಿಸಿಕೊಟ್ಟರು. ಕೆಎಸ್‌ಓಯು ಕುಲಪತಿ ಶರಣಪ್ಪ ವಿ ಹಲಸೆ, ಶೈಕ್ಷಣಿಕ ಡೀನ್ ಪ್ರೊ.ರಾಮನಾಥಂ ನಾಯ್ಡು ಅಧ್ಯಯನ ವಿಭಾಗದ ಡೀನ್ ಡಾ.ಎನ್.ಆರ್. ಚಂದ್ರೇಗೌಡ, ಹಣಕಾಸು ಅಧಿಕಾರಿ ಪ್ರೊ.ನಿರಂಜನ್ ರಾಜು, ಕೋರ್ಸ್ ನಿರ್ದೇಶಕ ಡಾ.ಕೆ.ಪ್ರಕಾಶ್, ಸಹ ನಿರ್ದೇಶಕಿ ಡಾ.ಎನ್.ಆರ್.ಶಿಲ್ಪಾ ರಾಣಿ ಮತ್ತಿತರು ಉಪಸ್ಥಿತರಿದ್ದರು.

ಬೆಂಗಳೂರು– ಸೇಲಂ ಹೆದ್ದಾರಿಯಲ್ಲಿ ಸರಣಿ ಅಪಘಾತ

7 ವರ್ಷದ ಮಗು ಸೇರಿ ಮೂವರ ದುರ್ಮರಣ

ಚೆನ್ನೈ: ಬೆಂಗಳೂರು–ಸೇಲಂ ಹೆದ್ದಾರಿಯಲ್ಲಿ ವಾಹನಗಳ ನಡುವೆ ಸರಣಿ ಅಪಘಾತ ಸಂಭವಿಸಿದ ಪರಿಣಾಮ 7 ವರ್ಷದ ಮಗು ಸೇರಿ ಮೂವರು ಸಾವನ್ನಪ್ಪಿದ್ದಾರೆ.

ಹೆದ್ದಾರಿಯ ಕುರುಬರಪಳ್ಳಿ ಬಳಿ 12ಕ್ಕೂ ಹೆಚ್ಚು ವಾಹನಗಳು ಒಂದರ ಮೇಲೊಂದರಂತೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಸಾವನ್ನಪ್ಪಿದ್ದು, ಏಳು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ರಸ್ತೆ ಕಾಮಗಾರಿಯಿಂದಾಗಿ ವಾಹನಗಳು ನಿಧಾನವಾಗಿ ಸಾಗುತ್ತಿದ್ದಾಗ ಲಾರಿಯೊಂದರ ನಿಯಂತ್ರಣ ತಪ್ಪಿ ಈ ಅಪಘಾತ ಸಂಭವಿಸಿದೆ. ಲಾರಿ, 2 ಕಾರು ಹಾಗೂ 1 ಬೈಕ್ ಒಂದಕ್ಕೊಂದು ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ 2 ಟ್ರಕ್‌ಗಳ ನಡುವೆ 2 ಕಾರು ಹಾಗೂ ಬೈಕ್ ಸಿಲುಕಿ ಸಂಪೂರ್ಣ ನಜ್ಜುಗುಜ್ಜಾಗಿದೆ. ಕಾರಿನಲ್ಲಿದ್ದ ಮೂವರು ಪ್ರಯಾಣಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. 7 ಮಂದಿ ಗಾಯಗೊಂಡಿದ್ದು, ಗಾಯಾಳುಗಳನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಘಟನೆ ವೇಳೆ ಕಿಲೋಮೀಟರ್‌ಗಟ್ಟಲೆ ವಾಹನ ಸಂಚಾರ ಸ್ಥಗಿತವಾಗಿತ್ತು. ಕೂಡಲೆ ಘಟನಾ ಸ್ಥಳಕ್ಕೆ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದರು.

ಆಪರೇಷನ್ ಸಿಂಧೂರ್‌ನಲ್ಲಿ ಶೇ.100ರಷ್ಟು ಗುರಿ ಸಾಧನೆ; ಇಡೀ ವಿಶ್ವವೇ ಭಾರತದ ಸೇನಾಶಕ್ತಿಗೆ ಆಕರ್ಷಿತ

ಮುಂಗಾರು ಸಂಸತ್ ಅಧಿವೇಶನಕ್ಕೂ ಮುನ್ನ ಪ್ರಧಾನಿ ಮೋದಿ

ನವದೆಹಲಿ, ಜು.21– ಆಪರೇಷನ್ ಸಿಂಧೂರ್‌ನಲ್ಲಿ ಶೇ.100ರಷ್ಟು ಗುರಿಯನ್ನು ಸಾಧಿಸಲಾಗಿದ್ದು, ಇಂದು ಇಡೀ ವಿಶ್ವವೇ ಭಾರತದ ಸೇನಾಶಕ್ತಿಯತ್ತ ಆಕರ್ಷಿತವಾಗಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಸೋಮವಾರ ಹೇಳಿದ್ದಾರೆ.



ಇಂದಿನಿಂದ ಸಂಸತ್ ಮುಂಗಾರು ಅಧಿವೇಶನ ಆ.12ರವರೆಗೆ ನಡೆಯಲಿದೆ. ಅಧಿವೇಶನಕ್ಕೂ ಮುನ್ನ ಪ್ರಧಾನಿ ಮೋದಿ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದರು. ಪ್ರಧಾನಿ ಮೋದಿಯವರು ಆಪರೇಷನ್ ಸಿಂಧೂರ್ ಹಾಗೂ ಭಯೋತ್ಪಾದನೆ ಕುರಿತು ಮಾತನಾಡಿದರು. ವಿಜಯೋತ್ಸವದ ಸಂಭ್ರಮಕ್ಕಾಗಿಯೇ ಈ ಮುಂಗಾರು ಅಧಿವೇಶನ ಎಂದು ಹೇಳಿದರು.

ಇಡೀ ವಿಶ್ವವೇ ಭಾರತದ ಸೇನಾ ಶಕ್ತಿಯ ಬಲವನ್ನು ನೋಡಿದೆ. ಆಪರೇಷನ್ ಸಿಂಧೂರ್‌ನಲ್ಲಿ ಭಾರತ ಸೇನೆಯು ನಿಗದಿಪಡಿಸಿದ್ದ ಶೇ.100ರಷ್ಟು ಗುರಿಯನ್ನು ಸಾಧಿಸಿದೆ. ಆಪರೇಷನ್ ಸಿಂಧೂರ್ ಅಡಿಯಲ್ಲಿ ಭಯೋತ್ಪಾದಕರ ನೆಲೆಗಳನ್ನು ಕೇವಲ 22 ನಿಮಿಷಗಳಲ್ಲಿ ನೆಲಸಮ ಮಾಡಲಾಯಿತು ಎಂದು ತಿಳಿಸಿದರು.

ಈ ಮಳೆಗಾಲದ ಅಧಿವೇಶನವು ವಿಜಯೋತ್ಸವದ ಆಚರಣೆಯಾಗಿದೆ. ಇಡೀ ಜಗತ್ತು ಭಾರತದ ಶಕ್ತಿಯನ್ನು ನೋಡಿದೆ. ಆಪರೇಷನ್ ಸಿಂಧೂರ್‌ನಲ್ಲಿ ಭಾರತೀಯ ಸೇನೆಯು ನಿಗದಿಪಡಿಸಿದ ಶೇ.100ರಷ್ಟು ಗುರಿ ಸಾಧಿಸಿದೆ. ಆಪರೇಷನ್ ಸಿಂಧೂರ್ ಅಡಿಯಲ್ಲಿ, ಭಯೋತ್ಪಾದಕರ ನೆಲೆಗಳನ್ನು 22 ನಿಮಿಷಗಳಲ್ಲಿ ನೆಲಸಮ ಮಾಡಲಾಯಿತು. ಭಾರತದ ಈ ಈ ಹೊಸ ರೂಪದ ಸೇನಾ ಶಕ್ತಿಗೆ ಇಡೀ ವಿಶ್ವವೇ ಆಕರ್ಷಿತವಾಗಿದೆ. ಇತ್ತೀಚಿನ ದಿನಗಳಲ್ಲಿ, ನಾನು ವಿದೇಶಕ್ಕೆ ಭೇಟಿ ನೀಡಿದಾಗಲೆಲ್ಲಾ ಭಾರತದಲ್ಲಿ ತಯಾರಿಸಿದ ಶಸ್ತ್ರಾಸ್ತ್ರಗಳ ಕಡೆಗೆ ಪ್ರಪಂಚ ಆಕರ್ಷಣೆಗೊಳಗಾಗಿರುವುದನ್ನು ನಾನು ಗಮನಿಸಿದೆ ಎಂದರು.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಮೊದಲ ಬಾರಿಗೆ ಭಾರತೀಯ ತ್ರಿವರ್ಣ ಧ್ವಜವನ್ನು ಹಾರಿಸುವುದು ಪ್ರತಿಯೊಬ್ಬ ಭಾರತೀಯನಿಗೂ ಹೆಮ್ಮೆಯ ವಿಷಯವಾಗಿದೆ. ಈ ಯಶಸ್ವಿ ಪ್ರಯಾಣವು ದೇಶದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಯ ಕಡೆಗೆ ಹೊಸ ಉತ್ಸಾಹವನ್ನು ತುಂಬುತ್ತಿದೆ. ಇಡೀ ಸಂಸತ್ತು ಮತ್ತು ದೇಶದ ಜನತೆ ಈ ಹೆಮ್ಮೆಯಲ್ಲಿ ಒಂದೇ ಧ್ವನಿಯಲ್ಲಿ ಸೇರಿಕೊಂಡಾಗ ಅದು ಮತ್ತಷ್ಟು ಯಶಸ್ವಿಯಾಗುತ್ತದೆ.


ಎಲ್ಲಾ ರಾಜಕೀಯ ಪಕ್ಷಗಳು ಮತ್ತು ಸದಸ್ಯರು ಈ ವಿಜಯೋತ್ಸವವನ್ನು ಆಚರಿಸುತ್ತಾರೆಂಬ ಭರವಸೆಯಿದೆ. ಇದು ಭಾರತೀಯ ರಕ್ಷಣಾ ಪಡೆಗಳ ಉತ್ಸಾಹವನ್ನು ಮತ್ತಷ್ಟು ಬಲಪಡಿಸುತ್ತದೆ ಮತ್ತು ಸೇನಾ ಕ್ಷೇತ್ರದಲ್ಲಿ ಸಂಶೋಧನೆ, ನಾವೀನ್ಯತೆ ಮತ್ತು ಉತ್ಪಾದನೆಯನ್ನು ಪ್ರೋತ್ಸಾಹಿಸುತ್ತದೆ ಎಂದು ತಿಳಿಸಿದರು.

ಕಳೆದ 10 ವರ್ಷಗಳಲ್ಲಿ ಮೊದಲ ಬಾರಿಗೆ ದೇಶದಲ್ಲಿ ನೀರಿನ ಸಂಗ್ರಹ ಸುಮಾರು ಮೂರು ಪಟ್ಟು ಹೆಚ್ಚಾಗಿದೆ, ಇದು ಇಡೀ ದೇಶಕ್ಕೆ ವಿಶೇಷವಾಗಿ ರೈತರು, ಹಳ್ಳಿಗಳು ಮತ್ತು ಸಾಮಾನ್ಯ ಕುಟುಂಬಗಳಿಗೆ ಪ್ರಯೋಜನವನ್ನು ನೀಡುತ್ತದೆ ಎಂದು ಹೇಳಿದರು.

'ಹೊಸಗನ್ನಡ ಸಾಹಿತ್ಯ ಚರಿತ್ರೆ: ಪಂಥಗಳು' ಕೃತಿ ಬಿಡುಗಡೆ

ಹೊಸಗನ್ನಡ ಸಾಹಿತ್ಯ ಪರಂಪರೆಯ ಹೂರಣ; ಪ್ರೊ.ಎಂ.ನಂಜಯ್ಯ ಹೊಂಗನೂರು ಅಭಿಮತ

ಮೈಸೂರು, ಜು.21(ಎಂಕೆ)– ಲೇಖಕರಾದ ಡಾ. ಹೊಂಬಯ್ಯ ಹೊನ್ನಲಗೆರೆ ಹಾಗೂ ಶ್ರೀನಾಥ ಬಿ.ಕಾಂಬಳೆ ರಚಿತ 'ಹೊಸಗನ್ನಡ ಸಾಹಿತ್ಯ ಚರಿತ್ರೆ: ಪಂಥಗಳು' ಕೃತಿಯನ್ನು ಸೋಮವಾರ ಬಿಡುಗಡೆ ಮಾಡಲಾಯಿತು.



ಮಾನಸಗಂಗೋತ್ರಿಯ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಡಾ.ಹೊಂಬಯ್ಯ ಹೊನ್ನಲಗೆರೆ, ಶ್ರೀನಾಥ ಬಿ.ಕಾಂಬಳೆ ಅವರ ಹೊಸಗನ್ನಡ ಸಾಹಿತ್ಯ ಚರಿತ್ರೆ:ಪಂಥಗಳು ಕೃತಿಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಬಿಡುಗಡೆ ಮಾಡಿದರು.

ಮೈಸೂರು ವಿವಿ ಪ್ರಸಾರಂಗದ ಕುವೆಂಪು ಸಭಾಂಗಣದಲ್ಲಿ ಕರ್ನಾಟಕ ಜಾನಪದ ಸಂಶೋಧಕರ ಒಕ್ಕೂಟದ ಸಹಯೋಗದೊಂದಿಗೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪ್ರಸಾರಂಗದ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು ಕೃತಿಯನ್ನು ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಹೊಸಗನ್ನಡ ಸಾಹಿತ್ಯ ಪರಂಪರೆಯ ಹೂರಣವೆ ವಸ್ತು ವೈವಿಧ್ಯತೆಯಾಗಿದೆ. ಪೂರ್ವದ ಹಳಗನ್ನಡ, ಹಳಗನ್ನಡದ ವಸ್ತು ಮತ್ತು ಆಶಯ ರಾಜಮಹಾರಾಜರ ಪ್ರಭುತ್ವದ ಮಹತ್ವವನ್ನು ಸಾರಿದರೆ, ಹೊಸಗನ್ನಡ ಸಾಹಿತ್ಯವೂ ಜನ ಸಾಮಾನ್ಯರ ಧ್ವನಿಯಾಗಿ ನೆಲೆ ನಿಂತಿದೆ. ಸಾಮಾನ್ಯ ಜನರು ಬರೆಯುವ ಹಾಗೂ ಓದುವ ಸಾಹಿತ್ಯವೆಂದರೆ ಅದು ಹೊಸಗನ್ನಡ ಸಾಹಿತ್ಯ. ಇಲ್ಲಿ ದಲಿತ, ಹಿಂದುಳಿದ, ಆದಿವಾಸಿ ಮತ್ತು ಮಹಿಳಾ ಸಂವೇದನೆ ಜೀವಂತವಾಗಿ ಹರಿದು ಬಂದಿದೆ ಎಂದು ಹೇಳಿದರು.

ದನಿ ಇಲ್ಲದ ಅಲಕ್ಷಿತರು ಸೇರಿದಂತೆ ಎಲ್ಲಾ ಸ್ತರದ ಜನರನ್ನೂ ಹೊಸಗನ್ನಡ ಸಾಹಿತ್ಯ ಮುಖಾಮುಖಿಯಾಗಿದೆ. ತಳಸ್ತರದ ಜನರ ಆಶೋತ್ತರಗಳಿಗೆ ಸ್ಪಂದಿಸಿದೆ. ನಾಡು–ನುಡಿಯ ಅಭಿಮಾನ, ದೇಶಾಭಿಮಾನ, ಚಳವಳಿ, ಪ್ರತಿಭಟನೆ, ವೈಜ್ಞಾನಿಕ, ರಾಜಕೀಯ ಮತ್ತು ಸಾಮಾಜಿಕ ಕೊಡುಗೆಗಳ ಹಿನ್ನೆಲೆಯಲ್ಲಿ ಹಲವು ವಿಚಾರಗಳನ್ನು ಕೃತಿಯಲ್ಲಿ ದಾಖಲು ಮಾಡಲಾಗಿದೆ ಎಂದು ತಿಳಿಸಿದರು.

ಹೊಸಗನ್ನಡ ಸಾಹಿತ್ಯ ವಿವಿಧ ಪ್ರಕಾರದ ಮಜಲನ್ನು ಹೊಂದಿದ್ದು, ಸಮೃದ್ಧ ಅಭಿವ್ಯಕ್ತಿಯಾಗಿ ಬೆಳೆದಿದೆ. ಅತ್ಯಂತ ವಿಸ್ತಾರವೂ ಸಮೃದ್ಧವೂ ಆದ ಹೊಸ ಕನ್ನಡ ಸಾಹಿತ್ಯವನ್ನು 270 ಪುಟಗಳಲ್ಲಿ ಲೇಖಕರು ಸಂಗ್ರಹ ಮಾಡಿದ್ದಾರೆ. ಇದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ವಿದ್ಯಾರ್ಥಿಗಳಿಗೆ ಉತ್ತಮ ಕೈಪಿಡಿಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಬ್‌ಇನ್ಸ್‌ಪೆಕ್ಟರ್ ಟಿ.ಎಸ್.ಮಹೇಂದ್ರ ಮಾತನಾಡಿ, ಪುಸ್ತಕದ ಮೇಲೆ ನಂಬಿಕೆಯಿಟ್ಟರೆ ಆ ಪುಸ್ತಕಗಳೇ ನಮಗೆ ಹೊಸದಾರಿ ತೋರುತ್ತವೆ. ಮೊಬೈಲ್ ಬಳಕೆ ಕಡಿಮೆ ಮಾಡಿ ಯಶಸ್ಸನ್ನು ದಕ್ಕಿಸಿಕೊಳ್ಳಿ ಎಂದು ಸಲಹೆ ನೀಡಿದರೆ, ಲೇಖಕ ಶ್ರೀನಾಥ್ ಬಿ. ಕಾಂಬಳೆ ಮಾತನಾಡಿ, ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗೆ ಪೂರಕವಾದ ಅಂಶಗಳನ್ನು ಈ ಕೃತಿಯಲ್ಲಿ ಅಡಕಗೊಳಿಸಲಾಗಿದೆ ಎಂದು ತಿಳಿಸಿದರು. ಪತ್ರಕರ್ತ ವಿನೋದ್ ಮಹದೇವಪುರ, ಸಂಚಾಲಕ ಡಾ.ಹೆಚ್.ಪಿ. ಮಂಜು, ಪ್ರಸಾರಾಂಗದ ಅಧೀಕ್ಷಕ ಚನ್ನಬಸಪ್ಪ, ಸಹಾಯ ನಿರ್ದೇಶಕ ಅನಿಲ್ ಕುಮಾರ್, ಮುದ್ರಣಾಲಯದ ನಿರ್ದೇಶಕ ಸತೀಶ್, ಶಿವಲಿಂಗೇಗೌಡ, ತಲಕಾಡು ನಾಗರಾಜ್, ಶಂಕರ್, ವಿಶ್ವನಾಥ್ ಮತ್ತಿತರರಿದ್ದರು.

> ಹೊಸಗನ್ನಡ ಸಾಹಿತ್ಯವು 19ನೇ ಶತಮಾನದ ಅರುಣೋದಯ ಕಾಲದಿಂದ ಪ್ರಾರಂಭಗೊಂಡು 21ನೇ ಶತಮಾನದ ಇಂದಿನವರೆಗೂ ಬೆಳೆದು ಬಂದಿದೆ. ನವೋದಯ, ಪ್ರಗತಿಶೀಲ, ನವ್ಯ, ದಲಿತ ಬಂಡಾಯ ಹಾಗೂ ಮಹಿಳಾ ಸಾಹಿತ್ಯದ ಪ್ರೇರಣೆ ಧೋರಣೆ ಮತ್ತು ಸ್ವರೂಪ ಲಕ್ಷಣಗಳನ್ನು 'ಹೊಸಗನ್ನಡ ಸಾಹಿತ್ಯ ಚರಿತ್ರೆ: ಪಂಥಗಳು' ಕೃತಿ ಒಳಗೊಂಡಿದೆ. ಎಸ್‌ಡಿಎ, ಎಫ್‌ಡಿಎ, ಪ್ರೌಢಶಾಲಾ ಶಿಕ್ಷಕರ ಹಾಗೂ ಕನ್ನಡ ಉಪನ್ಯಾಸಕರ ನೇಮಕಾತಿಗೆ ಉಪಯುಕ್ತವಾಗುವ ರೀತಿಯಲ್ಲಿ ಸಿದ್ಧಗೊಂಡಿದೆ.
> – ಡಾ.ಹೊಂಬಯ್ಯ ಹೊನ್ನಲಗೆರೆ, ಲೇಖಕ

ಮಣಿಪಾಲ್ ಆಸ್ಪತ್ರೆಯಲ್ಲಿ ಸ್ನಾಯು ಸಂಬಂಧಿ ಕಾಯಿಲೆ ಕುರಿತು ಅರಿವು ಕಾರ್ಯಕ್ರಮ

110ಕ್ಕೂ ಹೆಚ್ಚು ಹಿರಿಯ ನಾಗರಿಕರು ಭಾಗಿ ; ಪ್ರಾತ್ಯಕ್ಷಿಕೆಯೊಂದಿಗೆ ಮಹತ್ವದ ವಿಚಾರ ತಿಳಿಸಿದ ತಜ್ಞರು

ಮೈಸೂರು,ಜು.21(ಪಿಎಂ)- ಮೈಸೂರಿನ ಮಣಿಪಾಲ್ ಆಸ್ಪತ್ರೆ ವತಿಯಿಂದ ಭಾನುವಾರ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ ರುಮಾಟಾಲಜಿ (ಸ್ನಾಯು ಸಂಬಂಧಿ ಕಾಯಿಲೆ) ಮತ್ತು ಹಿರಿಯ ನಾಗರಿಕರ ಆರೋಗ್ಯ ಕುರಿತ ಸಂವಾದ ಕಾರ್ಯಕ್ರಮ ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.

ವಯಸ್ಸಾದಂತೆ ನೋವು ಮತ್ತು ಜಡಯುಕ್ತ ದಿನಚರಿ ಅನಿವಾರ್ಯವೆಂಬ ತಪ್ಪು ಕಲ್ಪನೆ ನಿವಾರಿಸುವುದು, ಸ್ವಯಂ ಪ್ರತಿರಕ್ಷಣಾ ಮತ್ತು ರುಮಾಟಾಲಜಿ ಸಂಬಂಧಿ ಸಮಸ್ಯೆಗಳ ಆರಂಭಿಕ ಪತ್ತೆ, ನಿರ್ವಹಣೆಯ ಮಹತ್ವ ತಿಳಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. 110ಕ್ಕೂ ಹೆಚ್ಚು ಹಿರಿಯ ನಾಗರಿಕರು ಮತ್ತು ಅವರ ಆರೈಕೆದಾರರು ಭಾಗವಹಿಸಿ ಅನೇಕ ವಿಚಾರಗಳನ್ನು ತಜ್ಞರಿಂದ ಕೇಳಿ ತಿಳಿದುಕೊಂಡರು.

ಆಸ್ಪತ್ರೆಯ ಕನ್ಸಲ್ಟೆಂಟ್ ರುಮಾಟಾಲಜಿಸ್ಟ್ (ಕೀಲು ರೋಗತಜ್ಞರು) ಡಾ.ಕೆ.ಎಸ್.ಸಂಗೀತಾ, ನಿರ್ಲಕ್ಷಿಸಲ್ಪಡುವ ಆಯಾಸ, ದೇಹದ ಜಡ, ನಿಶ್ಚಲ ಸ್ಥಿತಿ ಅಥವಾ ನೋವುಗಳಂತಹ ಸಮಸ್ಯೆಗಳ ಬಗ್ಗೆ ಅವರು ಮಾಹಿತಿ ನೀಡಿದರು. ಆರಂಭಿಕ ರೋಗನಿರ್ಣಯ, ವೈಯಕ್ತಿಕ ಚಿಕಿತ್ಸೆ ಮತ್ತು ಬಹು-ವಿಭಾಗೀಯ ಆರೈಕೆಯಿಂದ ಹಿರಿಯ ನಾಗರಿಕರು ಚಲನಶೀಲ ಮತ್ತು ಹೆಚ್ಚು ಸ್ವಾವಲಂಬಿಯಾಗಿರಲು ಸಾಧ್ಯ. ಸರಿಯಾದ ಜ್ಞಾನ, ಸಹಾಯಕ ಆರೈಕೆ ಮತ್ತು ಸಕ್ರಿಯ ಮನೋಭಾವದಿಂದ ಹಿರಿಯ ನಾಗರಿಕರು ಆರೋಗ್ಯಕರ ಮತ್ತು ಚಲನಶೀಲ ಜೀವನ ನಡೆಸಬಹುದು ಎಂದು ಹೇಳಿದರು.



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಹಿರಿಯ ನಾಗರಿಕರ ಆರೋಗ್ಯ ಕುರಿತು ತಜ್ಞವೈದ್ಯರ ಜೊತೆಗಿನ ಸಂವಾದ ಕಾರ್ಯಕ್ರಮ ನಡೆಯಿತು.

ಬಳಿಕ ಫಿಸಿಯೋಥೆರಪಿಸ್ಟ್ ಇಸ್ಮಾಯಿಲ್ ಅವರು ಹಿರಿಯ ನಾಗರಿಕರು ಸುಲಭವಾಗಿ ಮಾಡಬಹುದಾದ ಹಾಗೂ ನಿಖರ ಫಲಿತಾಂಶ ನೀಡುವ ವ್ಯಾಯಾಮಗಳ ಕುರಿತು ಪ್ರಾತ್ಯಕ್ಷಿಕೆ ನೀಡಿದರು. ಅವುಗಳು ದೇಹ ಸಡಿಲವಾಗಿರಲು ಮತ್ತು ಕೀಲುಗಳ ಆರೋಗ್ಯ ಸುಧಾರಿಸಲು ಹೇಗೆ ನೆರವಾಗುತ್ತವೆ ಎಂದು ಇದೇ ವೇಳೆ ಅವರು ಮಾಹಿತಿ ನೀಡಿದರು.

ಕೀಲುಗಳ ಆರೋಗ್ಯಕ್ಕೆ ಸೂಕ್ತ ಆಹಾರ: ದೈನಂದಿನ ಪದಾರ್ಥಗಳನ್ನು ಬಳಸಿ ಉರಿಯೂತ ನಿವಾರಕ ಪಾಕವಿಧಾನಗಳನ್ನು ತಯಾರಿಸುವ ಕುರಿತು ಆಸ್ಪತ್ರೆಯ ಆಹಾರ ಮತ್ತು ಪೌಷ್ಟಿಕತೆ ತಂಡ ಪ್ರಾತ್ಯಕ್ಷಿಕೆ ನೀಡಿತು. ಕೀಲು ಮತ್ತು ಮೂಳೆಗಳ ಆರೋಗ್ಯಕ್ಕೆ ಅಗತ್ಯವಾದ ಪೌಷ್ಟಿಕ ಆಹಾರದ ಬಗ್ಗೆ ಪ್ರಾಯೋಗಿಕ ಸಲಹೆಗಳನ್ನೂ ನೀಡಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದವರು ತಜ್ಞರೊಂದಿಗೆ ಸಂವಾದ ನಡೆಸಿ ತಮ್ಮ ಆರೋಗ್ಯ ಸಮಸ್ಯೆಗಳಿಗೆ ಸೂಕ್ತ ಮಾರ್ಗದರ್ಶನ ಪಡೆದರು.







ಬಸವಣ್ಣನವರ ಸುಧಾರಣೆ ಅಧ್ಯಯನ, ಸಂಶೋಧನೆಗೆ ಎಐಸಿಟಿಇ ಒತ್ತಾಯ

ಬೆಂಗಳೂರು, ಜು.21- ಇಡೀ ಜಗತ್ತು ಗೌರವಿಸುವ ಹಾಗೂ ಎಲ್ಲಾ ಜನಾಂಗದವರು ಒಪ್ಪಿಕೊಳ್ಳುವ 12ನೇ ಶತಮಾನದ ಸಾಮಾಜಿಕ ಹರಿಕಾರ ಜಗಜ್ಯೋತಿ ಬಸವಣ್ಣನವರ ಬೋಧನೆಗಳು ಇಂದಿಗೂ ಪ್ರಸ್ತುತ. ಹೀಗಾಗಿ ಅವರ ಚಿಂತನೆಗಳನ್ನು ತಾಂತ್ರಿಕ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ಎಐಟಿಸಿಇ ಅನುಮೋದಿತ ಸಂಸ್ಥೆಗಳ ಉಪಕುಲಪತಿಗಳು, ಬಸವಣ್ಣನವರ ಆಡಳಿತ ಮಾದರಿಗಳು ಮತ್ತು ಸಾಮಾಜಿಕ ಸುಧಾರಣಾ ಕಾರ್ಯಸೂಚಿಯನ್ನು ಸಕ್ರಿಯವಾಗಿ ಪ್ರಚಾರ ಮಾಡುವಂತೆ ಮತ್ತು ಸಂಶೋಧಿಸುವಂತೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಟಿಸಿಇ) ಒತ್ತಾಯಿಸಿದೆ.

ಭಾರತ ಸರ್ಕಾರದ ಶಿಕ್ಷಣ ಸಚಿವಾಲಯದ ಅಡಿಯ ಉನ್ನತ ಶಿಕ್ಷಣ ಇಲಾಖೆಯ ಸಂವಹನದಲ್ಲಿ, ಆಧುನಿಕ ಭಾರತಕ್ಕಾಗಿ ಬಸವೇಶ್ವರರ ಬೋಧನೆಗಳನ್ನು ಜಗತ್ತಿಗೆ ತಿಳಿಸುವಂತೆ ಶಿಕ್ಷಣ ಸಂಸ್ಥೆಗಳಿಗೆ ಎಐಟಿಸಿಇ ಒತ್ತಾಯಿಸಿದೆ. ಭಾರತವು ಸಮಗ್ರ ಅಭಿವೃದ್ಧಿ, ಸಾಮಾಜಿಕ ನ್ಯಾಯ ಮತ್ತು ವಿಕೇಂದ್ರೀಕೃತ ಆಡಳಿತದ ಹೊಸ ಮಾದರಿಗಳನ್ನು ಹುಡುಕುತ್ತಿರುವ ಸಮಯದಲ್ಲಿ ಕವಿ-ಸಂತ ಬಸವೇಶ್ವರರ ಆಮೂಲಾಗ್ರ ವಿಚಾರಗಳನ್ನು ದೇಶದ ಉನ್ನತ ಶಿಕ್ಷಣ ಸಂಸ್ಥೆಗಳು ಪುನರುಜ್ಜೀವನಗೊಳಿಸುತ್ತಿವೆ ಮತ್ತು ಸಂಶೋಧಿಸುತ್ತಿವೆ.

ಬಸವೇಶ್ವರರ ತತ್ವಶಾಸ್ತ್ರದ ಕುರಿತು ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಮತ್ತು ಸಂಶೋಧನಾ ಯೋಜನೆಗಳು, 'ಲೋಕ ಸಂಸದ್' ಸ್ಥಳೀಯ ಆಡಳಿತದ ಪರಿಕಲ್ಪನೆಯ ಪರಿಶೋಧನೆ, ಸಾಮಾಜಿಕ ಸಮಾನತೆ, ಲಿಂಗ ಸಮಾನತೆ ಮತ್ತು ಜಾತಿ ತಾರತಮ್ಯ ಮತ್ತು ಮೂಢನಂಬಿಕೆಗಳ ನಿರ್ಮೂಲನೆಗಾಗಿ ಅವರ ಹೋರಾಟದ ಕುರಿತಾದ ವಚನಗಳ ಬಗ್ಗೆ ಅಧ್ಯಯನ ನಡೆಸಲು ಎಐಟಿಸಿಇ ಕರೆ ನೀಡಿದೆ.

ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿ.,

ಗಾಂಧಿಚೌಕ, ಮೈಸೂರು. ದೂ: 0821-2521631

ಟೆಂಡರ್ ಪ್ರಕಟಣೆ

ಬ್ಯಾಂಕಿನ 2024-2025ನೇ ಸಾಲಿನ ವಾರ್ಷಿಕ ಮಹಾಸಭೆ ಅಂಗವಾಗಿ ಸುಮಾರು 35 ಪುಟಗಳ ವರದಿ ಪುಸ್ತಕಗಳ ಮುದ್ರಣಕ್ಕಾಗಿ ಕೊಟೇಷನ್‌ಗಳನ್ನು ಕರೆಯಲಾಗಿದೆ. ಸದರಿ ಕೊಟೇಷನ್‌ಗಳನ್ನು ದಿನಾಂಕ:29.07.2025ರ ಮಂಗಳವಾರ ಸಂಜೆ: 05.00 ಘಂಟೆಯೊಳಗೆ ರೂ.5000/- (ಐದು ಸಾವಿರ)ಗಳ ಠೇವಣಿಯೊಂದಿಗೆ ಅಂಟಿಸಿದ ಲಕೋಟೆಯಲ್ಲಿ ಬ್ಯಾಂಕಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗೆ ಸಲ್ಲಿಸತಕ್ಕದ್ದು, ಈ ಬಗ್ಗೆ ಹೆಚ್ಚಿನ ವಿವರಗಳನ್ನು ಬ್ಯಾಂಕಿನ ಪ್ರಕಟಣಾ ಫಲಕದಲ್ಲಿ ಲಗತ್ತಿಸಲಾಗಿದೆ ಹಾಗೂ ವಿವರಗಳಿಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರನ್ನು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಸಂಪರ್ಕಿಸಿರಿ.

ಸಹಿ/-
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಮುಖ್ಯ ಕಾರ್ಯನಿರ್ವಹಣಾಧಿಕಾರಿ
ಮೊ: 9148037007

PUBLIC NOTICE

Notice is hereby issued to the General Public that **Dr. ZULFIKHAR AHMED** S/o. Mr. Abdul Wajid, Residing at No. # 42, 7th Cross, 1st Stage, Mahadevapura Road, Udayagiri, Mysuru - 570 019 has agreed to Sell the Schedule Property to my client/s.

Any person/s asserting any right, title, interest or claim, pending litigation or demand of any nature in or upon the schedule property or any part thereof, the same may be brought to the notice of the undersigned along With documentary evidence at **# L-50/2A, 1st Floor, Ashoka Road, Mysuru-570001 within SEVEN (07) days** from the date of this Public Notice, failing which such claim/s shall be considered to have been waived and/or given up and my client/s shall be entitled to complete the sale transaction that there are no claim/s of whatsoever nature with respect of the schedule property.

SCHEDULE

All that piece and parcel of property bearing No. 310, measuring East to West 18.60 meters and North to South 12 meters totally measuring 223.20 Square Meters, situated at Sathagally Layout, 1st Stage, Nazarbad Mohalla, Mysuru & bounded on: East by : Private Layout; West by : Road; North by: Property bearing No.309 & South by : Property bearing No. 311.

Sd/- SANJAY JAIN, BBM, LL.B., CCL, CMJFS,
Advocate,
L-50/2A, 1st Floor, Ashoka Road,
Mysuru-570 001.
Email: msj186@yahoo.co.in
Mob : 93414 64636
Date: 21.07.2025, Place: Mysuru



ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ - ಮೈಸೂರು ತಾಲ್ಲೂಕು ಪಂಚಾಯತ್ ಹುಣಸೂರು

ಚಿಕ್ಕಬೀಚನಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯ

ಚಿಕ್ಕಬೀಚನಹಳ್ಳಿ ಗ್ರಾಮ ಮತ್ತು ಅಂಚೆ, ಬಿಳಿಕೆರೆ ಹೋಬಳಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ

ಸಂ:ಚಿಗ್ರಾಪ/RGSK ಟೆಂಡರ್/2025-26 ದಿನಾಂಕ: 18.07.2025


ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2023-24ನೇ ಸಾಲಿನ ಮಹಾತ್ಮಗಾಂಧಿ NREGA ಯೋಜನೆ ಅನುಮೋದಿತ ಕ್ರಿಯಾಯೋಜನೆಯಲ್ಲಿ ಈ ಕೆಳಕಾಣಿಸಿದ ಕಾಮಗಾರಿಗೆ ಅರ್ಹ MGNREGA MIS Software ನಲ್ಲಿ ನೋಂದಾಯಿತ ಸರಬರಾಜುದಾರರು ದ್ವಿ-ಲಕೋಟೆ ಪದ್ಧತಿಯಲ್ಲಿ ಆನ್‌ಲೈನ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಈ ಬಗ್ಗೆ ಸಂಕ್ಷಿಪ್ತ ವಿವರ ಈ ಕೆಳಗಿನಂತಿದೆ.

ಟೆಂಡರ್ ಪ್ರಕಟಣೆ ದಿ: 18.07.2025 **ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ:** 02.08.2025 ಸಂಜೆ 04.00 **ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ:** 04.08.2025 ಬೆಳಿಗ್ಗೆ 11.00 **ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ:** 06.08.2025 ಬೆಳಿಗ್ಗೆ 11.00

ಕ್ರ.ಸಂ. 01 ಕಾಮಗಾರಿ ಹೆಸರು: ಚಿಕ್ಕಬೀಚನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ RGSK ಕಟ್ಟಡ ನಿರ್ಮಾಣ ಕಾಮಗಾರಿ ಅನುಷ್ಠಾನಕ್ಕಾಗಿ ಸಾಮಾಗ್ರಿ ಖರೀದಿ. **ಟೆಂಡರ್‌ಗಿಟ್ಟ ಮೊತ್ತ ರೂ.:** 2233467 **ಇ.ಎಂ.ಡಿ. ಮೊತ್ತ:** 44700/- ಟೆಂಡರ್ ವಿವರಗಳನ್ನು http://kppp.karnataka.gov.in ರಲ್ಲಿ ಡೌನ್‌ಲೋಡ್ ಮಾಡಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಗ್ರಾಮ ಪಂಚಾಯತ್ ಕಾರ್ಯಾಲಯ, ಚಿಕ್ಕಬೀಚನಹಳ್ಳಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/- ಪಂಚಾಯತ್ ಅಭಿವೃದ್ಧಿ ಅಧಿಕಾರಿ





ಕಾವೇರಿ ನೀರಾವರಿ ನಿಗಮ ನಿಯಮಿತ,

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಅಭಿಯಂತರರು ಕಛೇರಿ, ಕಬಿನಿ ನಾಲಾ ವಿತರಣಾ ವಿಭಾಗ, ತಿ. ನರಸೀಪುರ-571124, ಮೈಸೂರು ಜಿಲ್ಲೆ.
Ph: 08227-261362 E-Mail eekcdtnp@yahoo.com

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ.: 06/2025-26 ದಿ: 16.07.2025

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ. ಬೆಂಗಳೂರು, ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕಬಿನಿ ನಾಲಾ ವಿತರಣಾ ವಿಭಾಗ, ತಿ.ನರಸೀಪುರ ಇವರು ಟಗರಪುರ ಅಡ್ಡಹಳ್ಳ ಪಿಕ್‌ಅಪ್ ನಿರ್ಮಾಣ ಹಾಗೂ ಮೂಗೂರು ಅಡ್ಡಹಳ್ಳ ಪಿಕ್‌ಅಪ್ ನಿರ್ಮಾಣಕ್ಕಾಗಿ ಸರ್ವೆ ಕಾರ್ಯ ಕೈಗೊಂಡು ವಿಸ್ತೃತ ಯೋಜನಾ ವರದಿ ತಯಾರಿಸಲು ಸರ್ಕಾರಿ ಸ್ವಾಮ್ಯದ ಇಲಾಖೆಯಲ್ಲಿ ನೊಂದಣಿಯಾಗಿರುವ ಮತ್ತು Registrar of Companies / Minister of Micro, Small and medium Enterprises ರಲ್ಲಿ ನೋಂದಾಯಿಸಲ್ಪಟ್ಟ ಹಾಗೂ ಸೂಕ್ತ ಚಾಲ್ತಿ ISO ಪರವಾನಿಗೆ ಹೊಂದಿರುವ ಸಮಾಲೋಚಕರಿಂದ ಶೇಕಡಾವಾರು ದರದ ಟೆಂಡರ್‌ಗಳನ್ನು ಕೆಪಿಪಿಪಿ ಪೋರ್ಟಲ್‌ನಲ್ಲಿ ಆಹ್ವಾನಿಸಲಾಗಿದೆ. ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ.8.36 ಲಕ್ಷಗಳು ಹಾಗೂ ಟೆಂಡರ್‌ಗಿಟ್ಟ ಗರಿಷ್ಟ ಮೊತ್ತ ರೂ.8.45 ಲಕ್ಷಗಳು. ಪ್ರೊಸೆಸಿಂಗ್ ಶುಲ್ಕವನ್ನು ಇ-ಪೇಮೆಂಟ್ ಮೂಲಕ ಸಂದಾಯ ಮಾಡುವುದು. ಟೆಂಡರ್ ಕ್ವಾರಿಸ್ / ಕ್ಲ್ಯಾರಿಫಿಕೇಷನ್ ಕೊನೆಯ ದಿ: 22.07.2025 ಮಧ್ಯಾಹ್ನ 4.00 ಗಂಟೆವರೆಗೆ. ಆನ್ ಲೈನ್ ಮೂಲಕ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿ:23.07.2025 ಸಾಯಂಕಾಲ 5.00 ಗಂಟೆಯವರೆಗೆ ಟೆಂಡರ್‌ಗಳನ್ನು ತೆರೆಯುವ ದಿ:24.07.2025 ಬೆಳಿಗ್ಗೆ 5.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ: https://kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಕಾವೇರಿ ನೀರಾವರಿ ನಿಗಮ ನಿಯಮಿತ, ಕಬಿನಿ ನಾಲಾ ವಿತರಣಾ ವಿಭಾಗ, ಟಿ. ನರಸೀಪುರ.
DIPR/DDMYS/659/KSMCA/376/2025-26

ನಗರಸಭಾ ಕಾರ್ಯಾಲಯ, ಹುಣಸೂರು

CITY MUNICIPAL COUNCIL HUNSUR
ಮೈಸೂರು ಜಿಲ್ಲೆ - 571105
E-mail : ka.hunsur.cmc@gmail.com ಫೋನ್: 08222-252048

ಸಂ: ಹುನಕಾ/ಆಶಾ/ಪಿ.ಆರ್/ /2025-26 ದಿನಾಂಕ: 21-07-2025

ಆಸಕ್ತಿ ಅಭಿವ್ಯಕ್ತಿ (EXPRESSION OF INTEREST)

ಹುಣಸೂರು ನಗರಸಭೆಯಲ್ಲಿ 31 ವಾರ್ಡ್‌ಗಳಲ್ಲಿ 3 ವರ್ಷಗಳ ಅವಧಿಗೆ ಪೂರ್ಣ ಸಮಯದ ಪಾತ್ರದಅಡಿಯಲ್ಲಿ IEC ಚಟುವಟಿಕೆಗಳನ್ನು ಕೈಗೊಳ್ಳಲು ಡೇ-ನಲ್ಮ್ ಯೋಜನೆಯಡಿ ನೋಂದಾಯಿತ SHG ಸದಸ್ಯರಿಂದ "ಆಸಕ್ತಿ ಅಭಿವ್ಯಕ್ತಿ" ಯನ್ನು ಅಹ್ವಾನಿಸಿದ್ದು, Day-NULM ನಲ್ಲಿ ನೋಂದಾಯಿಸಿಕೊಂಡಿರುವ ಆಸಕ್ತ SHG ಸದಸ್ಯರು ತಮ್ಮ ಆಸಕ್ತಿಯ ಅಭಿವ್ಯಕ್ತಿಯನ್ನು www.hunsurcity.mrc.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುವ ನಿಗದಿತ ನಮೂನೆಯಲ್ಲಿ ದಿನಾಂಕ: 5-08-2025ರ ಸಂಜೆ 5-00 ಗಂಟೆಯ ಒಳಗಾಗಿ ಅವಶ್ಯ ದಾಖಲೆಗಳೊಂದಿಗೆ ನಿಗದಿತ ಅರ್ಜಿಯನ್ನು ಇಮೇಲ್ ವಿಳಾಸ ka.hunsur.cmc@gmail.com ಕಳುಹಿಸತಕ್ಕದ್ದು, ಆಸಕ್ತ SHG ಸದಸ್ಯರು 1. ಗುರುತಿನ ಪುರಾವೆ, 2. ವಿಳಾಸ ಪುರಾವೆ, 3. ಎಂಪನೇಲ್ಡ್ ದಾಖಲೆಗಳು 4. ಶೈಕ್ಷಣಿಕ ಅರ್ಹತೆ, 5. ಕಂಪ್ಯೂಟರ್ ಜ್ಞಾನ ಹೊಂದಿರುವ ಬಗ್ಗೆ ದಾಖಲೆ 6. Day-NULM ದೃಢೀಕರಣ ಪತ್ರದ ನಮೂನೆಯನ್ನು ಸಹ ಲಗತ್ತಿಸಬೇಕು. ಆಯ್ಕೆಯಾದ ಅಭ್ಯರ್ಥಿಗಳನ್ನು ಅವರ ಕೌಶಲ್ಯವನ್ನು ನಿರ್ಣಯಿಸಲು ವಿಷಯದ ಬಗ್ಗೆ ತಿಳುವಳಿಕೆಗಾಗಿ ಸಂದರ್ಶನಕ್ಕೆ ಕರೆಯಲಾಗುವುದು.

ಕ್ರ.ಸಂ	ವಿವರ	ಅರ್ಜಿ ಸಲ್ಲಿಸಲು ಅರ್ಹತೆ	ಅವಶ್ಯ ಸಂಖ್ಯೆ	ಸರ್ಕಾರದಿಂದ ನಿಗದಿಪಡಿಸಿರುವ ಗೌರವ ಧನ ರೂ.ಗಳಲ್ಲಿ
1)	ಕಮ್ಯುನಿಟಿ ಮೊಬಿಲೈಜರ್ (COMMUNITY MOBILIZER)	1) ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ಪಾಸ್ ಆಗಿರಬೇಕು, ಕಡ್ಡಾಯವಾಗಿ ಕನ್ನಡ ಮಾಧ್ಯಮದಲ್ಲಿ ಕೆಲಸ ನಿರ್ವಹಿಸುವವರಿಗೆ ಹಾಗೂ ಕಂಪ್ಯೂಟರ್ ಜ್ಞಾನ ಹೊಂದಿರುವವರಿಗೆ ಆದ್ಯತೆ. 2) ಹುಣಸೂರು ನಗರ ಸಭೆಯಲ್ಲಿ Day-NULM ಶಾಖೆಯಲ್ಲಿ ನೊಂದಾಯಿತ ಸ್ವ-ಸಹಾಯ ಗುಂಪಿನ ಸದ್ಯಸರು (SHG)	1	ರೂ. 18339.92/- (ಪ್ರತಿ ತಿಂಗಳಿಗೆ)

ಅಧ್ಯಕ್ಷರು ನಗರಸಭೆ ಹುಣಸೂರು | ಉಪಾಧ್ಯಕ್ಷರು ನಗರಸಭೆ, ಹುಣಸೂರು | ಅಧ್ಯಕ್ಷರು/ಸ್ಥಾಯಿ ಸಮಿತಿ ನಗರಸಭೆ, ಹುಣಸೂರು | ಪೌರಾಯುಕ್ತರು ನಗರಸಭೆ, ಹುಣಸೂರು